
ಕಲ್ಯಾಣ ಕಿರಣ

ಡಿಸೆಂಬರ್-2001

ಬೆಲೆ : ರೂ. 5-00



ಹೂವಿನಿಂದ ಅಲಂಕೃತಗೊಂಡ ಬಸವ ರಥದಲ್ಲಿ ಉಭಯ ಮಹಿಳಾ ಜಗದ್ಗುರುಗಳು.
ದೊಡ್ಡಬಳ್ಳಾಪುರ ವರ್ತಕರ ಸಂಘದ ಮಾಜಿ ಅಧ್ಯಕ್ಷರಾದ ಶರಣ ಪುಟ್ಟರುದ್ರಪ್ಪ ಹಾಗೂ ಅವರ



ಪೋಲೀಸ್ ಇನ್ಸ್‌ಪೆಕ್ಟರ್ ಲೋಕೇಶ್ವರ ಅವರು ಬಸವ ಧ್ವಜಾರೋಹಣ ಮಾಡುತ್ತಿರುವುದು. ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿಯವರು ನೇತೃತ್ವ ವಹಿಸಿದ್ದಾರೆ.



ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಪೂಜ್ಯ ಮಾತಾಜಿಯವರ ಪರಿಚಯ ಭಾಷಣ ಮಾಡುತ್ತಿರುವ ಪೂಜ್ಯ ಗಂಗಾ ಮಾತಾಜಿ, ಶರಣರಾದ ಪುಟ್ಟರುದ್ರಪ್ಪ, ಬಸವರಾಜ್, ಟಿ.ಎಸ್. ದಯಾಶಂಕರ್, ಪೋಲೀಸ್ ಇನ್ಸ್‌ಪೆಕ್ಟರ್ ಲೋಕೇಶ್ವರ ಬಿ.ಆರ್. ಸುಬ್ರಹ್ಮಣ್ಯಂ.

ಓಂ ಶ್ರೀ ಗುರುಬಸವಲಿಂಗಾಯ ನಮಃ

86666

ಓಂಕಾರ ಸ್ವರೂಪಿಯಾದ ಲಿಂಗದೇವನಿಗೂ, ಲಿಂಗದೇವನ ಪ್ರತಿನಿಧಿಯಾದ ಗುರು ಬಸವಣ್ಣನವರಿಗೂ ನಮನಗಳು

8	6	6	6	6
ಅಷ್ಟಾವರಣ	ಷಡಾಚಾರ	ಷಟಸ್ಥಲ	ಷಟ್‌ಸೂತ್ರ	ಷಟ್‌ಶೀಲ

ಬಸವ ಧರ್ಮದ ಕಿರಣವಾಗಲು ಬಾ

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ ॥ ಪ ॥

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು ॥ 1 ॥

ಅಂಗವೆನೆ ಜೀವಾತ್ಮ ಲಿಂಗವೆನೆ ಪರಮಾತ್ಮ
ಲಿಂಗಾಂಗ ಸಮರಸವೆ ಜೀವನದ ಗುರಿಯು
ಬಸವ ಗೀತೆಯ ಸಾರ ಇದುವೆ ಆಗಿಹುದು
ಲಿಂಗದೇವನ ಎಡೆಗೆ ಕರೆದೊಯ್ಯುತಿಹುದು ॥ 2 ॥

ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕ್ಕೆಲ್ಲ ಪಸರಿಸುವಾ ॥ 3 ॥

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥ 4 ॥

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಮಡಿವಾಳ ಮಾಚಯ್ಯನವರ ಕಾಲಜ್ಞಾನ

ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ
ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಆನಂದ ಕಡೆಯಾಟ ಜರಿಯಲು ಬೇಡ, ಶಿವನ ಡಂಗುರವೆಂದು ಕರವೆತ್ತಿ ಕೂಗಿ ॥

www.Lingayathism.com

ಕಲ್ಯಾಣ ಕಿರಣ

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 12	ಡಿಸೆಂಬರ್ 2001	ವಾರ್ಷಿಕ ಚಂದಾ 50/- ರೂ.

ಶರಣ ವ್ರತ ಸ್ವೀಕಾರದ ದಿನಗಳು

1. ಗುರು ಸಾರಾಯ ಸಂಪದ್ ವ್ರತ	: 40 ದಿವಸಗಳ ವ್ರತ	: ಡಿಸೆಂಬರ್ 6
2. ಲಿಂಗ ಸಾರಾಯ ಸಂಪದ್ ವ್ರತ	: 30 ದಿವಸಗಳ ವ್ರತ	: ಡಿಸೆಂಬರ್ 16
3. ಜಂಗಮ ಸಾರಾಯ ಸಂಪದ್ ವ್ರತ	: 20 ದಿವಸಗಳ ವ್ರತ	: ಡಿಸೆಂಬರ್ 26
4. ಪ್ರಸಾದ ಸಾರಾಯ ಸಂಪದ್ ವ್ರತ	: 10 ದಿವಸಗಳ ವ್ರತ	: ಜನವರಿ 5

★ ವೆಬ್ ಸೈಟ್‌ನಲ್ಲಿ ಕಲ್ಯಾಣಕಿರಣ ★
www.Lingayathism.com

KALYAN KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone : 8437234


ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ : ಬಸವ ಮಂಟಪ, 2035 20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕ್ ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335/33227990

ಓಂ ಶ್ರೀ ಗುರುಬಸವಲಿಂಗಾಯ ನಮಃ
86666



ಧರ್ಮಗುರು ಬಸವಣ್ಣ

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹದಿನೈದನೆಯ



ಗಣ ಧ್ವಜ

ಶರಣ ಮೇಳ

2002ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ: ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988 ಜನವರಿ 14, 15 ರಿಂದ 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನೈದನೆಯ ಶರಣ ಮೇಳವು 2002ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ , ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ' ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ದಿ. 11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ - ಧರ್ಮಗಳಿಗೆ ಸಂಬಂಧಪಟ್ಟಂತೆ

ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬನ್ನಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ(ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1.ಮಹಾಪೋಷಕರು	:5000ರೂ.ಮತ್ತು ಮೇಲೆ ಕೊಟ್ಟವರು.	4. ಹಿತೈಷಿಗಳು	: 500ರೂ
2.ಪೋಷಕರು	:2000ರೂ.ಮತ್ತು ಮೇಲೆ ಕೊಟ್ಟವರು.	5. ಸ್ವಾಗತ ಸಮಿತಿ ಸದಸ್ಯತ್ವ	: 250ರೂ
3.ದಾನಿಗಳು	:1000ರೂ.ಮತ್ತು ಮೇಲೆ ಕೊಟ್ಟವರು.	6. ಪ್ರತಿನಿಧಿ ಶುಲ್ಕ:	: 150ರೂ

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ - ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ.ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಶರಣ ಮೇಳ ಉತ್ಸವ ಸಮಿತಿ(ರಿ)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು- 560010
ದೂರವಾಣಿ: 080-3325335/ 3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ - 587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂರವಾಣಿ : 08351-58038/58007


ಮುಸಲ್ಮಾನ್ ಧರ್ಮಿಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನು-ಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ(ಜನವರಿ 14ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ವಿಶೇಷ ಮನವಿ:

ಶರಣ ಬಂಧುಗಳೇ, ಕರ್ನಾಟಕ ರಾಜ್ಯ ಈ ವರ್ಷ ಮಳೆಯ ಕೊರತೆಯಿಂದಾಗಿ ಬರಗಾಲವನ್ನು ಎದುರಿಸುತ್ತಿದೆ. ಮಳೆಯ ಆಶ್ರಯದಲ್ಲಿ ವ್ಯವಸಾಯ ಮಾಡುವವರು, ಕೃಷಿಯ ಕೂಲಿಯನ್ನು ಅವಲಂಬಿಸಿರುವವರು ಭಯಂಕರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಶ್ರೀಮಂತರು, ಕಾಯಂ ಉದ್ಯೋಗಿಗಳು, ನೀರಾವರಿ ಕೃಷಿಯ ಅನುಕೂಲತೆಯುಳ್ಳವರು, ಸರ್ಕಾರಿ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ಅನ್ನ ದಾಸೋಹಕ್ಕೆ ತಮ್ಮ ಕಾಣಿಕೆಯನ್ನು ಸ್ವಯಂ ಪ್ರೇರಣೆಯಿಂದ ನೀಡಿ ಶರಣ ಮೇಳದ ಯಶಸ್ಸಿಗೆ ಸಹಕರಿಸಬೇಕೆಂದು ಕೋರುತ್ತೇವೆ.

ಬಸವ(ಲಿಂಗಾಯತ) ಧರ್ಮದ ಆರು ಸೂತ್ರಗಳು

1.ಧರ್ಮಗುರು	-	ವಿಶ್ವಗುರು ಬಸವಣ್ಣನವರು
2.ಧರ್ಮ ಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
3.ಧರ್ಮ ಲಾಂಛನ	-	ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4.ಧರ್ಮ ಕ್ಷೇತ್ರ	-	ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ
5.ಧರ್ಮಧ್ವಜ	-	ಷಟ್ಕೋನ ಸಹಿತ ಬಸವ ಧ್ವಜ
6.ಧರ್ಮದ ಧ್ಯೇಯ	-	ಜಾತಿವರ್ಣವರ್ಗ ರಹಿತ, ಧರ್ಮಸಹಿತ (ಶರಣ ಸಮಾಜ) ಕಲ್ಯಾಣ ರಾಜ್ಯ ನಿರ್ಮಾಣ.



ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥



ಶರಣ ಮೇಳ ಉತ್ಸವ ನಿರ್ವಹಣಾ ಸಮಿತಿ

ಪ್ರತಿ ವರ್ಷವೂ ಜನವರಿ 11 ರಿಂದ 15 ರವರೆಗೆ ಧರ್ಮಪಿತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಭಕ್ತರ ಸಮಾವೇಶ ಶರಣ ಮೇಳವು ಜರುಗುವುದಷ್ಟೆ. ಅತ್ಯಂತ ಅಸಂಘಟಿತವೂ ಅಜಾಗ್ರತವೂ, ಆಂತರಿಕ ಒಳಜಗಳಗಳಿಂದ ದುರ್ಬಲವಾಗಿರುವ, ಒಳಗುಂಪುಗಳಿಂದ ಜರ್ಜರಿತವಾಗಿರುವ ಲಿಂಗಾಯತ ಸಮಾಜವನ್ನು ಜಾಗೃತಿಸಿ, ಸಂಸ್ಕಾರ ನೀಡಲು ಇರುವ ಏಕೈಕ ಆಶಾ ಕಿರಣ ಶರಣ ಮೇಳ. ಈ ಧರ್ಮದ ಪುನರುಜ್ಜೀವನ, ಈ ಸಮಾಜದ ಪುನಶ್ಚೇತನ ಸಾಧ್ಯವೇ ಇಲ್ಲ ಎಂದು ಹತಾಶರಾಗಿದ್ದ ನಮಗೆ 1988ರಲ್ಲಿ ಮೊಟ್ಟ ಮೊದಲ ಶರಣ ಮೇಳ ನಡೆದಾಗ ಆಶಾಭಾವ ಚಿಗುರಿತು. ಒಂದು ಉತ್ತಮ ಮತ್ತು ವಿಚಾರಶೀಲ ಜನರ ಅರ್ಥಾತ್ ಶರಣರ ಸಮೂಹವನ್ನು ತಯಾರು ಮಾಡಬಹುದೆಂಬ ಭರವಸೆ ಬೆಳೆಯಿತು. ಇದೇ ಸಮಯಕ್ಕೆ ಅನೇಕ ಸಂಪ್ರದಾಯ ಮಠಾಧಿಕಾರಿಗಳ, ಪಟ್ಟಭದ್ರ ಹಿತಾಸಕ್ತರ ಮತ್ತು ಇತ್ತೀಚೆಗೆ ವೀರಶೈವವಾದಿಗಳು ಮತ್ತು ವೀರಶೈವ ಮಹಾಸಭೆಯವರ ಅಸಹನೆ, ವಿರೋಧ ಇದಿರಾಯಿತು. ಆದರೆ ಈಗಾಗಲೇ ಒಂದು ತತ್ತ್ವನಿಷ್ಠರ ಪಡೆ ತಯಾರಾಗಿದ್ದರಿಂದ ಆ ಅಸಹನೆ, ವಿರೋಧವನ್ನು ಕುಡಿದು ಶರಣ ಸಮೂಹ "ಮೃತ್ಯುಂಜಯ" ಪದವಿ ಪಡೆದಿದೆ.

ವೀರಶೈವವಾದಿಗಳನ್ನು ಒಳಗಿಟ್ಟುಕೊಂಡಿರುವ ಲಿಂಗಾಯತ ಸಮಾಜವು ತಾತ್ತ್ವಿಕವಾದ ಅಶುದ್ಧಿ, ವೈದಿಕಾಚರಣೆ, ಜಾತಿಯ ಗುಂಪುಗಳು, ಸಣ್ಣತನ, ಒಳಗಿದ್ದ ಎಲ್ಲರನ್ನು ಹೊರಗಿನಿಂದ ಬಂದವರನ್ನು ಇಂಬಿಟ್ಟುಕೊಳ್ಳುವ ವೈಶಾಲ್ಯತೆ ಹೊಂದಿಲ್ಲದೆ ವಿಕೃತ ಸ್ವರೂಪ ಹೊಂದಿದೆ. ಇದರಿಂದಾಗಿ ಶಿಸ್ತು, ಏಕರೂಪತೆ ಬರುತ್ತಿಲ್ಲ, ಸಂಘಟನಾ ಕಾರ್ಯವು ತೀವ್ರಗತಿಯಲ್ಲಿ ಆಗುತ್ತಿಲ್ಲ. ಈ ಪ್ರಗತಿಪರ ಬೆಳವಣಿಗೆ ಆಗಬಾರದು, ಸಮಾಜವು ಅವ್ಯವಸ್ಥಿತವಾಗಿ, ಅಸಂಘಟಿತವಾಗಿ ಇರುವುದರಲ್ಲೇ ತಮ್ಮ ಸುಭದ್ರತೆ ಇದೆ ಎನ್ನುವ ಬಹುಪಾಲು ಮಠಾಧೀಶರು ಮತ್ತು ಸಮಾಜ ಮುಖಂಡರು ತತ್ತ್ವನಿಷ್ಠರಾಗದೆ ತಮ್ಮ ಅನುಕೂಲಕ್ಕಾಗಿ ಯಾವುದೇ ತತ್ತ್ವವನ್ನು ಬಲಿಗೊಡಲೂ ಸಿದ್ಧರಿದ್ದಾರೆ. ಹಲವಾರು ಹೊಸ ಸಂಘಟನೆಗಳನ್ನು ಹುಟ್ಟುಹಾಕಿ ನಾವು ಬಿತ್ತುವ ಬೀಜಗಳನ್ನು ಹುಸಿಗೊಳಿಸುವ ಹರಗುವ ಕೆಲಸವನ್ನು ಮಾಡುತ್ತಾರೆ. ಮೊದಲನೆಯ ಶರಣ ಮೇಳದ ಯಶಸ್ಸಿನಿಂದ ಕಣ್ಣು ಕುಕ್ಕಿದಂತಾಗಿ ತಮ್ಮ ತಮ್ಮ ಭಕ್ತರನ್ನು ಶರಣ ಮೇಳಕ್ಕೆ ಬರದಂತೆ ತಡೆಯಲು ಎರಡನೇ ಶರಣ ಮೇಳದ ಸಮಯದಿಂದ ಬೇರೆ ಬೇರೆ ಕಾರ್ಯಕ್ರಮಗಳನ್ನು ಸ್ಥಳೀಯವಾಗಿ ಹಾಕಿಕೊಳ್ಳಲು ತೊಡಗಿದರು. ಎಂದೋ ಲಿಂಗೈಕ್ಯರಾದ ಗದ್ದುಗೆಯ ಕರ್ತೃಗಳ ಸಂಸ್ಮರಣೆಗಳು ಶರಣ ಮೇಳದ ಸಮಯದಲ್ಲೇ ಸಂಯೋಜಿತವಾಗ ತೊಡಗಿದವು. ಮೊದಲ ಒಂದೆರಡು ವರ್ಷ ಜನರಿಗೆ ಈ ಸಂಚು ತಿಳಿಯಲಿಲ್ಲ. ನಂತರ ತಿಳಿಯುತ್ತಲೇ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಬಂದಾಗ ಪ್ಯಾಸೆಂಜರ್ ರೈಲನ್ನು ಪಕ್ಕಕ್ಕೆ ನಿಲ್ಲಿಸಿ ದಾರಿ ಮಾಡಿಕೊಡುವಂತೆ, ಸ್ಥಳೀಯ ಮಠಾಧೀಶರ ಒತ್ತಡಗಳನ್ನು ಕಡೆಗಣಿಸಿ ಶರಣ ಮೇಳಕ್ಕೆ ಧಾವಿಸತೊಡಗಿದರು. ಹೀಗಾಗಿ ಅನೇಕ ಶರಣರ ಮನದಲ್ಲಿ ಜನವರಿ 11 ರಿಂದ 15ರ ವರೆಗಿನ ದಿನಾಂಕಗಳು ಅಚ್ಚಳಿಯದ ಮುದ್ರೆ ಒತ್ತಿವೆ.

ಇಂಥ ವಿಲಕ್ಷಣ ಸನ್ನಿವೇಶದಲ್ಲಿ ಶರಣ ಪರಂಪರೆಯ ನಿಷ್ಠಾವಂತ ಶರಣರು (ಏಕೆಂದರೆ ಮೊದಲು ವೀರಶೈವದ ಹೆಸರಿನಲ್ಲಿ ಬಹುದೇವತೋಪಾಸನೆ ಮಾಡುತ್ತಿದ್ದ ಮಠಾಧೀಶರು ಈಗ ಶರಣ ಪದವನ್ನು ಬಹಳಷ್ಟು ಬಳಕೆ ಮಾಡುತ್ತ ಹೋಮ-ಹವನಾದಿಗಳನ್ನು ಅತ್ಯಂತ ಶ್ರದ್ಧೆಯಿಂದ ಮಾಡಲು ಲಿಂಗಾಯತರಿಗೆ ಕಲಿಸಲು ಉತ್ಸುಕರಾಗಿದ್ದಾರೆ) ಬಸವ ತತ್ತ್ವ ವಿರೋಧಿಗಳ ಸಂಚನ್ನು ಅರಿತು ಕಾರ್ಯೋನ್ಮುಖರಾಗಬೇಕಾಗಿದೆ. ಈ ದಿಶೆಯಲ್ಲಿ ಹೃದಯ ಪರಿವರ್ತನೆಯ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

1. ಶರಣ ಮೇಳದ ಮಹತ್ವ, ಅಗತ್ಯ ಕುರಿತು ಮನೆಮನೆಗೆ ಹೋಗಿ ವಿವರಿಸಿ ಹೇಳಬೇಕು. ಶರಣ ಮೇಳಕ್ಕೆ ಬರಲೇಬೇಕೆಂಬ ಉತ್ಸಾಹ, ಹಂಬಲ ಮೂಡಿಸಿ ಹೆಚ್ಚು ಜನರನ್ನು ಕರೆತರುವುದು ತಮ್ಮ ಕರ್ತವ್ಯ ಎಂದು ಭಾವಿಸಬೇಕು.

2. ಶರಣ ವ್ರತ ಸ್ವೀಕರಿಸಿ ಬರುವ ಹಂಬಲವನ್ನು ವೃದ್ಧಿಗೊಳಿಸಬೇಕು. ವೈಚಾರಿಕ ಸಾಹಿತ್ಯಿಕ ಹಿನ್ನೆಲೆ ಇಲ್ಲದೆ ಇರುವ ಕೇವಲ ಭಾವುಕ ಭಕ್ತಿಯ ಮೇಲೆ ನಿಂತ ಅಯ್ಯಪ್ಪಸ್ವಾಮಿ ವ್ರತ ಸ್ವೀಕರಿಸಿ ದುಡುದುಡು ಹೋಗುವ ಲಿಂಗಾಯತರ ಸಂಖ್ಯೆ ಬೆಳೆಯುತ್ತಿದೆ. ಅಲ್ಲಿಗೆ ಹೋಗುವ ಶ್ರಮದಾಯಕ ಪ್ರವಾಸದಲ್ಲಿ ಭಜನೆ ಬಿಟ್ಟರೆ ಜ್ಞಾನಾತ್ಮಕವಾದ ಬೋಧೆಯೇ ಇರದು. ಆದರೆ ಶರಣ ವ್ರತದಲ್ಲಿ ಮಾತನಾಡುವ ದೇವರುಗಳಾಗಿ ದಿವ್ಯ ಸಂದೇಶ ನೀಡಿದ ವಚನ ವಾಙ್ಮಯದ ಪಠಣವಿದೆ. ಶರಣ ಮೇಳದ ಐದೂ ದಿವಸಗಳು ಜ್ಞಾನ ಸರೋವರದಲ್ಲಿ ಹೃನ್ಮನ ಬುದ್ಧಿಗಳನ್ನು ಪಾವನಗೊಳಿಸುತ್ತವೆ. ಇದನ್ನು ಅರಿತು ತಾವೂ ಶರಣ ವ್ರತ ಸ್ವೀಕರಿಸುವ ಜೊತೆಗೆ ಇನ್ನಿತರರನ್ನು ಶರಣ ಬಂಧುಗಳು ಪ್ರೇರೇಪಿಸಬೇಕು.

3. ಬಸವ ಧರ್ಮದ ಅತಿಮುಖ್ಯ ಸೂತ್ರಗಳು ಕಾಯಕ - ದಾಸೋಹಗಳು. ಸತ್ಯ ಶುದ್ಧ ಕಾಯಕದಿಂದ ಗಳಿಸಿದ ಒಂದು ಭಾಗವನ್ನು ದಾಸೋಹಂಭಾವದಿಂದ ಸಲ್ಲಿಸಲೇ ಬೇಕು ಎಂಬ ಪ್ರೇರಣೆ ಬೆಳೆಸಿ, ಪ್ರತಿವರ್ಷವೂ ಆ ಪವಿತ್ರ ಕಾರ್ಯಕ್ಕೆ ಸಲ್ಲಿಸುವುದು ತಮ್ಮ ಕರ್ತವ್ಯ ಎಂದು ಶರಣ ಬಂಧುಗಳು ಕಾಣಿಕೆ ನೀಡಲು ಕಾಯುವಂತಹ ಮನೋಭಾವ ಉಂಟಾಗಬೇಕು. ಧರ್ಮಪಿತರ ವಾಣಿ ಹೀಗೆ ಹೇಳುತ್ತದೆ :

ಬಂದುದು ಕೈಕೊಳ್ಳಬಲ್ಲಡೆ ನೇಮ,
ಇದ್ದುದ ವಂಚನೆಯ ಮಾಡದಿದ್ದಡೆ ಅದು ನೇಮ,
ನಡೆದು ತಪ್ಪದಿದ್ದಡೆ ನೇಮ, ನುಡಿದು ಹುಸಿಯದಿದ್ದಡೆ ನೇಮ,
ನಮ್ಮ ಲಿಂಗದೇವನ ಶರಣರು ಬಂದಡೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮ. (ಬ.ವ.ದೀ-233)

ಧರ್ಮಪಿತ ಬಸವಣ್ಣನವರು ಮತ್ತು ಅವರ ಪರಂಪರೆಯ ಶರಣರೇ ನಮ್ಮ ಒಡೆಯರು. ಅವರುಗಳ ಸಂಕಲ್ಪ ಪೂರೈಕೆಗೆ ನೀಡುವುದು ನಮ್ಮ ಧರ್ಮ ಎಂಬ ದೃಢ ವಿಶ್ವಾಸ ಬೆಳೆಯಬೇಕು.

4. ಶರಣ ಬಂಧುಗಳೇ, ತಮಗೆಲ್ಲ ತಿಳಿದಿದೆ ನಮಗೆ ರಾಜಕೀಯ ಬಲವಿಲ್ಲ; ಸಂಪ್ರದಾಯವಾದಿಗಳ ಬೆಂಬಲವಿಲ್ಲ. ಕೇವಲ ಬಸವಾದಿ ಪ್ರಮಥರ ಒಲವಷ್ಟೆ ನಮ್ಮ ಬೆನ್ನಬಲ.

ಆ ತತ್ತ್ವವನ್ನು ನಂಬಿದ ಶರಣ ಬಂಧುಗಳಷ್ಟೆ ನಮ್ಮ ಜಂಗಮ ಆಸ್ತಿ. ಪ್ಯೂನನಿಂದ ಹಿಡಿದು ಪ್ರಿನ್ಸಿಪಾಲರವರೆಗೆ ಕಡ್ಡಾಯವಾಗಿ ಸಂಬಳದಲ್ಲಿ ಮುರಿದು ಹಣ ವಸೂಲಿ ಮಾಡಲು ವಿದ್ಯಾಸಂಸ್ಥೆಗಳು ನಮ್ಮ ಬಳಿ ಇಲ್ಲ. ಹೀಗಾಗಿ ಬಲಪ್ರಯೋಗ ಮಾಡಿ ಹಣ ಸಂಗ್ರಹ ಮಾಡಲು ನಮಗೆ ಸಾಧ್ಯವಿಲ್ಲ, ಮನಸ್ಸೂ ಇಲ್ಲ, ಅಂತರಾತ್ಮವೂ ಒಪ್ಪದು. ಆದ್ದರಿಂದ "ಹನಿ ಹನಿ ಕೂಡಿದರೆ ಹಳ್ಳ" ಎಂಬಂತೆ ನಿಸ್ಪೃಹ ಮನಸ್ಸಿನ ಶರಣರು ಕೊಡುವ ದೇಣಿಗೆಯು ಒಟ್ಟುಗೂಡಿ ಶರಣ ಮೇಳದಂತಹ ಬೃಹತ್ ಅನ್ನದಾಸೋಹ - ಜ್ಞಾನದಾಸೋಹ ಕಾರ್ಯಕ್ರಮ ನಡೆಯಬೇಕು. ಇದನ್ನು ಮನಗಂಡು ಪ್ರತಿಯೊಬ್ಬ ನಿಷ್ಠಾವಂತ ಶರಣರು ಕಾಣಿಕೆ ಸಂಗ್ರಹಿಸಲು ಯತ್ನಿಸಬೇಕು ಮತ್ತು ಪ್ರಾಮಾಣಿಕವಾಗಿ ಶರಣ ಮೇಳ ಉತ್ಸವ ಸಮಿತಿಗೆ ತಲ್ಪಿಸಬೇಕು.

ಶರಣ ಮೇಳ ಉತ್ಸವ ನಿರ್ವಹಣಾ ಸಮಿತಿ ಎಂಬ ಒಂದು ಸಮಿತಿಯನ್ನು ಶರಣ ಮೇಳ ಉತ್ಸವ ಸಮಿತಿ ಟ್ರಸ್ಟ್ ಅಡಿಯಲ್ಲಿ ಮಾಡಿದ್ದು ಯಾರು ಬೇಕಾದರೂ ನಮಗೆ ಪತ್ರ ಬರೆದು ರಸೀತಿ ಪುಸ್ತಕ, ಕರಪತ್ರ ತರಿಸಿಕೊಂಡು ದೇಣಿಗೆ ಸಂಗ್ರಹಿಸಬಹುದು. ಹೀಗೆ ಸ್ವಯಂ ಪ್ರೇರಣೆಯಿಂದಲೇ ಎಲ್ಲ ಕೆಲಸಗಳು ನಡೆಯಬೇಕು.

ಸ್ವಯಂ ಸೇವಕರಿಗೆ ಕರೆ.

ಕಾಯ ಸೇವೆ :

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತಲಿದೆ. ಧರ್ಮಪಿತರ ಆದೇಶ ಹೀಗಿರುತ್ತದೆ :

ಭಕ್ತ ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬ.ವ.ದೀ 248)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷ ಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ಧಾಸೋಹಂ ಭಾವನೆಯಿಂದ ತನು ಸೇವೆ - ಮನ ಸೇವೆ, ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವನು ಮೆಚ್ಚಿ, ಒಲಿದು, ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ

(ಧಾರ್ಮಿಕ) ತೌರಿನ ಹಬ್ಬಕ್ಕಾಗಿ ರಜೆಗಳನ್ನು ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆಯನ್ನು ಸಂಗ್ರಹಿಸುತ್ತಲಿರಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯ ಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡ ಬೇಕು ಪ್ರತಿ ರಾಷ್ಟ್ರಿಯ ಬಸವ ದಳದವರು ಮತ್ತು ಇನ್ನಿತರ ಶರಣರು ತನು ಸೇವೆಗೆ ಸನ್ನದ್ಧರಾಗಬೇಕು. ಬುದ್ಧಿ ಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾಕಾರ್ಯ ಸಾಕಷ್ಟು ಇರುತ್ತವೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ.

ಎಂಬುದು ತಮ್ಮೆಲ್ಲರಲ್ಲಿ ಅಚ್ಚೊತ್ತಲಿ. - ಬಸವಾತ್ಮಜೆ

ಗುರು ಬಸವಣ್ಣನವರ ಅಭಯ ಹಸ್ತದ ಅಮೃತ ಶಿಲಾ ಮೂರ್ತಿಗಳು ಲಭ್ಯ.

12 ಅಂಗುಲ ಎತ್ತರದ ವಿಶ್ವಗುರು ಬಸವಣ್ಣನವರ ಅಭಯ ಹಸ್ತದ ಅಮೃತ ಶಿಲಾ ಮೂರ್ತಿಯು ಕಳೆದ ಶರಣ ಮೇಳದಲ್ಲಿ ಬಹಳ ಜನರ ಗಮನವನ್ನು ಸೆಳೆಯಿತು. ಪೂಜ್ಯ ಮಾತಾಜಿಯವರು ತಮ್ಮ ಪೂಜೆಗಾಗಿ ಬಳಸಲು ಇರಿಸಿಕೊಂಡ ಮೂರ್ತಿಯು ಬಹಳ ಮುದ್ದಾಗಿದ್ದು ಶರಣ ಮೇಳದ ವೇದಿಕೆಯ ಮೇಲೆ ಇಡಲಾಗಿತ್ತು. ತಮ್ಮ ಮನೆಯ ಪೂಜಾ ಗೃಹದಲ್ಲಿ ಇಡಲು ಅನೇಕ ಶರಣ ಬಂಧುಗಳು ಬೇಡಿಕೆ ಸಲ್ಲಿಸಿದ್ದಾರೆ. ಮೊದಲು ಬೇಡಿಕೆ ಸಲ್ಲಿಸಿದ್ದವರಿಗೆ ಮೂರ್ತಿಗಳು ಲಭ್ಯವಾಗಿವೆ. ಈಗ ಪುನಃ ನಾಲ್ಕು ಮೂರ್ತಿಗಳಿಗೆ ಆರ್ಡರ್ ಬಂದಿದ್ದು ಅವು ಸಿದ್ಧವಾಗುತ್ತಿವೆ. ಮತ್ತೆ ಯಾರಾದರೂ ಶರಣ ಬಂಧುಗಳು ಬೇಡಿಕೆ ಸಲ್ಲಿಸಿದರೆ ಶರಣ ಮೇಳದ ಒಳಗೆ ಲಭ್ಯವಾಗುವಂತೆ ಮಾಡಲು ಸಾಧ್ಯವಿದೆ. ಸ್ವತಃ ಒಬ್ಬರು ಹೋಗಿ, ಕುಳಿತು ಮಾಡಿಸಿ ತರಬೇಕಾಗುತ್ತದೆ. ಈ ಪ್ರಕಟಣೆ ಓದಿದ ನಂತರ ಆಸಕ್ತರು ಪತ್ರ ಅಥವಾ ಫೋನ್ ಮೂಲಕ ವಿವರಗಳನ್ನು ಪಡೆದು ಆರ್ಡರ್ ಕೊಟ್ಟು, ಅಡ್ವಾನ್ಸ್ ಕಳಿಸಿದರೆ ಮೂರ್ತಿಗಳನ್ನು ಸಿದ್ಧಪಡಿಸಲಾಗುವುದು. ಶರಣ ಮೇಳಕ್ಕೆ ಬಂದಾಗ ಮೂರ್ತಿಗಳನ್ನು ಒಯ್ಯಲು ಸಾಧ್ಯವಿದೆ. ಬೆಂಗಳೂರು ಅಥವಾ ಕೂಡಲ ಸಂಗಮದಲ್ಲಿ ಡೆಲಿವರಿ ಮಾಡಲಾಗುವುದು. 12 ಅಂಗುಲದ ಮೂರ್ತಿಯನ್ನು ಸುಲಭವಾಗಿ ಒಯ್ಯಬಹುದು. ಆದಷ್ಟು ಬೇಗನೆ ಸಂಪರ್ಕಿಸಿರಿ.

ಪೂಜ್ಯ ಶ್ರಿ ಸದ್ಗುರು ಅಲ್ಲಮಪ್ರಭು ಸ್ವಾಮೀಜಿ, ಬಸವ ಮಂಟಪ, 2035, 20ನೇ ಮೇನ್ ರಾಜಾಜಿನಗರ ಎರಡನೆಯ ಬ್ಲಾಕು, ಬೆಂಗಳೂರು-10. ದೂರವಾಣಿ : 080/3325335/3322790

ಓಂ ಶ್ರೀ ಗುರುಬಸವಲಿಂಗಾಯ ನಮಃ

86666

2002ನೆಯ ಇಸವಿಯ ಕ್ಯಾಲೆಂಡರ್ (ದಿನದರ್ಶಿಗಳು)

1. ಬಸವ ಚಂದನ - ಭಿತ್ತಿಪಟ

16 ಅಂಗುಲ ಅಗಲ, 25 ಅಂಗುಲ ಉದ್ದ ಅಳತೆಯ ಬಹುವರ್ಣೀಯ ಗೋಡೆ ಕ್ಯಾಲೆಂಡರ್. ಸುಂದರವಾದ, ಆರ್ಟ್ ಪೇಪರ್ ಮೇಲೆ ಮುದ್ರಣಗೊಂಡಿದೆ. ಬೃಹತ್ ಲಿಂಗದ ಮಧ್ಯೆ ನಿಂತಿರುವ ಅಭಯ ಹಸ್ತದ ಬಸವಣ್ಣನವರು ಅವರ ಸುತ್ತಲೂ ಶರಣರು. ಒಂದು ಪ್ರತಿಗೆ ಬೆಲೆ : 16-00 ರೂ., 10 ಪ್ರತಿಯ ಬೆಲೆ : 150-00 ರೂ., 50 ಪ್ರತಿಗೆ ಬೆಲೆ : 700-00 ರೂ. ಅಂಚೆ ವೆಚ್ಚ ಪ್ರತ್ಯೇಕ.

2. ಪಾಕೆಟ್ ಕ್ಯಾಲೆಂಡರ್ (ಜೇಬಿನ ಆವೃತ್ತಿ)

ಬಸವ ರಶ್ಮಿ-2002ನೆಯ ಇಸವಿಯ ದಿನದರ್ಶಿ ಚಿಕ್ಕ ಆಕಾರದ ಸುಂದರ ಹೊದ್ದಿಕೆಯಿಂದ ಕೂಡಿರುವ ಪಾಕೆಟ್ ಕ್ಯಾಲೆಂಡರ್ ಡೈರಿ. ಬೆಲೆ : 6-00 ರೂ., 50 ಪ್ರತಿ ಮತ್ತು ಮೇಲೆ ಕೊಳ್ಳುವವರಿಗೆ 5-00 ರೂ.,ಗೆ ಒಂದರಂತೆ ರಿಯಾಯಿತಿ ದರದಲ್ಲಿ ಕೊಡಲಾಗುವುದು. ಬಂಧು-ಮಿತ್ರರು-ಆತ್ಮೀಯರಿಗೆ ನೆನಪಿನ ಕೊಡುಗೆಯಾಗಿ ಕೊಡಲು ಅತ್ಯುತ್ತಮವಾಗಿವೆ. ಲಿಂಗಾಯತ ಧರ್ಮದ ಹಬ್ಬ-ಹುಣ್ಣಿಮೆ-ಉತ್ಸವಗಳ ವಿವರಗಳಿವೆ. ಅಂಚೆ ವೆಚ್ಚ ಪ್ರತ್ಯೇಕ.

3. ಕ್ಯಾಲೆಂಡರ್ ಕಾರ್ಡ್ (ಜೇಬಿನ ಆವೃತ್ತಿ)

ಜೇಬಿನಲ್ಲಿ ಇಟ್ಟುಕೊಳ್ಳುವಷ್ಟು ಚಿಕ್ಕ ಆಕಾರದ ಕಾರ್ಡ್. ಒಂದು ಬದಿಗೆ ಧರ್ಮಪಿತ ಬಸವಣ್ಣನವರ ಸುಂದರ ಭಾವಚಿತ್ರ, ಇನ್ನೊಂದು ಬದಿಗೆ ವರ್ಷದ ದಿನದರ್ಶಿ - ಲಿಂಗಾಯತ ಧರ್ಮದ ಹಬ್ಬ-ಹುಣ್ಣಿಮೆ-ಉತ್ಸವಗಳ ವಿವರವಿದೆ. ಬೆಲೆ : 1-00 ರೂ., 100 ಪ್ರತಿ ಮತ್ತು ಮೇಲೆ ಕೊಳ್ಳುವವರಿಗೆ 10% ರಿಯಾಯಿತಿ. ಕೇವಲ 1-00 ರೂ., ಬೆಲೆಯಲ್ಲಿ ಹೆಚ್ಚಿನ ಜನ ಆತ್ಮೀಯರಿಗೆ ನೆನಪಿನ ಕಾಣಿಕೆಯಾಗಿ ಹಂಚಲು ಅನುಕೂಲವಿದೆ. ಅಂಚೆ ವೆಚ್ಚ ಪ್ರತ್ಯೇಕ.

ವಿ.ಸೂ: ಹಿಂಬದಿಯಲ್ಲಿ ಖಾಲಿ ಜಾಗ ಬಿಟ್ಟಿರುವ ಕಾರ್ಡ್ ಸಹ ಲಭ್ಯವಿವೆ. ಅಲ್ಲಿ ತಮ್ಮ ಹೆಸರು, ತಮ್ಮ ವ್ಯಾಪಾರಿ ಸಂಸ್ಥೆಯ ಹೆಸರನ್ನು ಮುದ್ರಿಸಿ ಹಂಚಲು ಅವಕಾಶವಿದೆ.

4. ವಿಸಿಟಿಂಗ್ ಕಾರ್ಡ್.

ಬಹುವರ್ಣೀಯ ಸುಂದರ ಬಸವ ಭಾವಚಿತ್ರ ಉಳ್ಳ ಕಾರ್ಡ್‌ಗಳು ಖರೀದಿಗೆ ತಮ್ಮ ಹೆಸರಿನ ಸೀಲ್ ಹಾಕಿಕೊಳ್ಳಬಹುದು. ಇಲ್ಲವೇ ಸ್ಕ್ರೀನ್ ಪ್ರಿಂಟಿಂಗ್ ಮಾಡಿಸಿಕೊಳ್ಳಬಹುದು. 100 ಪ್ರತಿಗೆ 10% ರಿಯಾಯಿತಿಯೊಡನೆ 90 ರೂಗಳು. ಅಂಚೆ ವೆಚ್ಚ ಪ್ರತ್ಯೇಕ.

ಶರಣ ಮೇಳದಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ. ಈಗಾಗಲೇ ಮುದ್ರಣಗೊಂಡಿದ್ದು, ಕೊಳ್ಳುವ ಅಪೇಕ್ಷೆಯುಳ್ಳವರು ಬೆಂಗಳೂರಿನ ವಿಳಾಸಕ್ಕೆ ವ್ಯವಹರಿಸಬೇಕು.

ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮೀಜಿ

ಬಸವ ಮಂಟಪ, 2035, ರಾಜಾಜಿನಗರ, 2ನೇ ಬ್ಲಾಕು, ಬೆಂಗಳೂರು-560010

ದೂರವಾಣಿ : (080)3325335/3322790

ಸಂಪಾದಕೀಯ

ಬಸವ ಮಂಟಪಗಳ ನಿರ್ಮಾಣ ಇಂದಿನ ಅಗತ್ಯ

ವಿದೇಶಗಳಲ್ಲಿ ಹುಟ್ಟಿ ಭಾರತ ದೇಶದಲ್ಲಿ ನೆಲೆಯೂರಿ ಹಬ್ಬಿ ಹಸರಿಸುತ್ತ ಬೇರು ಬಿಡುತ್ತಿರುವ ಕ್ರೈಸ್ತ, ಇಸ್ಲಾಂ ಧರ್ಮಗಳು ನಿರ್ಮಾಣ ಮಾಡಿರುವ ಚರ್ಚು, ಮಸೀದಿ, ದರ್ಗಾಗಳು ಬೆರಗನ್ನು ಹುಟ್ಟಿಸುವುದೇ ಅಲ್ಲದೆ ನಮ್ಮ ಬಗ್ಗೆ (ನಮ್ಮ ಧರ್ಮದ ಬಗೆಗಲ್ಲ) ನಮಗೆ ಕೀಳರಿಮೆ, ತಿರಸ್ಕಾರ ಹುಟ್ಟಿಸುತ್ತವೆ, ನಾಚಿ ತಲೆ ತಗ್ಗಿಸುವಂತೆ ಮಾಡುತ್ತವೆ. ನಮ್ಮ ಧರ್ಮ ಹುಟ್ಟಿದ 400 ವರ್ಷಗಳ ನಂತರ ಹುಟ್ಟಿದ ಸಿಖ್ ಧರ್ಮ ಎಷ್ಟು ಸ್ವಾಭಿಮಾನಿ ಜನಾಂಗವನ್ನು ರೂಪಿಸಿದೆ! ಎಂತೆಂತಹ ಗುರುದ್ವಾರಗಳನ್ನು ಕಟ್ಟಿದೆ, ಇಡೀ ಜಗತ್ತೇ ಆ ಸಮಾಜದ ಕಡೆ ಅಭಿಮಾನದಿಂದ ನೋಡುವಂತೆ ಮಾಡಿದೆ. ಭಾರತೀಯ ಧರ್ಮಗಳು ರೂಪಿಸುವ ಸಮಾಜ ಕುರಿತು ಚಿಂತಿಸುವುದಾದರೆ ಸಿಖ್ಖರು ರಾಷ್ಟ್ರ ಪ್ರೇಮಿಗಳು, ಧೀರರು, ಶೂರರು, ದಾಸೋಹಂಭಾವಿಗಳು, ದಾನಿಗಳು. ಕರ್ನಾಟಕದಲ್ಲಿ ಅತ್ಯಂತ ಅಲ್ಪ ಸಂಖ್ಯಾತರಾಗಿದ್ದರೂ ಬೀದರದಲ್ಲಿ ಅವರು ಕಟ್ಟಿರುವ ನಾನಕ ಝರಾ, ಬೆಂಗಳೂರಿನ ಗುರುದ್ವಾರ ಸಿಖ್ಖರ ಧರ್ಮಾಭಿಮಾನಕ್ಕೆ ಜೀವಂತ ಸಾಕ್ಷಿಯಾಗಿವೆ.

ಪ್ರತಿಯೊಂದು ಧರ್ಮಕ್ಕೆ ತನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ, ಸಿದ್ಧಾಂತದ ಅಭಿವ್ಯಕ್ತರೂಪವಾಗಿರುವ ಧರ್ಮ ಮಂದಿರಗಳ ಅವಶ್ಯಕತೆ ಒದಗುತ್ತದೆ. ಧರ್ಮವು ಸೈದ್ಧಾಂತಿಕ ಮುಖವನ್ನು ಹೊಂದಿದಂತೆ ಆಚಾರಾತ್ಮಕ ಮುಖವನ್ನು ಹೊಂದಿರುವ ಕಾರಣ ಧರ್ಮವು ಸಂಸ್ಥೀಕರಣ (institutionalise) ಗೊಂಡಾಗ ಅನುಯಾಯಿಗಳಿಗೆ ಸರ್ವಾಂಗೀಣ ಪ್ರಗತಿಗಾಗಿ ಧರ್ಮ ಮಂದಿರಗಳ ಅಗತ್ಯ ಉಂಟಾಗುತ್ತದೆ. ಹೀಗಾಗಿ ಎಲ್ಲ ಧರ್ಮಗಳವರೂ ತಮ್ಮ ಧರ್ಮದ ಸೈದ್ಧಾಂತಿಕ ಚೌಕಟ್ಟಿಗೆ ಅನುಗುಣವಾಗಿ ಧರ್ಮ ಮಂದಿರಗಳನ್ನು ನಿರ್ಮಿಸಿಕೊಂಡರು.

ಶೈವ	- ಶಿವಾಲಯ/ದೇವಾಲಯ	ವೈಷ್ಣವ	- ಮಂದಿರ
ಬೌದ್ಧ	- ಚೈತ್ಯಾಲಯ/ವಿಹಾರ	ಜೈನ	- ಜಿನಾಲಯ/ಬಸದಿ
ಕ್ರೈಸ್ತ	- ಚರ್ಚ್	ಮುಸ್ಲಿಂ	- ಮಸೀದಿ
ಸಿಖ್	- ಗುರುದ್ವಾರ	ಯಹೂದಿ	- ಸಿನೆಗಾಗ್
ಪಾರ್ಸಿ	- ಅಗ್ನಿ ಮಂದಿರ		

ಇದೇ ರೀತಿ ಧರ್ಮಪಿತ ಬಸವಣ್ಣನವರ ಪರಿಕಲ್ಪನೆಯಲ್ಲಿ ಅನುಭವ ಮಂಟಪ - ಆದರ್ಶ ಧರ್ಮ ಮಂದಿರವಾಗಿತ್ತು, ಅವರು ಬರೀ ಕಲ್ಪನೆಯನ್ನಷ್ಟೇ ಕೊಡಲಿಲ್ಲ, ವಸ್ತುತಃ ತಾವೇ ನಿರ್ಮಿಸಿ ಅಲ್ಲಿ ಕಾರ್ಯಕ್ರಮ ರೂಪಿಸಿ, ನಡೆಸಿ ತೋರಿಸಿದರು.

ಅನುಭವ ಮಂಟಪದ ಪರಿಕಲ್ಪನೆ ಏನು ?

ಹಿಂದೂ ದೇವಾಲಯ, ಮಂದಿರಗಳು ಶ್ರದ್ಧೆ - ಭಕ್ತಿಯ ಕೇಂದ್ರಗಳು. ಅಲ್ಲಿ ವೈಚಾರಿಕತೆ ಇರುವುದಿಲ್ಲ ಮಾತ್ರವಲ್ಲ ಪುರೋಹಿತಶಾಹಿ ಪ್ರಧಾನವಾಗಿರುತ್ತದೆ. ಜಾತಿ ಪದ್ಧತಿ ಸಾಮಾಜಿಕ ವ್ಯವಸ್ಥೆಯ ಕೇಂದ್ರಬಿಂದುವಾಗಿರುತ್ತದೆ. ಉಳಿದೆಲ್ಲ ಮಂದಿರಗಳಲ್ಲಿ ಪ್ರಾರ್ಥನೆ ಮುಂತಾಗಿ ನಡೆಯುತ್ತದೆಯಾದರೂ ಅಲ್ಲಿ ಪರಸ್ಪರ ಸಾಧಕ ಜೀವಿಗಳ ಮಧ್ಯೆ ವಿಚಾರ

ವಿನಿಮಯ ಚರ್ಚಾಗೋಷ್ಠಿ, ಮುಕ್ತ ಚಿಂತನೆ ಇರುವುದಿಲ್ಲ ಜಗತ್ತಿನ ಎಲ್ಲ ಧರ್ಮ ಮಂದಿರಗಳಿಂದ ಭಿನ್ನವಾಗಿ ಅನುಭವ ಮಂಟಪ ನಿಲ್ಲುವುದು ಈ ದೃಷ್ಟಿಯಿಂದಲೇ. ಸೃಷ್ಟಿಕರ್ತನಲ್ಲಿ ಭಕ್ತಿ - ಶ್ರದ್ಧೆಗಳು ಅನನ್ಯವಾಗಿದ್ದಂತೆ ಅನುಭವ ಮಂಟಪದಲ್ಲಿ ಮುಕ್ತಮನಸ್ಸಿನ ವಿಚಾರ ವಿನಿಮಯ, ಅನುಭಾವಿಕ ಚರ್ಚೆ ವೈಶಿಷ್ಟ್ಯ ಪೂರ್ಣವಾಗಿತ್ತು . ಅಕ್ಬರನ - ದಿನ್ - ಇಲಾಯಿ ಚರ್ಚೆಯ ಸ್ವರೂಪ ಹೊಂದಿತ್ತಾದರೂ ಅದು ಇಂದಿನ ಸರ್ವ ಧರ್ಮ ಸಮ್ಮೇಳನಗಳಂತೆ ಬರಿಯ ಚರ್ಚೆಯ ಮಟ್ಟದಲ್ಲಿ ಉಳಿದಿತ್ತೇ ವಿನಾ ಅನುಭಾವಿಕ ನಿಲುವನ್ನು ಏರಿರಲಿಲ್ಲ. ಪ್ಲೇಟೋನ ಅಕ್ಯಾಡಮಿ, ಸೋಕ್ರೆಟೀಸನ ಚರ್ಚಾಕೂಟಗಳು ಇಂದಿನ ತತ್ತ್ವಜ್ಞಾನ ವಿಭಾಗಗಳಲ್ಲಿ ಬರುವ ಶಾಬ್ದಿಕ, ಸೈದ್ಧಾಂತಿಕ ಚರ್ಚೆಯ ಸ್ವರೂಪ ಹೊಂದಿದ್ದವೇ ವಿನಾ ಯೋಗಿಗಳ, ದಾರ್ಶನಿಕರ ದಿವ್ಯ ಸಂಗಮವಾಗಿರಲಿಲ್ಲ. ಅಂಥಾ ಒಂದು ಆದರ್ಶ ಸಂಸ್ಥೆಯಾಗಿ ಅನುಭವ ಮಂಟಪವನ್ನು ಮಹಾನುಭಾವಿ ಬಸವಣ್ಣನವರು ಕಟ್ಟಿ ತೋರಿಸಿದರೂ ಅವರ ನಂತರ ಅವರ ಅನುಯಾಯಿಗಳು ಅಂಥದೊಂದು ಮಾದರಿಯನ್ನಿಟ್ಟುಕೊಂಡು ಕಟ್ಟಿ ತೋರಿಸಲಿಲ್ಲ.

ಅಂದಿನ ಪರಿಕಲ್ಪನೆಗೆ ಸ್ವಲ್ಪವಾದರೂ ಹೋಲುವಂತೆ, ಇಂದು "ಬಸವ ಮಂಟಪ"ಗಳನ್ನು ಕಟ್ಟಿ, ಜನರಿಗೆ ಸಂಸ್ಕಾರ ನೀಡುವುದು ಮಾತ್ರವಲ್ಲ ಸಂಘಟನೆಗೆ ಸಾಧನೆಗೆ ಬಳಸಿಕೊಳ್ಳುವುದು ಅತ್ಯಗತ್ಯವಿದೆ. ಪ್ರತಿಯೊಂದು ನಗರ, ಊರು, ಗ್ರಾಮಗಳಲ್ಲೂ ಬಸವ ಮಂಟಪಗಳು ಆಗುವುದು ಇಂದಿನ ಆವಶ್ಯಕತೆಯಾಗಿದೆ. ಲಿಂಗಾಯತ ಧರ್ಮಾನುಯಾಯಿಗಳಿಗೆ ಸಂಸ್ಕಾರ ಕೊಡುವುದು ಮಾತ್ರವಲ್ಲ, ದೇವರ ಕೃಪೆಗಾಗಿ ಹಂಬಲಿಸುವ, ಸಾಮಾಜಿಕ ಸಹೋದರತ್ವಕ್ಕೆ ಆಶಿಸುವ, ಅಧ್ಯಾತ್ಮ ಸಾಧನೆಯಲ್ಲಿ ಆಸಕ್ತರಾದ ಎಲ್ಲ ಮಾನವರಿಗೂ ಇಂದು ಬಸವ ಮಂಟಪಗಳು ಬೇಕಾಗಿವೆ. ಏಕೆಂದರೆ ಬಸವ ತತ್ತ್ವದ ಅಮೃತಧಾರೆಯಲ್ಲಿ ಮಿಂದ ಮನಸ್ಸುಗಳು ಭಾವ ವೈಶಾಲ್ಯವನ್ನು ಹೊಂದುತ್ತವೆ. ಎಲ್ಲರನ್ನು ಇಂಬಿಟ್ಟುಕೊಳ್ಳುವ ಸದ್ಭಾವವನ್ನು ಮೈಗೂಡಿಸಿ ಕೊಳ್ಳುತ್ತವೆ.

ಬಸವ ಮಂಟಪಗಳ ನಿರ್ಮಾಣ ಎಂದೋ ಆರಂಭವಾಗಿ ಸಾಗಿ ಬರಬೇಕಾಗಿತ್ತು. ತಡವಾಗಿದ್ದರೂ ಚಿಂತೆ ಇಲ್ಲ ಈಗ ಆರಂಭಿಸಬೇಕಾಗಿದೆ. ಈ ದಿಶೆಯಲ್ಲಿ ಕೆಳಕಂಡ ಊರುಗಳಲ್ಲಿ ಬಸವ ಮಂಟಪ ಕಟ್ಟಲು ಯೋಜನೆ ಹಾಕಲಾಗಿದೆ. ಅದಕ್ಕಾಗಿ ಜಾಗಗಳನ್ನು ಸಹ ಹೊಂದಲಾಗಿದೆ.

1. ಹೈದರಾಬಾದ್ ನಗರ
2. ಹುಬ್ಬಳ್ಳಿ
3. ಗುಲಬರ್ಗಾ
4. ಬೈಲಹೊಂಗಲ. ಇತ್ಯಾದಿ

ಕಟ್ಟಿರುವ ಬಸವ ಮಂಟಪಗಳ ವಿಸ್ತರಣೆ.

ಬೆಂಗಳೂರು ನಗರದ ರಾಜಾಜಿನಗರ ಬಡಾವಣೆಯಲ್ಲಿರುವ ಬಸವ ಮಂಟಪದ ವಿಸ್ತರಣೆ ಕಾರ್ಯ ನಡೆಯುತ್ತಿದೆ. 1975 ರಲ್ಲಿ ಬಸವ ಮಂಟಪ ಪ್ರಾರಂಭವಾಯಿತು. ಆಗಾಗ ವಿಶೇಷ ಕಾರ್ಯಕ್ರಮಗಳು, ಬಸವ ಜಯಂತಿ, ಬಸವ ಪಂಚಮಿ, ನಡೆಯುವುದು ಮಾತ್ರವಲ್ಲದೆ, ಪ್ರತಿ ಭಾನುವಾರ ಶರಣ ಸಂಗಮ - ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ, ಪ್ರತಿವಾರ ಪ್ರಸಾದ ದಾಸೋಹ ಸಹ ನಡೆಯುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು

ಪಾಲ್ಗೊಳ್ಳುವುದು ಕಂಡಾಗ ಸಂತೋಷವೆನಿಸುತ್ತದೆ. ಪ್ರತಿ ವಾರದ ದಾಸೋಹಕ್ಕಾಗಿ ಶರಣರು 1500 ರೂಗಳಂತೆ ಕೊಡುತ್ತಾರೆ. ಶರಣ ಸಂಗಮದಲ್ಲಿ ಭಾಗವಹಿಸುವವರ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದಲೂ ಪ್ರಸಾದ ದಾಸೋಹಕ್ಕೆ ಜಾಗದ ಕೊರತೆಯಾಗುತ್ತಿದ್ದುದರಿಂದಲೂ ಮೇಲಿನ ಅಂತಸ್ತನ್ನು ಕಟ್ಟುವ ವಿಚಾರ ಹೊಂದಿ "ಶ್ರೀ ಸಿದ್ಧಲಿಂಗೇಶ್ವರ ದಾಸೋಹ ಮಂಟಪ" ಎಂಬ ಪಡಸಾಲೆ (ಹಾಲ್) ಕಟ್ಟಿಸಲಾಗುತ್ತಿದ್ದು, ಕೇವಲ ನೆಲದ ಕೆಲಸ ಬಾಕಿ ಉಳಿದಿದೆ. ಇದರ ಮೇಲೆ ಮಹಿಳೆಯರ ವಸತಿ ನಿಲಯ (ಹಾಸ್ಟೆಲ್) ಕಟ್ಟಿಸಲು ಪ್ರಾರಂಭಿಸಲಾಗಿದೆ. ಹಾಸ್ಟೆಲ್ ವಾಸಿಗಳಿಗೆ ಸಹ ಪ್ರಸಾದ ನಿಲಯದ ಅಗತ್ಯ ಒದಗುವುದರಿಂದ ಮೊದಲು ದಾಸೋಹ ಮಂಟಪ ಸಿದ್ಧಪಡಿಸಲಾಗುತ್ತಿದೆ. ಈ ಎಲ್ಲ ಕಾರ್ಯಗಳಿಗೆ ದೇಣಿಗೆಯ ಅಗತ್ಯ ಬಹಳವಿದೆ.

ಧಾರವಾಡ ಆಶ್ರಮದಲ್ಲಿ ಬಸವ ಮಂಟಪ

ತೆಂಗಿನ ಗರಿಯ ಒಂದು ಚಪ್ಪರವನ್ನು 1996 ರಲ್ಲಿ ಹಾಕಿ, ಅದರಲ್ಲಿಯೇ ವಾರದ ಪ್ರಾರ್ಥನೆ ನಡೆಸಿಕೊಂಡು ಬರಲಾಗುತ್ತಿತ್ತು. 1996 ರಲ್ಲಿ ಪ್ರಾರಂಭವಾದ ವಾರದ ಪ್ರಸಾದ ದಾಸೋಹವನ್ನು ಧಾರವಾಡ ರಾಷ್ಟ್ರೀಯ ಬಸವ ದಳದ ಶರಣರು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಗಮನಾರ್ಹವಾಗಿದೆ. ಚಪ್ಪರವು ಶಿಥಿಲವಾಗಿ ಬೀಳುವ ಸ್ಥಿತಿಗೆ ಬಂದುದರಿಂದ ಒಂದು ವಿಶಾಲವಾದ ಪಡಸಾಲೆ (ಹಾಲ್)ಯನ್ನು ನಿರ್ಮಿಸುವ ರೂಪುರೇಷೆ ಹಾಕಿ, ಅದರಂತೆ ಮಾಡಿಯೂ ಆಗಿದೆ. ಆದರೆ ಈಗಿನ ದೊಡ್ಡ ಕೊರತೆ ಎಂದರೆ ರುಂಡವಿಲ್ಲದ ಮುಂಡದಂತೆ ("ತಲೆ ಇಲ್ಲದ ಅಟ್ಟಗೆ ಪಟ್ಟವ ಕಟ್ಟುವವರ ಮೆಚ್ಚುವನೆ ನಮ್ಮ ಲಿಂಗದೇವ" ಎಂಬ ಧರ್ಮಪಿತರ ವಾಣಿಯಂತೆ) ಬಸವಾಲಯ, ಶರಣಾಲಯ ಪೂರ್ಣಗೊಳಿಸದೆ ಮುಂದಿನ ಪ್ರಾರ್ಥನಾ ಮಂಟಪವನ್ನು ಮಾತ್ರ ಉಪಯೋಗಕ್ಕೆ ಬರುವಂತೆ ಪೂರ್ಣಗೊಳಿಸಲಾಗಿದೆ. ಮುಖ್ಯಭಾಗವಾದ ಬಸವಾಲಯ, ಶರಣಾಲಯವನ್ನು ಪೂರ್ಣಗೊಳಿಸಿ ಅಲ್ಲಿ ವಿಶ್ವಗುರು ಬಸವಣ್ಣ, ಶೂನ್ಯ ಪೀಠಾಧೀಶ ಅಲ್ಲಮ ಪ್ರಭು, ಜಗನ್ಮಾತಾ ಅಕ್ಕಮಹಾದೇವಿ, ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ ಇವರ ಅಮೃತ ಶಿಲಾ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕಾಗಿದೆ. ಈ ಐದೂ ಮೂರ್ತಿಗಳನ್ನು ಮಾಡಿಸಿಕೊಡಲು ಐದು ಜನ ಧನ ದಾಸೋಹಿಗಳು ಮುಂದೆ ಬಂದಿದ್ದಾರೆ. ಮುಖ್ಯ ಆಲಯ ಸಿದ್ಧವಾಗಬೇಕಾಗಿದೆ. ಅದಕ್ಕೊಂದು ಗೋಪುರ ಮತ್ತು ಮಹಾದ್ವಾರ ಮಾಡಬೇಕಾಗಿದೆ. ಈ ಎಲ್ಲ ಕಾರ್ಯಕ್ಕೆ ಧನ ಸಹಾಯ ಅಗತ್ಯವಾಗಿದೆ.

ಹೈದರಾಬಾದಿನ ಬಸವ ಮಂಟಪದ ಸುದ್ದಿ ನಮಗೇಕೆ ? ಹುಬ್ಬಳ್ಳಿ - ಧಾರವಾಡದ್ದು ನಮಗೇನು ಸಂಬಂಧ ? ಹೀಗೆ ಶರಣ ಬಂಧುಗಳು ಸೀಮಿತವಾಗಿ ಆಲೋಚಿಸಬಾರದು. ಬೀದರಿನ ನಾನಕ ಝರಾ ಕಟ್ಟಲು ಕೇವಲ ಬೀದರಿನ ಸಿಖ್ಖರು ಮನಸ್ಸು ಮಾಡಿದ್ದರೆ ಆಗುತ್ತಿತ್ತೆ ? ಇಂದು ಹಳ್ಳಿ ಹಳ್ಳಿಗೂ ಮಸೀದಿ ಮತ್ತು ಮದರಸಾಗಳು ಆಗುತ್ತಿವೆ. ಆ ಗ್ರಾಮದ ಜನರಿಂದಲೇ ಆಗಲಿ ಎಂದರೆ ಸಾಧ್ಯವೇ ಇಲ್ಲ. ಕ್ರೈಸ್ತ, ಮುಸ್ಲಿಂ ಧರ್ಮೀಯರಿಗೆ ಅವರ ಸಂಸ್ಥೆಗಳನ್ನು ಕಟ್ಟಲು ವಿದೇಶಗಳಿಂದ ಹೊಳೆ ಹರಿದು ಬಂದಂತೆ ಹಣವು ಬರುತ್ತದೆ. ಆದ್ದರಿಂದ

ಬಸವ ಗುರುವಿನಲ್ಲಿ ಭಕ್ತಿ-ಶ್ರದ್ಧೆ-ಶರಣಾಗತಿ ಇರುವ ಶರಣರು ತಮ್ಮ ಅನಗತ್ಯ ಖರ್ಚುಗಳನ್ನು ಕಡಿಮೆ ಮಾಡಿ, ಮಿತವ್ಯಯ ಮಾಡಿ ಸಾಹಿತ್ಯ ಪ್ರಕಟಣೆ, ಸಾಹಿತ್ಯ ಪ್ರಚಾರ, ಬಸವ ಮಂಟಪಗಳ ನಿರ್ಮಾಣ, ಶರಣ ಮೇಳ ನಿರ್ವಹಣೆ ಮುಂತಾದ್ದಕ್ಕೆ ಗಳಿಕೆಯನ್ನು ವಿನಿಯೋಗಿಸಬೇಕು. ಶ್ರೀಮಂತರು ಧಾರ್ಮಿಕ ಪ್ರಜ್ಞೆ ಮೈಗೂಡಿಸಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ಧನ ದಾಸೋಹ ಮಾಡಬೇಕು.

"ನಾನು ಗೃಹವ ಹೊಂದುವುದಕ್ಕೆ ಮುನ್ನವೇ ಜಂಗಮಕ್ಕೆ ಗೃಹವ ಕಟ್ಟಿಸುವೆ." ಎನ್ನುತ್ತಾರೆ ಶರಣರು. ಕ್ರೈಸ್ತರು, ಮುಸಲೀಮರು 10 ಮನೆ ಇದ್ದರೂ ಮೊದಲು ಚರ್ಚ್, ಮಸೀದಿ ಮುಂತಾದ ಪ್ರಾರ್ಥನಾ ಸ್ಥಳಗಳನ್ನು ವ್ಯವಸ್ಥೆ ಮಾಡಿಕೊಳ್ಳುವರು. ಲಿಂಗಾಯತರು ಬಹು ಸಂಖ್ಯಾತರಾಗಿ ಸಹಸ್ರಾರು, ಲಕ್ಷಾಂತರ ಸಂಖ್ಯೆಯಲ್ಲಿರುವ ಊರುಗಳಲ್ಲಿ ಸಹ ಒಂದು ಪ್ರಾರ್ಥನಾ ಮಂಟಪ ಅಥವಾ ಸಮುದಾಯ ಕೇಂದ್ರ ಮಾಡಿಕೊಂಡಿರುವುದಿಲ್ಲ. ತಮ್ಮ ಮನೆಗಳನ್ನು ಪೈಪೋಟಿ ಮೇಲೆ ವೈಭವದಿಂದ ಕಟ್ಟಿಕೊಳ್ಳುವರು. ಸಮಾಜ ಬಂಧುಗಳು ಸೇರಲು ಒಂದು ಸ್ಥಳವಿಲ್ಲ ಎಂಬ ಬಗ್ಗೆ ಚಿಂತನೆಯನ್ನೇ ಮಾಡದಷ್ಟು ಸ್ವ-ಕೇಂದ್ರಿತ (self centered)ರು ಮತ್ತು ಸ್ವಾರ್ಥಿಗಳೂ ಆಗಿದ್ದಾರೆ. ಶ್ರೀಮಂತರಿಗೇನೂ ಕೊರತೆ ಇಲ್ಲ. ಆದರೆ ಅವರ ಹಣ ಸ್ವಂತ ಸುಖಭೋಗಕ್ಕೆ ಇಲ್ಲವೇ ಲಿಂಗಾಯತ ಧರ್ಮ ಸಂಸ್ಕೃತಿಗೆ ಹೊರತಾದ ಗುಡಿಗುಂಡಾರ ಕಟ್ಟಲು ಅಪವ್ಯಯವಾಗುತ್ತಿದೆ ಎಂಬುದು ವಿಷಾದನೀಯ ಸಂಗತಿ. ತನ್ನ ಮನೆಗೆ 1 ಕೋಟಿ ಖರ್ಚು ಮಾಡುವವ ಜಂಗಮದ ಮನೆಗೆ ಅಂದರೆ ಸಮಾಜ ಮಂದಿರಕ್ಕೆ ಒಂದು ಲಕ್ಷ ಕೊಡಲಿ. ತನ್ನ ಮನೆಗೆ 10 ಲಕ್ಷ ವ್ಯಯಿಸುವವನು ಧರ್ಮ ಮಂದಿರಕ್ಕೆ 10 ಸಾವಿರ ಕೊಡಲಿ, ಅವರವರ ಶಕ್ತಿ-ಸಾಮರ್ಥ್ಯಕ್ಕೆ ತಕ್ಕಂತೆ ಕೊಡಲಿ.

ವಿದೇಶದಲ್ಲಿರುವ ಲಿಂಗಾಯತರು

ಸಾಕಷ್ಟು ಪ್ರಮಾಣದಲ್ಲಿ ಇಂದು ಲಿಂಗಾಯತರು ವಿದೇಶಗಳಲ್ಲಿದ್ದಾರೆ. ಉನ್ನತ ಹುದ್ದೆಗಳನ್ನು ಅಲಂಕರಿಸಿ, ಸಾಕಷ್ಟು ಗಳಿಸುತ್ತಿದ್ದಾರೆ. ಅವರು ಸ್ವಲ್ಪವಾದರೂ ಇತ್ತ ಕಡೆ ಗಮನ ಹರಿಸುವುದು ಒಳ್ಳಿತು. ಇಂಗ್ಲೆಂಡ್, ಅಮೇರಿಕಾ, ಜರ್ಮನಿ, ಆಸ್ಟ್ರೇಲಿಯಾಗಳ ಪಾಶ್ಚಿಮಾತ್ಯರು ಮತ್ತು ಅರಬ್ ದೇಶಗಳ ಜನರು ತಮ್ಮ ಮತಗಳ ಪ್ರಚಾರಕ್ಕೆ ಮತ್ತು ಅನ್ಯ ಧರ್ಮೀಯರ ಮತಾಂತರಕ್ಕೆ ಅಪಾರವಾದ ಹಣವನ್ನು ಭಾರತಕ್ಕೆ ಕಳಿಸಿದರೆ ಲಿಂಗಾಯತ ಧರ್ಮೀಯರು ತಮ್ಮ ಧಾರ್ಮಿಕ ಸಾಹಿತ್ಯದ ಪ್ರಚಾರಕ್ಕೆ ಮತ್ತು ಧರ್ಮ ಮಂದಿರಗಳ ನಿರ್ಮಾಣಕ್ಕೆ ತಮ್ಮ ಗಳಿಕೆಯ ಒಂದು ಅಂಶವನ್ನಾದರೂ ಕೊಡುವುದು ಬೇಡವೆ ? ಹಜ್‌ಗೆ ಹೋಗುವ ಶಕ್ತಿ ಎಲ್ಲರಿಗೂ ಇರುವುದಿಲ್ಲ. ಆದರೆ ಹೋಗುವವರ ಕೈಲಿ ತಮ್ಮ ಕಾಣಿಕೆ ಕಳಿಸುವಂತೆ, ಲಿಂಗಾಯತರು ಶರಣ ಮೇಳಕ್ಕೆ ಬರುವ ಪರಿಪಾಠ, ಬರಲು ಆಗದಿದ್ದರೆ ವರ್ಷಕ್ಕೊಮ್ಮೆ ಶರಣ ಮೇಳದ ದಾಸೋಹಕ್ಕೆ ಕಾಣಿಕೆ ಕಳಿಸುವ ಪರಿಪಾಠವನ್ನು ಕಡ್ಡಾಯವಾಗಿಸಿಕೊಳ್ಳಬೇಕು.

ಬನ್ನಿ, ಕೈ ಜೋಡಿಸಿ
ಲಿಂಗಾಯತ ಧರ್ಮಕ್ಷೇತ್ರವಾಗಿ ಕೂಡಲ ಸಂಗಮವನ್ನು ಬೆಳೆಸೋಣ
ಲಿಂಗಾಯತ ಜಾಗತಿಕ ಉತ್ಸವವನ್ನಾಗಿ ಶರಣ ಮೇಳವನ್ನು ವಿಸ್ತರಿಸೋಣ.

ಕದಳಿ ಪ್ರವಾಸ ಕಥನ

ಎಸ್.ಬಿ. ಚಂದ್ರಶೇಖರಪ್ಪ
ದಾವಣಗೆರೆ

ವಿವಿಧ ಕಾರಣಗಳಿಗೋಸ್ಕರ ಜನರು ಪ್ರವಾಸ ಕೈಗೊಳ್ಳುವ ಅಭ್ಯಾಸ ಇಟ್ಟು ಕೊಂಡಿರುತ್ತಾರೆ. ನಾವು ವಿದ್ಯಾರ್ಥಿಗಳಾಗಿದ್ದಾಗ ಉತ್ತರ ಮತ್ತು ದಕ್ಷಿಣ ಭಾರತದ ಪ್ರವಾಸದಲ್ಲಿ ಹಲವಾರು ಸ್ಥಳಗಳನ್ನು ಸಂದರ್ಶಿಸಿದ್ದರೂ ಅವೆಲ್ಲವು ಶೈಕ್ಷಣಿಕ ಮಹತ್ವಕ್ಕೋಸ್ಕರವೇ ವಿನಾ ಬೇರೆ ಯಾವ ಉದ್ದೇಶದಿಂದ ಇರಲಿಲ್ಲ. ಉದಾಹರಣೆಗೆ ಕಲ್ಕತ್ತಾಕ್ಕೆ ಹೋಗಿದ್ದ ಮುಖ್ಯ ಉದ್ದೇಶ ಅಲ್ಲಿ ಹೌರಾ ಬ್ರಿಡ್ಜ್ ಮತ್ತು ವಿಕ್ಟೋರಿಯಾ ಮೆಮೋರಿಯಲ್ ಹಾಲ್, ಇಂಡಿಯನ್ ಸ್ಟ್ಯಾಸ್ಟೀಕಲ್ ಇನ್‌ಸ್ಟಿಟ್ಯೂಟ್ ಇಂತಹವುಗಳನ್ನು ಶೈಕ್ಷಣಿಕ ದೃಷ್ಟಿಯಿಂದ, ಅಂದರೆ ಅವುಗಳ ವಿನ್ಯಾಸ, ತಾಂತ್ರಿಕ ಪರಿಣತಿಗಳ ಅಭ್ಯಾಸವೇ ಹೊರತು ಇನ್ನೇನಲ್ಲ. ಕಾಳಿಕಾದೇವಿ ಮಂದಿರವಾಗಲಿ, ರಾಮಕೃಷ್ಣ ಪರಮಹಂಸರ ಶಾರದಾ ಮಾತೆಯವರ ಆಶ್ರಮವಾಗಲಿ ಅಥವಾ ಬೇಲೂರು ಮಠವಾಗಲಿ, ಈ ಸ್ಥಳಗಳನ್ನು ನೋಡಿದ್ದು ಬಂದಿದ್ದೇವಲ್ಲ ನೋಡಿಯೇ ಹೋಗೋಣ ಎಂಬ ಮನೋಭಾವದಿಂದ. ಅದರಂತೆ ಕದಳಿ ಪ್ರವಾಸವೂ ಕೂಡ, ನಮ್ಮ ಗುರಿ ಕದಳಿಯೇ ಆದರೂ ದಾರಿಯಲ್ಲಿ ಸಿಗುವ ಪುಟ್ಟಪರ್ತಿ, ಮಹಾನಂದಿ, ಶ್ರೀಶೈಲಗಳನ್ನು ನೋಡಿಕೊಂಡೇ ಹೋಗೋಣ ಎಂಬ ಮನೋಭಾವ, ಕದಳಿಯ ದಾರಿಯಲ್ಲೆ ಇವೆಲ್ಲ ಸಿಗುತ್ತವಲ್ಲವೇ ?

ಪೂರ್ವನಿಶ್ಚಯದಂತೆ ನಮ್ಮ ಪ್ರವಾಸ ತಾ. 1-11-2001 ರಂದು ಬೆಳಗ್ಗೆ 7.30 ಘಂಟೆಗೆ ಪ್ರಾರಂಭವಾಗಬೇಕಿತ್ತು. ಅಂದೇ ಹೋಗಬೇಕೆಂದು ನಿಶ್ಚಯಿಸಿದ್ದಾದರೂ ಏಕೆ ? ಹಿಂದೆ ಜಗದ್ಗುರು ಮಾತೆ ಮಹಾದೇವಿಯವರು ತಾವು ಕದಳಿ ಪ್ರವಾಸ ಕೈಗೊಂಡು, 1-11-1973 ರಂದು ಕದಳಿಯಲ್ಲಿದ್ದರು, ಇದು ಕಾಕತಾಳಿಯವೇನೋ. ಅಕ್ಕ ಮಹಾದೇವಿಯವರನ್ನು ಕುರಿತ ಮಹೋನ್ನತ ಕಾದಂಬರಿ ''ತರಂಗಿಣಿ''ಯ ಭಾಗ-5 ಅವರ ಅನುಭವದ ಮೂಸೆಯಿಂದ ಮೂಡಿಬಂದದ್ದು. ಆದ್ದರಿಂದ ನವೆಂಬರ್ 1 ಮಹತ್ವದ ದಿನವೆಂದೇ ನನ್ನ ಭಾವನೆ ಮಾತಾಜಿಯವರ ಕದಳಿ ಪ್ರವಾಸದ ನಂತರ, ಈ 28 ವರ್ಷಗಳ ಮಧ್ಯೆ ಬಹಳಷ್ಟು ಜನ ಕದಳಿ ಸಂದರ್ಶನ ಮಾಡಿರಬಹುದು, ಆದರೆ ಬಸವ ಮಂಟಪದ ಮತ್ತು ಮಾತಾಜಿಯವರ ಆಶೀರ್ವಾದ ಪಡೆದು ಹೋದವರೆಷ್ಟು ಮಂದಿಯೋ ತಿಳಿಯದು.

ದಿನಾಂಕ. 1-11-2001 ರಂದು ಬೆಳಗ್ಗೆ 7-30 ಘಂಟೆಗೆ ಪ್ರಾರಂಭವಾಗ ಬೇಕಾಗಿದ್ದ ನಮ್ಮ ಕದಳಿಯ ಪ್ರವಾಸ ಸ್ವಲ್ಪ ತಡವಾಗಿಯೇ ಅಂದರೆ ಬೆಳಗ್ಗೆ 11-00 ಘಂಟೆಗೆ ಪ್ರಾರಂಭವಾಯ್ತು. ಬೇರೆ ಊರುಗಳಿಂದ ಬರಬೇಕಾಗಿದ್ದ ಪ್ರವಾಸಿ ಶರಣರು, ಹಿಂದಿನ ರಾತ್ರಿಯೇ ಬಸವ ಮಂಟಪಕ್ಕೆ ಬಂದು ಉಳಿದು ಕೊಂಡಿದ್ದರಿಂದ, ಬೆಳಿಗ್ಗೆ ಬೇಗ ಎದ್ದು ಸ್ನಾನ ಪೂಜಾದಿಗಳನ್ನು ಮುಗಿಸಿ ವೇಳೆಗೆ ಸರಿಯಾಗಿ ಸಿದ್ಧರಾದರು. ಬೆಂಗಳೂರಿನ ವಿವಿಧ ಬಡಾವಣೆಗಳಿಂದ ಬರಬೇಕಾದ ಶರಣರು ಒಬ್ಬೊಬ್ಬರಾಗಿ ಬಂದು ಬಸವ ಮಂಟಪದಲ್ಲಿ ಸೇರಿದರು. ಉಪ್ಪಿಟ್ಟಿನ ಉಪಾಹಾರವಾಯ್ತು (ಹೊಟ್ಟೆತುಂಬ) 'ಚಾ'ದ ಸಿಂಚನೆಯೂ ಆಯ್ತು, ಆದರೆ ವಾಹನಗಳ ಸುಳಿವಿಲ್ಲ. ಮಾತಾಜಿಯವರು ಬಂದು ತಮ್ಮ ಆಸನದಲ್ಲಿ ಕುಳಿತ ತಕ್ಷಣ, ಬಸವ ಮಂಟಪದ ಹೊರಗೆ ನಿಂತು ಕುಳಿತು ಆರಾಮ ತೆಗೆದುಕೊಳ್ಳುತ್ತಿದ್ದ ಶರಣರೆಲ್ಲರು ಲಗುಬಗೆಯಿಂದ ಮಾತಾಜಿಯವರ ದರ್ಶನ ಆಶೀರ್ವಚನ ಕೇಳಲು ನಿಶಬ್ದರಾಗಿ ಕುಳಿತರು,

ಮಾತಾಜಿಯವರು ಕದಳಿಯ ಬಗ್ಗೆ ತಮ್ಮ ಅನುಭವಾಮೃತ ಉಣಬಡಿಸಿದ್ದಲ್ಲದೆ ಕೆಲವು ಸಮಸ್ಯೆಗಳಿಗೆ ಪರಿಹಾರ ಸೂಚಿಸಿದರು. ಅಷ್ಟರಲ್ಲಿ ವಾಹನಗಳು ಬಂದಿದ್ದರಿಂದ ಮಾತಾಜಿಯವರು ಮಂಟಪದ ಹೊರಗೆ ಬಂದು ಒಂದು ಕಡೆ ನಿಂತು, ಎಲ್ಲ ಶರಣರು ವಾಹನ ಏರಿ ಕುಳಿತುಕೊಂಡ ನಂತರ ಧ್ವಜ ಆಡಿಸಿ, ವಾಹನಗಳು ಚಲಿಸಿದಂತೆ ಕೈಬೀಸಿ ಬೀಳ್ಕೊಟ್ಟ ದೃಶ್ಯ ಚೇತೋಹಾರಿಯಾಗಿತ್ತು. ಎಷ್ಟೇ ಆಗಲಿ ಮಾತೃಹೃದಯವಲ್ಲವೇ ?

ಪ್ರವಾಸ ಕೈಗೊಂಡ ಶರಣ, ಶರಣೆಯರ ಒಟ್ಟು ಸಂಖ್ಯೆ 114 ಇರಬಹುದು. 38 ಆಸನಗಳ ಕೆ.ಎಸ್.ಆರ್.ಟಿ.ಸಿ.ಯ ಅಲ್ಟ್ರಾ ಲಕ್ಷುರಿ ವಾಹನಗಳು 2, 24 ಆಸನಗಳ ಸ್ವರಾಜ್ ಮಾಜ್ದಾ ವಾಹನ 1, ಒಂದು ಮ್ಯಾಕ್ಸಿ ಕ್ಯಾಬ್ 14 ಆಸನದ್ದು, ಒಟ್ಟು ನಾಲ್ಕು ವಾಹನ. ಬಸವ ಧರ್ಮ ಪೀಠದ ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ, ಮುಂದೆ ಮ್ಯಾಕ್ಸಿಕ್ಯಾಬ್‌ನಲ್ಲಿ ಸ್ವಾಮಿಗಳು ಮೂರೂ ವಾಹನಗಳನ್ನು ಹಿಂದಿಟ್ಟುಕೊಂಡು ಮಾರ್ಗದರ್ಶಿಯಾಗಿದ್ದರು. ಬೆಂಗಳೂರಿನ ಬಸವ ಮಂಟಪದಲ್ಲಿ ಬೆಳಗಿನ ಉಪಾಹಾರ, ಮುಖ್ಯಾಹಾರದಂತೆ ಇದ್ದಿದ್ದರಿಂದ ನಮಗಾರಿಗೂ ಹಸಿವೆಯ ಪರಿವೆಯಾಗಲೇ ಇಲ್ಲ. ಸುಮಾರು ಮಧ್ಯಾಹ್ನ 3-30ರ ಸಮಯಕ್ಕೆ ಪುಟ್ಟಪರ್ತಿ ಸೇರಿದ ಮೇಲೆಯೇ ಹೊಟ್ಟೆ ಚುರುಗುಡಲು ಪ್ರಾರಂಭಿಸಿದ ಮೇಲೆಯೇ, ಊಟದ ನೆನಪಾದದ್ದು. ಊಟದ ಸಮಯ ಮೀರಿದ್ದರಿಂದ ಪುಟ್ಟಪರ್ತಿಯ ಕ್ಯಾಂಟೀನ್‌ನಲ್ಲಿ ದೊರೆತ ತಣ್ಣಗಾಗಿದ್ದ ಉದ್ದಿನ ಬಜ್ಜಿ, ಶಂಕರಪೊಳೆ ತಿಂದು ಚಹಾ ಕುಡಿದು ಹಸಿವನ್ನೇನೊ ತಣಿಸಿದ್ದಾಯ್ತು. ನಮ್ಮ ಶರಣರು ಪುಟ್ಟಪರ್ತಿಯ ಪ್ರಾರ್ಥನಾ ಮಂದಿರವನ್ನು ಸುತ್ತು ಹಾಕಿದ್ದಾಯ್ತು. ಆ ಪರಿಸರದಲ್ಲಿ ಯಾರನ್ನು ಒಂದು ಕಡೆ ನಿಂತುಕೊಳ್ಳಲು ಬಿಡುತ್ತಿರಲಿಲ್ಲ, ನಡೆಯುತ್ತಲೇ ಇರಬೇಕು. ಹೆಜ್ಜೆ ಹೆಜ್ಜೆಗೂ ಕಾವಲುಗಾರರ ತೀಕ್ಷ್ಣ ನೋಟ, ಬಿಗಿಯಾದ ಕಾವಲು, ಒಂದು ತರಹ ಉಸಿರು ಕಟ್ಟಿಸುವ ವಾತಾವರಣ, ಏಕೆಂದು ವಿಚಾರಿಸಲಾಗಿ ಬಾಬಾರಿಗೆ ಕೊಲೆ ಬೆದರಿಕೆ ಇದೆಯಂತೆ ?! ಆದ್ದರಿಂದ ಬಿಗಿಯಾದ ರಕ್ಷಣಾ ವ್ಯವಸ್ಥೆ. ಪ್ರಾರ್ಥನಾ ಹಜಾರಕ್ಕೆ ತೆರಳುವ ಪ್ರತಿಯೊಬ್ಬರನ್ನು ಅಡಿಯಿಂದ ಮುಡಿಯವರೆಗೂ ದೇಹದ ಎಲ್ಲಾ ಭಾಗಗಳಲ್ಲಿ ಕೈಯಾಡಿಸಿ ಯಾವುದೆ ಆತಂಕಕಾರಿ ವಸ್ತುಗಳಿಲ್ಲವೆಂದು ದೃಢಪಡಿಸಿಕೊಂಡು ಒಳಗೆ ಬಿಡುತ್ತಿದ್ದರು. ಧಾರವಾಡದ ಶರಣರೊಬ್ಬರ ಕೊರಳಲ್ಲಿದ್ದ ಲಿಂಗದೇವರ ಕರಡಿಗೆಯನ್ನು ತೆಗೆಯಲು ಹೇಳಿದಾಗ, ತೆಗೆಯಲು ನಿರಾಕರಿಸಿ, ಹಿಂದಿರುಗಿ ಬಂದು ತಮ್ಮ ಬಸವನಿಷ್ಠೆ, ಲಿಂಗದೇವ ಭಕ್ತಿ ಪ್ರದರ್ಶಿಸಿದ್ದು ಪ್ರಸಂಶನೀಯ. (ನನಗೆ ಅನ್ನಿಸಿದ್ದು, ಸಾಕ್ಷಾತ್ ಭಗವಾನ್ ಎಂದು ಪ್ರಸಿದ್ಧಿಯಾಗಿರುವ ಸತ್ಯಸಾಯಿ ಬಾಬಾರಿಗೂ ಕೊಲೆಯ ಹೆದರಿಕೆಯೆ ? ತನ್ನನ್ನು ತಾನು ರಕ್ಷಿಸಿ ಕೊಳ್ಳದ ಈ ದೇವರು ಭಕ್ತರನ್ನು ರಕ್ಷಿಸುವರೇ?)

ನಾವು ಪುಟ್ಟಪರ್ತಿಯನ್ನು ಬಿಟ್ಟಾಗ ಸಂಜೆ 6-00 ಘಂಟೆ. ನಮ್ಮ ಪ್ರವಾಸಿಗರಲ್ಲಿ ಕೆಲವರು ಬಾಬಾರ ದರ್ಶನ ಪಡೆದು ಬರುವಲ್ಲಿ ಸ್ವಲ್ಪ ತಡವಾಯ್ತು. ಅನಂತಪುರಕ್ಕೆ ಬಂದಾಗ ರಾತ್ರಿ 8-30 ಘಂಟೆ, ಮಧ್ಯಾಹ್ನದ ಊಟ ತಪ್ಪಿಹೋಗಿ ಪುಟ್ಟಪರ್ತಿಯ ಉಪಾಹಾರ ಕರಗಿ ಹೊಟ್ಟೆ ತಾಳ ಹಾಕುತ್ತಿತ್ತು. ಊಟದ ಪೂರ್ವಭಾವಿ ತಯಾರಿ ಇಲ್ಲದ್ದರಿಂದ, ಇದ್ದುದರಲ್ಲಿಯೇ ಉತ್ತಮವಾದ ಹೋಟೆಲ್ ಒಂದಕ್ಕೆ ತೆರಳಿ ನಮ್ಮ ಶರಣರು ಸ್ವಲ್ಪ ತಡವಾದರೂ ಹಸಿವನ್ನು ಹಿಂಗಿಸಿಕೊಂಡು ಶಾಂತರಾಗಿ ಮುಂದಿನ ಪ್ರಯಾಣಕ್ಕೆ ಸಿದ್ಧರಾದರು. ಅಷ್ಟರಲ್ಲಿ ರಾತ್ರಿ 10-00

ಘಂಟೆಯಾಗಿತ್ತು. ಸ್ವಾಮಿಗಳು ಕುಳಿತ ವಾಹನ ಮತ್ತು ಮಿನಿ ಬಸ್ ಆಗಲೆ ಮಹಾನಂದಿ ಎಡೆಗೆ ಪ್ರಯಾಣಿಸಿಯಾಗಿತ್ತು. ನಮ್ಮ ಮುಂದಿನ ಗುರಿ ಮಹಾನಂದಿಯಾಗಿತ್ತು, ಅಲ್ಲಿಯೇ ನಾವು ರಾತ್ರಿ ತಂಗಬೇಕಾಗಿತ್ತು, ಆದರೆ ನಮ್ಮ KSRTCಯ ಎರಡೂ ವಾಹನ ಚಾಲಕರು ರಾತ್ರಿಯಲ್ಲಿ ವಾಹನ ಓಡಿಸಲು ನಿರಾಕರಿಸಿದರು. ಕಾರಣ ಬೆಂಗಳೂರಿನಿಂದ ಅನಂತಪುರದವರೆಗೆ ಒಂದೇ ಸಮನೆ ವಾಹನ ಓಡಿಸಿದ್ದರಿಂದ ಅವರಿಗೆ ವಿಶ್ರಾಂತಿಯ ಅವಶ್ಯಕತೆ ಇತ್ತು ಮತ್ತು ರಾತ್ರಿ ವಾಹನ ಓಡಿಸಲು ದರೋಡೆಕೋರರ, ನಕ್ಸಲೀಯಟ್‌ರ ಭಯ. ಇಂತಹ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿ ಅನಂತಪುರದಲ್ಲಿಯೇ ಉಳಿಯುವ ಪರಿಸ್ಥಿತಿ ಉದ್ಭವವಾಯ್ತು. ಸುಮಾರು 76 ಶರಣರನ್ನು ಎಲ್ಲಿ ಉಳಿಸುವುದು ಎಂಬ ಚಿಂತೆ ಕಾಡುತ್ತಿದ್ದ ಸಮಯದಲ್ಲಿ ಆಪತ್ ಬಾಂಧವರಂತೆ ಒಬ್ಬರು ರಸ್ತೆಯಲ್ಲಿ ಮೋಟಾರ್ ಸೈಕಲ್‌ನಲ್ಲಿ ನಿಧಾನವಾಗಿ ಹೋಗುತ್ತಿದ್ದರು, ನಮ್ಮ ಗುಂಪು ನೋಡಿ, ನಮ್ಮ ತೊಂದರೆಯನ್ನು ಅರಿತು ನಮ್ಮನ್ನು ಒಂದು ಕಲ್ಯಾಣ ಮಂಟಪಕ್ಕೆ ಕರೆದೊಯ್ದು ಮಲಗುವ ವ್ಯವಸ್ಥೆ ಮಾಡಿದರು. ಬೆಳಗ್ಗೆ 5-00 ಘಂಟೆಗೆ ಎಚ್ಚರವಾದಾಗ ನಮ್ಮ ಶರಣೆಯರು ಆಗಲೇ ಸ್ನಾನ ಮುಗಿಸಿ ಲಿಂಗದೇವನ ಪೂಜೆಯಲ್ಲಿ ನಿರತರಾಗಿದ್ದರು. ಕತ್ತಲೆ ಬೆಳಕಿನಲ್ಲಿ ನಾವು ಉಳಿದಿದ್ದ ಸ್ಥಳದ ಪರಿಚಯ ನಮಗೆ ಅಷ್ಟಾಗಿ ಗೊತ್ತಾಗಿರಲಿಲ್ಲ. ಸ್ವಲ್ಪ ಬೆಳಗಾಗುತ್ತಲೇ ನೋಡಲಾಗಿ, ನಾವು ಉಳಿದಿದ್ದು ಒಂದು ದೊಡ್ಡ ಕೆರೆಯ ಏರಿ (Tank Bund) ಮೇಲೆ ಕಟ್ಟಲಾಗಿದ್ದ ಕಲ್ಯಾಣ ಮಂಟಪದಲ್ಲಿ. ಕೆರೆಯ ಏರಿಯ ಮೇಲ್ಭಾಗದ (Top of Bund) ಅಗಲ ಸುಮಾರು 120 ಅಡಿಗಳಿರಬಹುದು. ಉದ್ದ ಸುಮಾರು 1.5 ಕಿ.ಮೀ ಇಂದ 2.0 ಕಿ.ಮೀ. ಇರಬಹುದು ಉದ್ದದ ಅರ್ಧದಷ್ಟು ಭಾಗದಲ್ಲಿ ಮಧ್ಯದಲ್ಲಿ ಕಾಂಕ್ರೀಟ್ ರಸ್ತೆ, ರಸ್ತೆಯ ಎರಡೂ ಬದಿಗೂ (ಕೆರೆಯ ಏರಿ ಮೇಲೆಯೇ) ಒಂದು ಬದಿಯಲ್ಲಿ ಸಣ್ಣ ದೊಡ್ಡ ದೇವಸ್ಥಾನಗಳ ಸಾಲು ಇನ್ನೊಂದು ಬದಿಯಲ್ಲಿ ಸ್ನಾನ ಘಟ್ಟಗಳು, ವಿವಿಧ ಜಾತಿಯ ದೇವರುಗಳಿಗೆ ಪ್ರೀತಿಯಾದ ಮರಗಳು. ಜಿ.ಐ ಪೈಪುಗಳಿಂದ ನಿರ್ಮಿಸಿದ್ದ ಸರತಿಯ ಸಾಲುಗಳ ತಡೆಗಳನ್ನು ನೋಡಿದರೆ ಬಹಳ ಜನ ಭಕ್ತರೂ ಇಲ್ಲಿಗೆ ಬರುತ್ತಾರೆಂದು ತಿಳಿಯಿತು. ಇದೊಂದು ಪ್ರಶಾಂತವಾದ ಸ್ಥಳ, ಕೆರೆ ತುಂಬಿತ್ತು. ಒಂದು ಕಡೆ ನೀರು, ಇನ್ನೊಂದು ಕಡೆ ಭತ್ತದ ಗದ್ದೆಗಳು. ನೋಡಲು ಆನಂದವಾಗುತ್ತಿತ್ತು. ಇದು ಅನಂತಪುರಕ್ಕೆ ಹೊಂದಿಕೊಂಡಂತೆ ಹೊರ ವಲಯದಲ್ಲಿ 6 ಘಂಟೆಗೆಲ್ಲ ನಾವು ಮಹಾನಂದಿಗಭಿಮುಖವಾಗಿ ಹೊರಟು ತಾಡಪತ್ರಿ ಎಂಬ ಊರಿಗೆ ಬಂದಾಗ ಸುಮಾರು 9 ಘಂಟೆ, ಅಲ್ಲಿ ಉಪಾಹಾರ ಮುಗಿಸಿ ಮಹಾನಂದಿ ಸೇರಿದಾಗ ಮಧ್ಯಾಹ್ನ 1-30 ಘಂಟೆ. ಲಗುಬಗೆಯಿಂದ ಇಳಿದು ದೇವಸ್ಥಾನದ ಹೆಬ್ಬಾಗಿಲಿಗೆ ಬರುವುದಕ್ಕೂ ಬಾಗಿಲಿಗೆ ಬೀಗ ಜಡಿಯಲಿಕ್ಕು ಸರಿಹೋಯ್ತು. ನಮ್ಮ ಶರಣರೇನು ನಿರಾಶರಾಗಲಿಲ್ಲ ಶರಣರೇನೂ ದೇವಸ್ಥಾನ ಪ್ರೇಮಿಗಳಲ್ಲವಲ್ಲ ! ದೇವಸ್ಥಾನ ಮುಂಭಾಗದಲ್ಲಿದ್ದ ತಿಳಿನೀರ ಕೊಳ ತುಂಬಿ ತುಳುಕುತ್ತಿತ್ತು, ನೀರು ಬರುತ್ತಿತ್ತು ಮತ್ತು ಮುಂದೆ ಹರಿದು ಹೋಗುತ್ತಿತ್ತು ಆದರೆ ಅದು ಗುಪ್ತಗಾಮಿನಿಯಾಗಿತ್ತು. ಶರಣರಲ್ಲಿ ಕೆಲವರು ನೀರಿಗೆ ಧುಮುಕಿ ತಮ್ಮ ಆಯಾಸ ಪರಿಹರಿಸಿಕೊಂಡರು. ಅಲ್ಲಿಯೇ ಇದ್ದ ಹೋಟೆಲ್‌ನಲ್ಲಿ ಊಟ ಮುಗಿಸಿ, ಮಾರಾಟವಾಗುತ್ತಿದ್ದ ಬಿದಿರು ಕೋಲುಗಳನ್ನು, ಕದಳಿ ಬೆಟ್ಟ ಹತ್ತಲು ಊರುಗೋಲಾಗಿ ಉಪಯೋಗಿಸಲು ಎಲ್ಲರೂ ಖರೀದಿಸಿಕೊಂಡು ದೇವಸ್ಥಾನದ ಬಾಗಿಲು ತೆಗೆಯುವುದನ್ನು ಕಾಯದೆ ಪ್ರಯಾಣ

ಮುಂದುವರಿಸಿದೆವು. ಆತ್ಮಕೂರು ಶ್ರೀಶೈಲದ ಪಾದ. ಅಲ್ಲಿಂದಲೆ ನಲ್ಲಮಲೈ ಬೆಟ್ಟಗಳ ಸಾಲುಗಳು ಪ್ರಾರಂಭವಾಗುತ್ತವೆ. ಇಲ್ಲಿಂದ ಮುಂದೆ ದುರ್ಗಮ ರಸ್ತೆಯಲ್ಲಿ ಹೋಗಬೇಕು. ಸುಮಾರು ಇಪ್ಪತ್ತು-ಮೂವತ್ತು ಕಿ.ಮಿ. ಕ್ರಮಿಸಿದ ನಂತರ ಸಿಗುವ ಊರಿನವರೆಗೂ ಘಟ್ಟಪ್ರದೇಶ ನಂತರ ಶ್ರೀಶೈಲದವರೆಗೂ ಅಂತಹ ಹೇಳಿಕೊಳ್ಳುವ ಘಟ್ಟಗಳೇನು ಇಲ್ಲ. ಘಟ್ಟ ಪ್ರದೇಶ ಮುಗಿಯುವಷ್ಟರಲ್ಲಿ ಕತ್ತಲೆ ಆವರಿಸಿಕೊಂಡಿದ್ದರಿಂದ ಮುಂದಿನ ದಾರಿಯ ಬಗ್ಗೆ ತಿಳಿಯದಾಯ್ತು. ಶ್ರೀಶೈಲ ತಲುಪಿದಾಗ ರಾತ್ರಿ 8-15 ಘಂಟೆ. ಶ್ರೀಶೈಲ ಜಗದ್ಗುರು ಪಂಡಿತಾರಾಧ್ಯ ಪ್ರವಾಸಿ ಮಂದಿರದಲ್ಲಿ ಉಳಿಯುವುದಕ್ಕೆ ವ್ಯವಸ್ಥೆಯಾಗಿತ್ತು. ಒಂದೊಂದು ಕೊಠಡಿಯಲ್ಲಿ 5-6 ಜನರಂತೆ, ಸೇರಿಕೊಂಡೆವು. ಮುಖಮಾರ್ಜನೆಯ ನಂತರ ಶರಣರೆಲ್ಲರು ಹಿಂಡು ಹಿಂಡಾಗಿ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ ದರ್ಶನ ಪಡೆಯಲು ಹೊರಟರು. ನಾವು ಹೋದಾಗ ಭಕ್ತರ ಒತ್ತಡವೇನು ಇರಲಿಲ್ಲ. ಬಹಳ ನಿಧಾನವಾಗಿ ನೆಲಮಟ್ಟದಲ್ಲಿಯೇ ಇದ್ದ ಚಿಕ್ಕ ಸ್ಥಾವರಲಿಂಗವನ್ನು ದರ್ಶಿಸಿದೆವು. ಭಾರತ ದೇಶದಲ್ಲಿರುವ 12 ಜ್ಯೋತಿರ್ಲಿಂಗಗಳಲ್ಲಿ ಇದೂ ಒಂದು. ದೇವಸ್ಥಾನದ ಸಂಕೀರ್ಣದಲ್ಲಿ ಹಲವಾರು ದೇವಸ್ಥಾನಗಳಿವೆ. ಅವುಗಳಲ್ಲಿ ನಮ್ಮ ಗಮನ ಸೆಳೆದಿದ್ದು ಅಕ್ಕಮಹಾದೇವಿ ಮತ್ತು ಹೇಮರೆಡ್ಡಿ ಮಲ್ಲಮ್ಮ ಈ ಇಬ್ಬರೂ ಶರಣೆಯರಿರುವ ಒಂದು ಚಿಕ್ಕ ದೇವಾಲಯ. ಈ ಇಬ್ಬರೂ ಶರಣೆಯರ ಮೂರ್ತಿಗಳನ್ನು ಒಂದೇ ಪೀಠದಲ್ಲಿ ಅಕ್ಕಪಕ್ಕದಲ್ಲಿ ಕುಳ್ಳಿರಿಸಿ, ಇಬ್ಬರ ಕೈಯಲ್ಲೂ ಸ್ಥಾವರಲಿಂಗಾಕೃತಿಗಳನ್ನು (ಇಷ್ಟಲಿಂಗಾಕೃತಿಗಳಲ್ಲ) ಅಳವಡಿಸಿದ್ದ ಶಿಲಾಮೂರ್ತಿಗಳಿಗೆ ನಮ್ಮ ನಮನ ಸಲ್ಲಿಸಿ, ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿ ಸ್ವಲ್ಪವೇ ದೂರದಲ್ಲಿರುವ ಭ್ರಮರಾಂಬ ದೇವಿಯ ಆಸ್ಥಾನಕ್ಕೂ ಭೇಟಿ ನೀಡಿ ಹೊರಬಂದಾಗ, ತಿಳಿದದ್ದು ಮಲ್ಲಿಕಾರ್ಜುನ ಸ್ವಾಮಿಯ ಪೂಜಾರಿಗಳ ಕೊರಳಲ್ಲಿ ಕರಡಿಗೆ ಇದ್ದು ವೀರಶೈವರಿರಬೇಕು. ಕರಡಿಗೆಯೊಳಗಿದ್ದದ್ದು ಸ್ಥಾವರಲಿಂಗಾಕಾರದ ಲಿಂಗವೊ ಅಥವಾ ವಿಶ್ವಾತ್ಮನ ಕುರುಹಾದ ಇಷ್ಟಲಿಂಗವೊ ತಿಳಿಯದು. ಆದರೆ ಭ್ರಮರಾಂಬ ದೇವಿಯ ಪೂಜಾರಿಗಳು ಮಾತ್ರ ಜನಿವಾರ ಧರಿಸಿದ್ದರಿಂದ ದ್ವಿಜರೇ ಇರಬೇಕೆಂದು ನಮ್ಮ ಊಹೆ, ಇರಲಿ ಆಗಮಿಕ ವೈದಿಕ ಧರ್ಮದ ವಿಷಯದಲ್ಲಿ ನಾವೇಕೆ ತಲೆಕೆಡಿಸಿಕೊಳ್ಳಬೇಕು ಎಂದು ಸುಮ್ಮನಾದೆವು. ಇನ್ನೊಂದು ಸಣ್ಣ ದೇವಸ್ಥಾನ ಅದು ಮುಡಿ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ. ಮೊದಲಿಗೆ ಇದೇ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯಂತೆ ನಂತರ ಕಾಳಾಮುಖ ಸಂಪ್ರದಾಯದ ಆಚಾರ್ಯರು ಆ ಕಾಲದಲ್ಲಿ ಆಳುತ್ತಿದ್ದ ಚಾಲುಕ್ಯ ಚಕ್ರವರ್ತಿಗಳಿಂದ ಮತ್ತು ಕಾಕತೀಯರಿಂದ ಹೊಸದಾಗಿ ಬೃಹದಾಕಾರದ ದೇವಸ್ಥಾನ ಕಟ್ಟಿಸಿ ಅದರಲ್ಲಿ ಬೇರೆ ಲಿಂಗ ಪ್ರತಿಷ್ಠಾಪಿಸಿ ಪೂಜಿಸಿದ್ದರಿಂದ ಅದು ಮುಡಿ ಮಲ್ಲಿಕಾರ್ಜುನ ಎಂದು ಪೂಜೆಗೊಳ್ಳುತ್ತಿದೆಯಂತೆ. ಪ್ರಯಾಣದ ಆಯಾಸದಿಂದ ಕೂಲಂಕುಶವಾಗಿ ದೇವಸ್ಥಾನ ನೋಡಲಾಗಲಿಲ್ಲ. ಹಿಂದಿರುಗಿ ಬಂದು ನಿದ್ರೆ ಮಾಡಿದೆವು. (ಇದು 2-11-2001)

ಮರುದಿನ ಅಂದರೆ 3-11-2001ರ ಬೆಳಗ್ಗೆ ಬೇಗ ಎದ್ದು ಸ್ನಾನ ಪೂಜಾದಿಗಳನ್ನು ಮುಗಿಸಿ 6-30 ಘಂಟೆಗೆಲ್ಲಾ ಕದಳಿಯ ಕಡೆಗೆ ಪ್ರಯಾಣ ಬೆಳೆಸಿದೆವು. ಹಿಂದೆ ಎಲ್ಲಾ ಕದಳಿಗೆ ನಡೆದೇ ಹೋಗಬೇಕಾಗಿತ್ತು. ಗಿರಿ-ಕಂದರ, ಹಳ್ಳ-ಕೊಳ್ಳ ದಾಟಿ ಕದಳಿಗೆ ಹೋಗಿ ಬಂದರೆ ಮರು ಹುಟ್ಟು ಎಂಬ ನಾಣ್ನುಡಿ.

... ಮುಂದುವರಿಯುವುದು

ಶರಣ ವ್ರತ ಸ್ವೀಕಾರ

-ಮಾತಾಜಿ

ಸಿಖ್ ಧರ್ಮದ ಖಾಲ್ಸಾ, ಇಸ್ಲಾಂ ಧರ್ಮದ ಹಜ್‌ದಿಂದ ಪ್ರೇರಿತರಾಗಿ, ಪಂಢರಾಪುರದ ವಾರಕರಿಯ ದಿಂಡಿ ಉತ್ಸವ, ಶಬರಿ ಮಲೈದ ಅಯ್ಯಪ್ಪಸ್ವಾಮಿ ಭಕ್ತಿಪಂಥದ ಆಚರಣೆಗಳಿಂದ ಸ್ಫೂರ್ತಿ ಪಡೆದು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ, ಕೂಡಲ ಸಂಗಮವನ್ನು ಧರ್ಮಕ್ಷೇತ್ರವೆಂದು ಗುರುತಿಸಿಕೊಂಡು 1988ರಲ್ಲಿ ಮೊಟ್ಟ ಮೊದಲ ಶರಣ ಮೇಳವನ್ನು ನಡೆಸಲಾಯಿತು. ಇದು ವಿಶ್ವಗುರು ಬಸವಣ್ಣನವರೇ ಆದಿಯಾಗಿ ಶರಣ ಪುಂಗವರೆಲ್ಲರ ಅಪೇಕ್ಷೆ ಮತ್ತು ಸಂಕಲ್ಪ ಎಂಬುದು ನಮಗೆಲ್ಲ ಮನದಟ್ಟಾಗಿದೆ. ಧರ್ಮಪಿತ ಬಸವಣ್ಣನವರು ಅವರ ಕಾಲದಲ್ಲಿಯೇ ಆಗಾಗ ಗಣಪರ್ವಗಳನ್ನು ನಡೆಸಿ ಶರಣರನ್ನು ಒಂದೆಡೆಯಲ್ಲಿ ಸಮಾವೇಶಗೊಳಿಸುತ್ತಿದ್ದರು. ಇದಕ್ಕೆ ಅಂಗ, ವಂಗ, ಕಳಿಂಗ, ಗುರ್ಜರ ದೇಶಗಳಿಂದೆಲ್ಲ ಭಕ್ತರು ಬರುತ್ತಿದ್ದರು ಎಂಬುದನ್ನು ಹರಿಹರ ಮಹಾಕವಿ, ಸಿಂಗಿರಾಜ ಮುಂತಾದವರು ಬಣ್ಣಿಸಿದ್ದಾರೆ.

ಮಡಿವಾಳ ಮಾಚಿದೇವರು ಕಾಲಜ್ಞಾನ ವಚನದಲ್ಲಿ ಹೀಗೆ ಹೇಳುತ್ತಾರೆ.

೧. ದಕ್ಷಿಣದ ಕೃಷ್ಣೆಗೆ ಕರೆವರೈಯ್ಯ ಜನ ನೆರೆವರಯ್ಯ

೨. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ, ಅರಿದು ನೋಡುವುದು
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು

೩. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು.

ಪರಿಧಾವಿ ಸಂವತ್ಸರವು ಕ್ರಿ.ಶ. 2032ಕ್ಕೆ ಬರುವುದು. ಈಗ ನಾವು ಎಷ್ಟೇ ಕಳಕಳಿಯಿಂದ ನಿಷ್ಕಲ್ಮಶ ಮನಸ್ಸಿನಿಂದ ಕರೆದರೂ ಲಿಂಗಾಯತರು ಎಲ್ಲರೂ ಒಟ್ಟಾಗಿ ಸೇರದೆ, ಶರಣ ಮೇಳಕ್ಕೆ ಬರದೆ ಗುಂಪುಗುಂಪಾಗಿ ಇರುವರು. ಆದರೆ ಆದಿ ಶರಣರ ಸಂಕಲ್ಪ, ನಮ್ಮ ಆಶಯ ಖಂಡಿತ ವ್ಯರ್ಥವಾಗದು. ಈ ಎಲ್ಲ ಭೇದಗಳು ಅಳಿದು ಕ್ರಿ.ಶ. 2032ರ ಸುಮಾರಿಗೆ (ನಾವು ಅಷ್ಟು ಕಾಲ ಬದುಕಿರದೆ ಇದ್ದರೂ) ಎಲ್ಲ ಬಸವ ಭಕ್ತರು, ಲಿಂಗಾಯತರು ಶರಣ ಮೇಳಕ್ಕೆ, ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಬರಲು ಆರಂಭಿಸುವರು. ಇದು ಮಾಚಿದೇವರ ವಾಣಿ.

ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಜನವರಿ 11ರಿಂದ ೧೫ರವರೆಗೆ ಶರಣ ಮೇಳವು 1988 ರಿಂದಲೂ ನಡೆಯುತ್ತ ಬರುತ್ತಿದ್ದು 2002 ಇಸವಿಗೆ 15ನೆಯ ಶರಣ ಮೇಳ ಒದಗಿ ಬಂದಿದೆ. ಕೇವಲ ಯಾಂತ್ರಿಕವಾಗಿ ಬಂದು ಹೋಗುವ ಪರಿಪಾಠಕ್ಕಿಂತಲೂ 'ಶರಣ ವ್ರತ'ವನ್ನು ಸ್ವೀಕಾರ ಮಾಡಿ ಬರುವ ಪರಿಪಾಠವು ಅತ್ಯುತ್ತಮ. ಈಗಾಗಲೇ 3-4 ವರ್ಷಗಳಿಂದ ಕೆಲವರು ಶರಣ ವ್ರತಧಾರಿಗಳಾಗಿ ಬರುತ್ತಲಿದ್ದಾರೆ. ಈಗ ನಾವು ಇದಕ್ಕೆ ನಿರ್ದಿಷ್ಟ ರೂಪ ಕೊಡಬೇಕಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು ವ್ರತ ಸ್ವೀಕಾರ ಮಾಡುವುದಕ್ಕೆ ಒತ್ತು ಕೊಡಬೇಕು. ಇದಕ್ಕಾಗಿ ಕೆಲವು ನಿಯಮಾವಳಿ ಸೂಚಿಸಲಾಗಿದೆ.

ಜನವರಿ 14ರಂದು ಬೆಳಗ್ಗೆ ಗಣಲಿಂಗ ದರ್ಶನ ಪಡೆಯುವುದು, 11ರಿಂದ 2ರವರೆಗೆ ನಡೆಯುವ ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು, ಸಂಜೆ ನಡೆಯುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಪಾಲ್ಗೊಳ್ಳುವ ಕ್ರಿಯೆಯಿಂದ ಆ ವರ್ಷದ ವ್ರತ ಪೂರ್ತಿಯಾಗುತ್ತದೆ. ಈ ದಿನಾಂಕಕ್ಕೆ ಪೂರ್ವಭಾವಿಯಾಗಿ 10,20,30,40 ದಿವಸಗಳ ವ್ರತವನ್ನು ಶರಣ ಬಂಧುಗಳು ಕೈಗೊಳ್ಳಬೇಕು.

೧. ಗುರು ಸಾರಾಯ ಸಂಪದ್ ವ್ರತ : 40 ದಿವಸಗಳ ವ್ರತ ; ಡಿಸೆಂಬರ್ 6ರಂದು ಪ್ರಾರಂಭ
೨. ಲಿಂಗ ಸಾರಾಯ ಸಂಪದ್ ವ್ರತ : 30 ದಿವಸಗಳ ವ್ರತ ; ಡಿಸೆಂಬರ್ 16ರಂದು ಪ್ರಾರಂಭ
೩. ಜಂಗಮ ಸಾರಾಯ ಸಂಪದ್ ವ್ರತ : 20 ದಿವಸಗಳ ವ್ರತ ; ಡಿಸೆಂಬರ್ 26ರಂದು ಪ್ರಾರಂಭ.
೪. ಪ್ರಸಾದ ಸಾರಾಯ ಸಂಪದ್ ವ್ರತ : 10 ದಿವಸಗಳ ವ್ರತ ; ಜನವರಿ 5ರಂದು ಪ್ರಾರಂಭ.

ಈ ನಾಲ್ಕು ಅವಧಿಯ ವ್ರತಗಳಲ್ಲಿ ಯಾವುದನ್ನೇ ಆಯ್ದುಕೊಂಡರೂ ಶರಣ-ಶರಣೆಯರು, ಮಕ್ಕಳು-ಮುದುಕರು ಯಾರೇ ಇರಲಿ ಮುಂದೆ ತಿಳಿಸುವ ನೇಮಗಳನ್ನು ನಡೆಸಬೇಕು.

೧. ಬಿಳಿಯ ವಸ್ತ್ರಗಳನ್ನು ಧರಿಸಬೇಕು. ವ್ರತದ ಅವಧಿಯಲ್ಲಿ ಶರಣರಿರಲಿ, ಶರಣೆಯರೇ ಇರಲಿ ಬಿಳಿಯ ವಸ್ತ್ರಗಳನ್ನು ಧರಿಸಿರಬೇಕು, ಕಾಲಲ್ಲಿ ಚಪ್ಪಲಿ ಧರಿಸುವುದನ್ನು ತೊರೆಯಬೇಕಾಗಿಲ್ಲ. ಚಪ್ಪಲಿ ತೊಡುವುದರಿಂದ ಕಾಲಿಗೆ ರಕ್ಷೆ ಇರುತ್ತದೆ. ಚಪ್ಪಲಿ ಮೈಲಿಗೆ ಎಂಬ ತಪ್ಪು ತಿಳುವಳಿಕೆಯಿಂದ ಯಾರೋ ಬೇರೆ ವ್ರತಗಳವರನ್ನು ನೋಡಿ ಚಪ್ಪಲಿ ತೊಡುವುದನ್ನು ಬಿಡಬೇಕಾಗಿಲ್ಲ.
೨. ಪೂಜೆ-ಪಠಣ ಮಾಡುವಾಗ ಬಿಳಿಯ ವಸ್ತ್ರದ ಮೇಲೆ ಕಾವಿಯ ಸ್ಕಾರ್ಫನ್ನು ಕಡ್ಡಾಯವಾಗಿ ಧರಿಸಬೇಕು.
೩. ಶರಣರು ತಲೆಯ ಮೇಲೆ ಷಟ್ಕೋನದ ಟೋಪಿ ಧರಿಸಿರಬೇಕು.
೪. ಬೆಳಗ್ಗೆ-ಸಂಜೆ ಎರಡೂ ಹೊತ್ತು ಸ್ನಾನ ಮಾಡಬೇಕು. ಲಿಂಗಾಯತರು, ಇಷ್ಟಲಿಂಗಾರ್ಚನೆ, ಗುರು ಬಸವಾರ್ಚನೆ ಮಾಡಬೇಕು. ಲಿಂಗಾಯತೇತರರ ಬಸವ ಭಕ್ತರು ಗುರು ಬಸವಾರ್ಚನೆ ಮಾಡಬೇಕು.
೫. ಎರಡೂ ಹೊತ್ತು ವಚನ ಪಠಣ ಮಾಡಬೇಕು. ಬೆಳಗ್ಗೆ 108 ವಚನ ಸಂಜೆ 108 ವಚನ ಪಠಿಸಬೇಕು. ಓದಲು ಬರದ ಅವಿದ್ಯಾವಂತರು 'ಓಂ ಶ್ರೀ ಗುರು ಬಸವಲಿಂಗಾಯ ನಮಃ ' ಮಂತ್ರವನ್ನು ೧೦೮ರಂತೆ ಎರಡೂ ಹೊತ್ತು ಪಠಿಸಬಹುದು.
೬. ಸಂಜೆಯ ವೇಳೆಯಲ್ಲಿ ಶರಣ ವ್ರತಿಗಳೆಲ್ಲರು ಒಂದು ಸ್ಥಳದಲ್ಲಿ ಸಾಮೂಹಿಕವಾಗಿ ಸೇರಿ ನೆನಹು-ಸಂಕ್ಷಿಪ್ತ ಪ್ರಾರ್ಥನೆ ಮಾಡಿ, ವಚನ ಪಠಣ ಮಾಡಿ, ವಚನ ಲೇಖನವನ್ನು ಮಾಡಬೇಕು. ಪ್ರಾರ್ಥನೆ-ವಚನ ಪಠಣದ ನಂತರ, ಮೌನವಾಗಿ ವಚನ ಲೇಖನವನ್ನು ಕೈಗೊಳ್ಳಬೇಕು. ಬರೆಯಲು ಬರದವರು ಕನಿಷ್ಠ "ಓಂ ಶ್ರೀ ಗುರು ಬಸವಲಿಂಗಾಯ ನಮಃ" ಬರೆಯಲು ಕಲಿತು, ಅದೇ ಮಂತ್ರವನ್ನು ಬರೆಯಬೇಕು. ವಚನ ಲೇಖನ ಗ್ರಂಥವನ್ನು ಬರುವಾಗ ತಮ್ಮ ಜೊತೆಗೆ ತಂದು, ಪುನಃ ಮನೆಗೆ ಹೋಗುವಾಗ ಒಯ್ದು, ಮನೆಯಲ್ಲೂ ಬರಹ ಮುಂದುವರಿಸಬಹುದು.
೭. ವ್ರತ ಕಾಲದಲ್ಲಿ ಕಾಯಕವನ್ನು ಬಿಡಬೇಕಾಗಿಲ್ಲ. ಇನ್ನೂ ನಿಷ್ಠೆಯಿಂದ ಮಾಡಬೇಕು.
೮. ಲಿಂಗಾಯತರು ಭಸ್ಮ, ರುದ್ರಾಕ್ಷಿ, ಇಷ್ಟಲಿಂಗಗಳನ್ನು ಸದಾ ಧರಿಸಿರಬೇಕು, ಲಿಂಗಾಯತೇತರ ವ್ರತಧಾರಿಗಳು ಭಸ್ಮ-ರುದ್ರಾಕ್ಷಿಗಳನ್ನು ತಪ್ಪದೇ ಧರಿಸಿರಬೇಕು.
೯. ಸ್ತ್ರೀಯರು ಮುಟ್ಟು-ಮೈಲಿಗೆ ಮುಂತಾದ ಭ್ರಾಂತಿಗೆ ಒಳಗಾಗಬಾರದು.
೧೦. ವ್ರತದ ಅವಧಿಯಲ್ಲಿ ಧೂಮ್ರಪಾನ, ತಂಬಾಕು ಸೇವನೆ, ಮಾಂಸಾಹಾರ, ದಾಂಪತ್ಯ ಸುಖ ಪೂರ್ಣವಾಗಿ ವರ್ಜಿಸಬೇಕು, ಮದ್ಯಪಾನ ವ್ಯಸನಿಗಳು ಮತ್ತು ಮಾಂಸಾಹಾರಿಗಳು ವ್ರತದ ಅವಧಿಯ ನಂತರವೂ ಇವನ್ನು ಬಿಟ್ಟು ಶುದ್ಧಿಯನ್ನು ಕಾಯ್ದುಕೊಂಡರೆ ಉತ್ತಮ.
೧೧. ವ್ರತದ ಅವಧಿಯಲ್ಲಿ ಲಿಂಗಾಯತರು ಪ್ರತಿ ದಿವಸವೂ ಎರಡೂ ಹೊತ್ತು ಇಷ್ಟಲಿಂಗ ಪೂಜೆ ಮಾಡಿ, ನಂತರ ಗುರು ಬಸವಣ್ಣನವರ 108 ಸ್ತುತಿಗಳನ್ನು ಹೇಳಿ ಪೂಜಿಸಿ, ತದ ನಂತರ ವಚನ ಪಠಣ ಮತ್ತು ವಚನ ಲೇಖನ ವಿಧಿಯನ್ನು ಪೂರ್ಣಗೊಳಿಸಬೇಕು. ವ್ರತದ ಅವಧಿಯಲ್ಲಿ ಎಷ್ಟು

ಸೋಮವಾರ ಬರುತ್ತವೋ ಅಷ್ಟು ಸೋಮವಾರ ಅಥವಾ ಕಾಯಕ ಜೀವಿಗಳು ಸೋಮವಾರ ರಜೆ ಇಲ್ಲದಿರುವುದರಿಂದ ಭಾನುವಾರದಂದು ಬಸವೇಶ್ವರ ಪೂಜಾವ್ರತವನ್ನು ಪೂರ್ಣ ರೂಪದಲ್ಲಿ ಮಾಡಬೇಕು. ಲಿಂಗಾಯತೇತರರು ಇಷ್ಟಲಿಂಗ ದೀಕ್ಷೆ ಪಡೆದಿರದಿದ್ದರೆ, ಆಗ ದಿನನಿತ್ಯ ಗುರುಬಸವಾರ್ಚನೆ ಮಾಡಿ 108 ಬಸವ ಮಂತ್ರ ಪಠಣ ಮಾಡಬೇಕು. ವಾರಕ್ಕೊಮ್ಮೆ ಪೂರ್ತಿ ಪೂಜಾವ್ರತ ಮಾಡಬೇಕು. ವಚನ ಪಠಣ ಮತ್ತು ವಚನ ಲೇಖನಗಳನ್ನು ಕಡ್ಡಾಯವಾಗಿ ಮಾಡಬೇಕು.
೧೨. ರಾಷ್ಟ್ರೀಯ ಬಸವ ದಳಗಳು ಇದ್ದಲ್ಲಿ ಹೆಚ್ಚು ಹೆಚ್ಚು ಜನರನ್ನು ಅವರ ಸಮಯಾವಕಾಶಕ್ಕೆ ತಕ್ಕಂತೆ 10, 20, 30, 40 ದಿವಸಗಳ ಶರಣ ವ್ರತಿಗಳಾಗಲು ಪ್ರೇರೇಪಿಸಬೇಕು. ಕೂಡಲ ಸಂಗಮಕ್ಕೆ ಶರಣ ಮೇಳಕ್ಕೆ ಕರೆ ತರಬೇಕು. ಅಲ್ಲಿ ಅವರವರ ರಾಷ್ಟ್ರೀಯ ಬಸವ ದಳಗಳಿಂದ ಶರಣ ವ್ರತಧಾರಿಗಳ ಪಟ್ಟಿಯನ್ನು ಸಲ್ಲಿಸಬೇಕು. ಅತಿ ಹೆಚ್ಚಿನ ಶರಣ ವ್ರತಿಗಳನ್ನು ಕರೆತಂದ ರಾಷ್ಟ್ರೀಯ ಬಸವ ದಳಗಳಿಗೆ ಕ್ರಮವಾಗಿ ೩ ಬಹುಮಾನಗಳನ್ನು ಕೊಡಲಾಗುವುದು. ರಾಷ್ಟ್ರೀಯ ಬಸವ ದಳ ಇಲ್ಲದಿರುವಲ್ಲಿ ವೈಯಕ್ತಿಕವಾಗಿಯೇ ಶರಣ ಬಂಧುಗಳು ವ್ರತವನ್ನು ಧಾರಣೆ ಮಾಡಬಹುದು.
ಅದೇ ರೀತಿ, ಶರಣ ವ್ರತ ಸ್ವೀಕಾರ ಮಾಡದೆಯೂ ಕೇವಲ ವಚನ ಲೇಖನ ಮಾತ್ರ ಮಾಡುವವರನ್ನು ಪ್ರೇರೇಪಿಸಿ, ವಚನಗಳನ್ನು, ಬರೆಸಿ, ತಂದು ಸಮರ್ಪಿಸುವ ರಾಷ್ಟ್ರೀಯ ಬಸವ ದಳ ಅಥವಾ ಇನ್ನಿತರ ಧಾರ್ಮಿಕ ಸಂಸ್ಥೆಗಳಿಗೂ ಬಹುಮಾನ ಉಂಟು.
೧೩. ರಾಷ್ಟ್ರೀಯ ಬಸವ ದಳಗಳಲ್ಲಿ ಕ್ರಿಯಾ ಮೂರ್ತಿಗಳಿದ್ದರೆ ಅವರಿಂದ ಶರಣ ವ್ರತ ದೀಕ್ಷೆ ಪಡೆಯಬಹುದು. ಸಾಮಾನ್ಯವಾಗಿ ಮೊದಲೇ ಶರಣ ಬಂಧುಗಳು ಇಷ್ಟಲಿಂಗ, ರುದ್ರಾಕ್ಷಿ ಮಾಲೆ ಮುಂತಾಗಿ ಧರಿಸಿರುತ್ತಾರೆ. ಅಕಸ್ಮಾತ್ ರುದ್ರಾಕ್ಷಿ ಮಾಲೆಯನ್ನು ಮೊದಲೇ ಧರಿಸಿರದಿದ್ದರೆ ಶರಣ ವ್ರತದ ಕಾಲದಲ್ಲಿ ತಪ್ಪದೆ ಧರಿಸಬೇಕು. ರುದ್ರಾಕ್ಷಿ ಮಾಲೆ ಸಿಕ್ಕದೆ ಇದ್ದರೆ, ಅಥವಾ ಅದು ಬಹಳ ತುಟ್ಟಿ ಇರುವ ಕಾರಣ ಕಡೆಗೆ ಭದ್ರಾಕ್ಷಿ ಕಾಳಿನ ಸರವನ್ನಾದರೂ ಧರಿಸಬೇಕು.

ನಿಜವಾಗಿಯೂ ಹೇಳುವುದಾದರೆ ಬಸವ ಧರ್ಮದ ಪ್ರಕಾರ ಅವಧಿಯ ವ್ರತಗಳು ಇರದೆ, ಜೀವನವೇ ಒಂದು ವ್ರತವಾಗಬೇಕು. ಹತ್ತು ದಿನವೋ ಒಂದು ತಿಂಗಳೋ ವ್ರತ ಮಾಡಿ (ಅಯ್ಯಪ್ಪ ಸ್ವಾಮಿ ವ್ರತದಂತೆ) ಕಟ್ಟುನಿಟ್ಟಾದ ಆಚರಣೆ ನಡೆಸಿ, ಪುನಃ ಮೊದಲಿನಂತೆ ಇರುವುದು ನಿಜಕ್ಕೂ ಅರ್ಥರಹಿತ. ಶರಣನ ನಿತ್ಯ ನೇಮಗಳು ಸಹಜವಾಗಿದ್ದು ವರ್ಷ ಪೂರ್ತಿ, ಜೀವಮಾನಪೂರ್ತಿ ಒಂದೇ ರೀತಿ ಇರಬೇಕು. ಆದರೆ ಲಿಂಗಾಯತರು ಧರ್ಮಾಚರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಮುಖರಾಗುತ್ತ ಇಷ್ಟಲಿಂಗಧಾರಣೆ, ವಚನ ಸಾಹಿತ್ಯ ಅಧ್ಯಯನ ಮುಂತಾದುವನ್ನು ತೊರೆಯುತ್ತಲಿರುವುದರಿಂದಲೂ ಮತ್ತು ಅನ್ಯ ದೈವಗಳ ಪೂಜೆ-ವ್ರತಗಳತ್ತ ಒಂದು ಫ್ಯಾಶನ್ ಎಂಬಂತೆ ಆಕರ್ಷಿತರಾಗುತ್ತಿರುವುದರಿಂದಲೂ ಅವರಲ್ಲಿ ವಿಶೇಷ ಆಸಕ್ತಿ ಮೂಡಿಸಲೋಸುಗ ವಿಶಿಷ್ಟ ಅವಧಿಯ ವ್ರತಗಳನ್ನು ನಿರ್ದೇಶಿಸಲಾಗುತ್ತಿದೆ. ಈ ನಿಮಿತ್ತವಾಗಿಯಾದರೂ ಅವರು ಮತ್ತು ಇನ್ನಿತರರು ವಚನ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದರೆ ಮುಂದೆ ಧರ್ಮಪ್ರಜ್ಞೆಯು ಸ್ಥಾಯಿಯಾಗುತ್ತಾ ಹೋಗುವುದು.

ಶರಣ ಮೇಳದಲ್ಲಿ ಶರಣ ವ್ರತಿಗಳಿಗೆ ವಿಶೇಷ ಸಂದರ್ಶನಾವಕಾಶ

ವಿಶೇಷವಾದ ದರ್ಶನಾವಕಾಶವನ್ನು ಏರ್ಪಡಿಸಿ, ಶರಣ ವ್ರತಿಗಳು ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರನ್ನು ಸಂದರ್ಶಿಸಿ, ಶರಣ ವ್ರತಧಾರಣೆಗಾಗಿ ವಿಶೇಷ ಪ್ರಮಾಣ ಪತ್ರವನ್ನು ಪಡೆಯಲು ಅವಕಾಶ ಕಲ್ಪಿಸುವ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಪ್ರತಿ ವರ್ಷದ ಜನವರಿಯ

೧೫ನೆಯ ದಿನಾಂಕದಂದು ಈ ಗುರುದರ್ಶನ ಕಾರ್ಯಕ್ರಮವಿರುತ್ತಿದ್ದು ಶರಣ ವ್ರತಿಗಳು ಪೀಠಾಧ್ಯಕ್ಷರಿಂದ ಆಶೀರ್ವಾದ ಮತ್ತು ಪ್ರಮಾಣ ಪತ್ರವನ್ನು ಪಡೆಯಬಹುದಾಗಿರುತ್ತದೆ.

ಆಧಾರ ಗ್ರಂಥಗಳು

ಶರಣ ವ್ರತ ಧಾರಣೆಯ ಕಾಲದಲ್ಲಿ ವಚನ ಸಾಹಿತ್ಯ ಪಠಣಕ್ಕೆ ಮತ್ತು ವಚನ ಲೇಖನ ಕಾರ್ಯಕ್ಕೆ ಬಳಸಬಹುದಾದ ಗ್ರಂಥಗಳೆಂದರೆ :

೧. ಬಸವ ವಚನ ದೀಪ್ತಿ. ಸಂಪಾದಕರು : ಬಸವಾತ್ಮಜೆ
೨. ವಚನ ಸಾಹಿತ್ಯ ಸಂಗ್ರಹ. ಸಂಪಾದಕರು : ಎಸ್. ಎಸ್. ಭೂಸನೂರಮಠ
೩. ಕರ್ನಾಟಕ ಸರ್ಕಾರ ಪ್ರಕಟಿಸಿರುವ ವಚನ ಸಂಪುಟಗಳು.
೪. ಅಥವಾ ಲಭ್ಯವಿರುವ ಆದಿ ಶರಣರ ವಚನ ಕೃತಿಗಳು.

ಶ್ರೀಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಬರೆದಿರುವ ವಚನಗಳು, ನಂತರದಲ್ಲಿ ಶ್ರೀ ತೋಂಟದ ಸಿದ್ದಲಿಂಗೇಶ್ವರರು, ಷಣ್ಮುಖ ಶಿವಯೋಗಿಗಳು ಬರೆದಿರುವ ವಚನಗಳನ್ನು ಪಠಣ ಮಾಡಲು ಮತ್ತು ಬರೆಯಲು ಸೀಮಿತಗೊಳಿಸಬೇಕಾಗಿದೆ.

ವಚನ ಮಂಟಪ ರಚನೆ

ವಚನ ಮಂಟಪ ಬಳ್ಳಿ ಶುಚಿ ಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸಮತವ ಕಟ್ಟದರು
ವಚನ ಶಾಸ್ತ್ರಕರು ನಾಡೊಳಗೆ ॥ ಸೇ.ಅ. 75 ॥ *ಜನಪದ ಗೀತೆಗಳು*

ಸಾಮಾನ್ಯವಾಗಿ ಪೂಜಾ ಕೋಣೆಗಳು ಚಿಕ್ಕವಿರುತ್ತವೆ. ಆದ್ದರಿಂದ ನಡುಮನೆ ಅಥವಾ ಪಡಶಾಲೆಯಲ್ಲಿ ಒಂದು ಮಂಟಪ ರಚಿಸಿ, ಅದನ್ನು ಅಲಂಕರಿಸಿ ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರವಿಟ್ಟು, ಅದರ ಮುಂದೆ ಪಠಣ ಮಾಡುವ ವಚನ ಗ್ರಂಥ ಮತ್ತು ವಚನ ಲೇಖನ ಗ್ರಂಥವನ್ನು ಇಡಬೇಕು. ಎಲ್ಲ ವಿಧಿಗಳನ್ನೂ ಪೂಜೆ-ಪಠಣ-ಲೇಖನ ವಚನ ಮಂಟಪದ ಮುಂದೆಯೇ ಮಾಡಬಹುದು ; ಅಲ್ಲಿ ಏಕಾಂತ ಇರುವುದಿಲ್ಲ ಎಂಬುವ ಶಂಕೆ ಇದ್ದರೆ ಇಷ್ಟಲಿಂಗಾರ್ಚನೆ-ಶಿವಯೋಗ ಸಾಧನೆಯನ್ನು ಪೂಜಾಗೃಹದಲ್ಲಿ ಮಾಡಿ ಬಸವ ಗುರುಪೂಜೆ, ವಚನ ಪಠಣ, ವಚನ ಲೇಖನ ಮುಂತಾದುವನ್ನು ವಚನ ಮಂಟಪದ ಮುಂದೆಯೇ ಮಾಡಬೇಕು. ಈ ಪವಿತ್ರ ವಿಧಿ ಪೂರೈಸಿದ ಮೇಲೆ ಶರಣ ವ್ರತಿಯು ಮನೆಯ ಎಲ್ಲರಿಗೆ ಕರುಣೋದಕ-ಕರುಣಪ್ರಸಾದ ವಿತರಿಸಬೇಕು. ಈ ವ್ರತದ ಅವಧಿಯಲ್ಲಿ ಇನ್ನಿತರರನ್ನು ಜಾತಿಮತಭೇದವಿಲ್ಲದೆ ಆಹ್ವಾನಿಸಿ ಅವರೂ ವಚನ ಪಠಣದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಒಮ್ಮೆ, ಇನ್ನಿತರ ಶರಣ ವ್ರತಿಗಳನ್ನು ಆಹ್ವಾನಿಸಿ, ಸಾಮೂಹಿಕ ಪ್ರಾರ್ಥನೆ-ವಚನ ಪಠಣ ಮಾಡಿ, ಪ್ರಸಾದ ದಾಸೋಹ ಮಾಡಬೇಕು. ವ್ರತದ ಅವಧಿಯಲ್ಲಿ ತಮ್ಮ ಆರ್ಥಿಕ ಶಕ್ತಿಗೆ ಅನುಸಾರವಾಗಿ ಇನ್ನಿತರರನ್ನು ಆಹ್ವಾನಿಸಿ ಪ್ರಸಾದ ದಾಸೋಹ ಮಾಡಿಸಬಹುದು. ವಚನ ಮಂಟಪದ ಬಳಿ ಒಂದು ಕಾಣಿಕೆ ಪೆಟ್ಟಿಗೆ (ಹುಂಡಿ) ಇಟ್ಟದ್ದು ಬಂದ ಜನರಿಗೆ ಧನ ಸಹಾಯ ಮಾಡಲು ಪ್ರೇರಣೆ ನೀಡಿ ಸಂಗ್ರಹವಾದ ಹಣವನ್ನು ಶರಣ ಮೇಳದ ದಾಸೋಹಕ್ಕಾಗಿ ತಂದು ಒಪ್ಪಿಸಬಹುದು. ಶರಣ ಮೇಳದಿಂದ ವಾಪಸ್ಸಾದ ಮೇಲೆ ವಚನ ಮಂಟಪವನ್ನು ಬಿಚ್ಚಬೇಕು.

ಮಾಘ ಪೌರ್ಣಿಮೆ ಸಂದರ್ಶನ

ಶರಣ ವ್ರತ ಕೈಗೊಂಡು ಸಹ ತೀರಾ ಅನಿವಾರ್ಯವಾದ ಕಾರಣಕ್ಕೆ ಜನವರಿ ೧೪ರಂದು ಶರಣ ಮೇಳದಲ್ಲಿ ಭಾಗಿಗಳಾಗಲು ಆಗದೆ ಇದ್ದರೆ ಮಾಘ ಪೌರ್ಣಿಮೆಯಂದು (ಚನ್ನ ಹುಣ್ಣಿಮೆ) ಕೂಡಲ ಸಂಗಮಕ್ಕೆ ಬಂದು ಗಣಲಿಂಗ ದರ್ಶನ ಪಡೆದು ವ್ರತವನ್ನು ಪೂರ್ಣಗೊಳಿಸಬಹುದು.

☹ಸಮಸ್ಯೆ ? - ಸಮಾಧಾನ !☺

✉ಸಿ. ಮೋಹನ್, ಸಾವಿತ್ರಮ್ಮ ಮತ್ತು ಇತರರು, ಮಲ್ಲಸಮುದ್ರ. - ನಮ್ಮ ಊರಲ್ಲಿ ಹಿಂದಿನ ಕಾಲದ ಬಸವೇಶ್ವರ (ನಂದಿ) ದೇವಸ್ಥಾನವಿದೆ. ಇದು ನಮ್ಮ ಗ್ರಾಮದೇವರು. ನಾವು ಈ ವರ್ಷ ಹೊಸ ರಥವನ್ನು ಮಾಡಿಸಿರುತ್ತೇವೆ. ಇದಕ್ಕೆ ಉತ್ಸವ ಮೂರ್ತಿ ಮಾಡಿಸಬೇಕಾಗಿದೆ. ಅದು ನಂದಿ ಮೂರ್ತಿಯಾಗಿರಲಿ ಎಂದು ಕೆಲವರು, ಮಾನವಾಕಾರದ ಬಸವ ಮೂರ್ತಿಯಾಗಿರಲಿ ಎಂದು ಮತ್ತೆ ಕೆಲವರು ಅಭಿಪ್ರಾಯ ಪಡುತ್ತಾರೆ. ತಮ್ಮ ಸಲಹೆ ಏನು?

★ ಬಸವೇಶ್ವರ ದೇವಸ್ಥಾನ ಎಂದು ಎಲ್ಲಿಯೇ ಇರಲಿ, ಅಲ್ಲಿ ನಂದಿಯೇ ಇದ್ದರೂ ಅದು ಐತಿಹಾಸಿಕ ಯುಗಪುರುಷ ಕಲ್ಯಾಣದ ಬಸವಣ್ಣನವರಿಗೆ ಸಂಬಂಧಿಸಿದ್ದು. ನಮ್ಮ ದೇಶದ ಪುರಾಣ ಸಂಸ್ಕೃತಿಗೆ ಬಲಿಯಾಗಿ ಜನರು ಬಸವಣ್ಣನವರು ನಂದಿಯ ಅವತಾರ ಎಂದು ಭಾವಿಸಿ, ಅವರಿಗೆ ಸಂಬಂಧಿಸಿದ ದೇವಾಲಯಗಳಲ್ಲಿ ನಂದಿಯನ್ನು ಕೂರಿಸಿ ಪೂಜಿಸುತ್ತಾ ಬಂದರು. ಇಡೀ ರಾಷ್ಟ್ರದಲ್ಲಿ ಒಂದೆರಡೋ ಮೂರೋ ನಂದಿ ದೇವಾಲಯಗಳಿವೆ. ಅವುಗಳ ಪೂಜೆಯನ್ನು ಬ್ರಾಹ್ಮಣ ಪುರೋಹಿತರು ಮಾಡುತ್ತಾರೆ. ಆದರೆ ಸಾಮಾನ್ಯವಾಗಿ ಬಸವಣ್ಣನವರ ಗುಡಿಗಳಲ್ಲಿ ಲಿಂಗಾಯತ ಪೂಜಾರಿಗಳು ಇರುತ್ತಾರೆ. ಬೆಂಗಳೂರಿನ ಬಸವನಗುಡಿ ಬಡಾವಣೆಯಲ್ಲಿ ದೊಡ್ಡ ನಂದಿ ಇದೆ. ಒಂದು ಕಾಲದಲ್ಲಿ ಅದು ಲಿಂಗಾಯತರ ಆಧಿಕ್ಯದ ಪ್ರದೇಶವಾಗಿದ್ದು, ಲಿಂಗಾಯತ ಪೂಜಾರಿಗಳೇ ಇದ್ದರಂತೆ. ಕಾಲಾನಂತರದಲ್ಲಿ ಲಿಂಗಾಯತರ ಪೂಜಾರಿಕೆ ಬ್ರಾಹ್ಮಣರಿಗೆ ವರ್ಗಾವಣೆಯಾಗಿದೆ, ಶ್ರೀಶೈಲದಲ್ಲೂ ಆದಂತೆ.

ಎಲ್ಲ ಮಾನವರ ಲೇಸಿಗಾಗಿ ಹಗಲಿರುಳು ಶ್ರಮಿಸಿದ ಮಹಾನ್ ತ್ಯಾಗಿ ಬಸವಣ್ಣನವರ ಪೂರ್ಣಾಕಾರದ ಮೂರ್ತಿಯನ್ನಿಡುವುದೇ ಸರಿ. ನಂದಿಯ ಆರಾಧನೆ ವೈಚಾರಿಕ ಹಿನ್ನೆಲೆಯಿಂದ ಕೂಡಿಲ್ಲವಷ್ಟೇ ?. ಪ್ರಾಣಿಪೂಜೆಗಿಂತ ಮಾತನಾಡುವ ದೇವರು ಆದ ಗುರುವಿನ ಪೂಜೆ ಶ್ರೇಯಸ್ಕರ. ಆದ್ದರಿಂದ ಉತ್ಸವ ಮೂರ್ತಿಯು ಅಭಯ ಮುದ್ರೆಯ ಬಸವಣ್ಣನವರ ಆಕಾರದಲ್ಲಿರುವುದೇ ಅರ್ಥಗರ್ಭಿತ. ನಿಮ್ಮ ಊರಿನವರಿಗೆ ಮನವರಿಕೆ ಮಾಡಿಕೊಡಿರಿ.

✉ಮಾಂಸಾಹಾರ-ಸಸ್ಯಾಹಾರಗಳ ವ್ಯತ್ಯಾಸ ತಿಳಿಸಿರಿ.

★ ಇದು ಬಹಳ ವಿವರವಾಗಿ ತಿಳಿಸಬೇಕಾದುದು. ತನ್ನಂತಯೇ ಬದುಕುವ ಹಕ್ಕುಳ್ಳ ಪ್ರಾಣಿಯನ್ನು ಕೊಂದು ತಿನ್ನುವುದು ಮಾಂಸಾಹಾರ. ಮಾನವನ ಬದುಕಿಗಾಗಿಯೇ ದೇವರಿಂದ ಸೃಷ್ಟಿಸಲ್ಪಟ್ಟ ದವಸ-ಧಾನ್ಯ, ತರಕಾರಿ, ಹಣ್ಣು, ಗಡ್ಡೆ-ಗೆಣಸು ಮುಂತಾದ ಸಸ್ಯಜನ್ಯ ಪದಾರ್ಥಗಳನ್ನು ತಿನ್ನುವುದು ಸಸ್ಯಾಹಾರ.

ಮಾಂಸಾಹಾರ ಸ್ವಭಾವತಃ ಗಡುಸು ಮಾತ್ರವಲ್ಲದೆ ಇನ್ನಿತರ ಪ್ರಾಣಿಗಳ ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತದೆ. ಆದಿ ಮಾನವನಿಗೆ ಆಹಾರವಿಧಾನ ಗೊತ್ತಿರದೆ ಇದ್ದಾಗ ಪ್ರಾಣಿಗಳನ್ನು ಕೊಂದು ಹಸಿಯ ಮಾಂಸ ತಿನ್ನುತ್ತಿದ್ದ ನಂತರ ಬೇಯಿಸಿ ತಿನ್ನತೊಡಗಿದ. ಕೃಷಿಯು ಮಾನವನ ನಾಗರಿಕತೆ ಬೆಳೆದಂತೆ ವೃದ್ಧಿಯಾದಾಗ, ಅದು ಅವನಿಗೆ ಸುರಕ್ಷಿತ ಜೀವನವನ್ನು

ಒದಗಿಸಿಕೊಟ್ಟಾಗ ಇದರ ಶ್ರೇಷ್ಠತೆ ಮನಗಂಡು ಮಾನವ ಸಸ್ಯಾಹಾರ ಮೈಗೂಡಿಸಿಕೊಂಡ. ದಾರ್ಶನಿಕ ಚಿಂತನೆಯ ಬೀಡಾದ ಭಾರತದಲ್ಲಿ ಶಿವ, ಬುದ್ಧ, ಮಹಾವೀರ, ಬಸವಣ್ಣನವರು ಶುದ್ಧ ಅಹಿಂಸಾ ವಿಧಾನವನ್ನು ತಾವು ಪ್ರತಿಪಾದಿಸಿದ ಶೈವ, ಬೌದ್ಧ, ಜೈನ, ಲಿಂಗಾಯತ ಧರ್ಮಗಳಲ್ಲಿ ಅಳವಡಿಸಿದರು. ಸಸ್ಯಾಹಾರ ಅತ್ಯಂತ ಶ್ರೇಷ್ಠ ; ಈಗೀಗ ಈ ಆಹಾರ ವಿಧಾನದ ಮಾಹಿತಿ ಗೊತ್ತಾದಂತೆಲ್ಲ ಪಾಶ್ಚಿಮಾತ್ಯರು ತಮ್ಮ ಜೀವನ ಶೈಲಿಯಲ್ಲಿ ಸಸ್ಯಾಹಾರವನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಅಜ್ಞಾನಿಗಳಾದ ಕೆಲವು ಜನರು ಮಾಂಸಾಹಾರ ತಮ್ಮ "ಜಾತಿಧರ್ಮ" ಎಂದು ವಾದ ಮಾಡುತ್ತ ಅದಕ್ಕೇ ಅಂಟಿಕೊಳ್ಳುತ್ತಾರೆ. ದೇವರ ಇಚ್ಛೆ ಏನು ? ಎಂದು ಆಲೋಚಿಸಿದರೆ ಮಾನವನು ಸಸ್ಯಾಹಾರಿಯಾಗಿರಬೇಕೆಂಬುದೇ ಆಗಿದೆ. ಏಕೆಂದರೆ ಸಸ್ಯಾಹಾರಿ ಪ್ರಾಣಿಗಳಾದ ಎತ್ತು, ಹಸು, ಎಮ್ಮೆ, ಕುದುರೆ ಮುಂತಾದವುಗಳಿಗೆ ಇರುವಂತೆ ಮಾನವನಿಗೂ ದಂತಪಂಕ್ತಿ ಇದೆಯೇ ವಿನಾ ಮಾಂಸಾಹಾರಿ ಪ್ರಾಣಿಗಳಾದ ಹುಲಿ, ಚಿರತೆ, ನಾಯಿ, ಬೆಕ್ಕುಗಳಿಗಿರುವಂತೆ ಮಾನವನಲ್ಲಿ ಚೂಪಾದ ಕೋರೆ ಹಲ್ಲುಗಳಿಲ್ಲ.

✉ಸಿದ್ದರಾಮಯ್ಯ ಪೂಜಾರಿ, ಮೀರಜ.- "ಹೇ ಪರಮಾತ್ಮಾ ಲೋಕದ ಮಿತ್ರ" ಹಾಡು ಅತ್ಯದ್ಭುತವಾಗಿದೆ. ಆದರೆ ದೇವರನ್ನು "ಮಿತ್ರ" ಎಂದು ಕರೆದರೆ ಅವನ ಘನತೆಯನ್ನು ಕೆಳಗೆ ಇಳಿಸಿದಂತೆ ಆಗದೆ ? ಆದ್ದರಿಂದ ಮಿತ್ರ ಬದಲು ರಕ್ಷಕ ಎಂದು ಏಕೆ ಅನ್ನಬಾರದು ?

★ ನಾಮ ರೂಪ ಕ್ರಿಯೆಗಳಿಗತೀತನಾದ ದೇವರನ್ನು ಯಾವ ಹೆಸರಿನಿಂದಲಾದರೂ ಕರೆಯಬಹುದು ಯಾವ ಸಂಬಂಧವನ್ನು ಕಲ್ಪಿಸಿಕೊಂಡೂ ಆರಾಧಿಸಬಹುದು, ಪ್ರೇಮಿಸ-ಬಹುದು, ಸಂಬಂಧಗಳಲ್ಲಿ ಮುಖ್ಯವಾದವು ತಾಯಿ-ತಂದೆ, ಪತಿ-ಪತ್ನಿ, ಮಗ, ಸ್ನೇಹಿತ ಇತ್ಯಾದಿ. ನಿಜವಾದ ಸ್ನೇಹಿತರನ್ನು ಹೊಂದಿದ ವ್ಯಕ್ತಿಗೆ 'ಸ್ನೇಹಿತ' ಎಂಬ ಪರಿಕಲ್ಪನೆಯ ಅರ್ಥವಾಗುತ್ತದೆ. ಜಗತ್ತಿನಲ್ಲಿ ಸ್ನೇಹಿತ ಅಥವಾ ಸ್ನೇಹಿತೆಯಷ್ಟು (ಪ್ರೇಮಿ ಎಂಬರ್ಥದಲ್ಲಲ್ಲ) ಪ್ರಿಯವಾದವರು ಬೇರಾರೂ ಅಲ್ಲ. ತಾಯಿ-ತಂದೆ, ಪತಿ-ಪತ್ನಿ, ಮಗ-ಮಗಳು ಎಲ್ಲರಲ್ಲಿ ಪರಸ್ಪರ ಪ್ರೀತಿ ಇದ್ದರೂ ಸ್ನೇಹಿತರಲ್ಲಿ ಒಂದು ಬಗೆಯ ವಿಶ್ವಾಸ (faith) ಇರುತ್ತದೆ. ಬೇರಾರ ಮುಂದೂ ಹೇಳದ ಅನೇಕ ಗುಟ್ಟುಗಳನ್ನು ಸ್ನೇಹಿತನ ಮುಂದೆ ವ್ಯಕ್ತಿ ಹೇಳುತ್ತಾನೆ ಮತ್ತು ನಿಜ ಸ್ನೇಹಿತನು ಎಲ್ಲ ಬಂಧು ಬಾಂಧವರು ಕೈಬಿಟ್ಟಾಗಲೂ ನೆರವಿಗೆ ಬರುತ್ತಾನೆ. ದೇವರ ಬಗ್ಗೆ, ತಾಯಿ-ತಂದೆಯ ಬಗ್ಗೆ ಇರುವಂತೆ ಭಯಮಿಶ್ರಿತ ಭಕ್ತಿ ಅರ್ಥಾತ್ ಗೌರವ ಹೊಂದಿದ್ದರೆ ಸಾಲದು, ಉತ್ಕಟ ಪ್ರೀತಿಯೂ ಇರಬೇಕು ಎಂಬುದನ್ನು ಮನದಲ್ಲಿ ಇಟ್ಟುಕೊಂಡು "ಮಿತ್ರ" ಎಂಬ ಪದವನ್ನು ಬಳಸಲಾಗಿದೆ. "ಸೊಗದಿಂ ಪಾಲಿಪ ತಾಯಿಯು ನೀನು" ಎಂಬ ಪದದಲ್ಲಿ 'ರಕ್ಷಕ' ಪರಿಕಲ್ಪನೆ ಇದೆ. ಅದನ್ನೇ ಧರ್ಮಪಿತ ಬಸವಣ್ಣನವರು ಹೀಗೆ ಹೇಳಿರುವುದು-

1. ಆರಿಗೆ ಆರಿಲ್ಲ ಕೆಟ್ಟವಂಗೆ ಕೆಳೆಯಿಲ್ಲ -
   ಜಗದ ನಂಟ ನೀನೇ ಅಯ್ಯಾ
2. ತಂದೆ ನೀನು ತಾಯಿ ನೀನು
   ಬಂಧು ನೀನು ಬಳಗ ನೀನು

✉"ಹೇ ಪರಮಾತ್ಮ ಲೋಕದ ಮಿತ್ರ, ನೀನೇ ಸರ್ವಕು ಕಾರಣ ಕರ್ತ" ಎಂದರೆ ನಾವು ಮಾಡುವ ಪಾಪ ಕಾರ್ಯಗಳಿಗೂ ದೇವರೇ ಕಾರಣ ಎಂದು ಅರ್ಥವಾಗಿ ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡಂತೆ ಆಗುವುದಿಲ್ಲವೆ ?

★ನೀನೇ ಸರ್ವಕು ಕಾರಣ ಕರ್ತ ಎಂದರೆ ಈ ಸಚರಾಚರವಾದ ಜಗತ್ತಿಗೆ ಮೂಲಕಾರಣ (primordial cause) ನೀನು ಎಂದು ಅರ್ಥವೇ ವಿನಾ ವ್ಯಕ್ತಿಯ ವೈಯಕ್ತಿಕ ಪಾಪ (indivisual sin)ಕ್ಕೆ ದೇವರು ಕಾರಣ ಎಂದಲ್ಲ ಅದನ್ನೇ ಧರ್ಮ ಪಿತರು ಹೀಗೆ ಹೇಳುವರು-

ಸುಖ ಬಂದರೆ (ನನ್ನ ಹಿಂದಿನ) ಪುಣ್ಯದ ಫಲವೆಂಬೆನು
ದುಃಖ ಬಂದರೆ (ನನ್ನ ಹಿಂದಿನ) ಪಾಪದ ಫಲವೆಂಬೆನು;
ನೀ ಮಾಡಿದಡಾಯಿತ್ತು ಎಂದೆನ್ನೆನು,
ಕರ್ಮಕ್ಕೆ ಕರ್ತೃವೆ ಕಡೆಯೆಂದೆಂಬೆನು,
ಉದಾಸೀನವಿಡಿದು ಶರಣೆನ್ನೆನು.
ಲಿಂಗಾದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ;
ಸಂಸಾರವ ಸವೆಯೆ ಬಳಸುವೆನು. -ಬ.ವ.ದೀ 692

ಕರ್ಮಕ್ಕೆ ಕರ್ತೃವೇ (ಅಂದರೆ ಮಾಡಿದ ನಾನು doer) ಕಡೆ ಎಂದೆಂಬೆನು. ಅಚರವಾದ, ಜಡಜಗತ್ತು ಮೊದಲು ಸೃಷ್ಟಿಯಾಯಿತು. ನಂತರ ಸಚರವಾದ ಚೈತನ್ಯಾತ್ಮಕ ಜೀವಾತ್ಮರ ಸೃಷ್ಟಿಯಾಯಿತು. ಆಗ ದೇವರು ಒಂದು ನೈತಿಕ ನಿಯಮ (moral law) ಮಾಡಿ ಪಾಪ-ಪುಣ್ಯಗಳಿಗೆ ತಕ್ಕ ಫಲವಿದೆ ಎಂದು ನಿಬಂಧನೆ ಮಾಡಿ ಆತ್ಮರುಗಳಿಗೆ ಸ್ವಾತಂತ್ರ್ಯ ಕೊಟ್ಟನು. ದೇವರು ಆ ವೈಶ್ವಿಕ ನೈತಿಕ ನಿಯಮಕ್ಕೆ ಕಾರಣನೇ ವಿನಾ ವ್ಯಕ್ತಿಗಳು ಮಾಡುವ ಪಾಪ-ಪುಣ್ಯಗಳಿಗಲ್ಲ.

✉ಶರಣಮ್ಮ, ಊರು ಬೇಡ.- ನಮ್ಮ ಊರಿನಲ್ಲಿ ಓರ್ವರು ಲಿಂಗೈಕ್ಯರಾದರು. ಅವರು ಬಸವ ಪಥಿಕರು. ಹೀಗಾಗಿ ಅದರಂತೆಯೇ ಸಂಸ್ಕಾರವಾಗಬೇಕೆಂದು ಇಷ್ಟಪಟ್ಟರು. ನಾನೇ ನಿಂತು ಮಾಡಿಸಿದೆ. ಎಲ್ಲರೂ ಸಂತೋಷ ಪಟ್ಟರು. ನಮ್ಮೂರ ಕಡೆ ಏನು ಸಂಪ್ರದಾಯವಿದೆ ಎಂದರೆ ಗಂಡನ ಸಮಾಧಿ ಕ್ರಿಯೆ ಆದ ಮೇಲೆ ಆತನ ವಿಧವಾ ಹೆಂಡತಿಯ ಮುಖ ನೋಡಬಾರದು ಎಂದು ಆಕೆಯ ಮುಖಕ್ಕೆ ಬಟ್ಟೆ ಹೊದ್ದಿಸಿ ಮನೆಗೆ ಕರೆದೊಯ್ಯುವರು. ನಾವು ಹಾಗೆ ಮಾಡಲಿಲ್ಲ. ಆಗ ಕೆಲವರು ವಿಧವೆಯ ಮುಖ ನೋಡಬಾರದೆಂದು ಮೆಲ್ಲನೆ ಸರಿದು ಹೋದರು. ನಾವು ಮಾತ್ರ ಜೊತೆಗೇ ಮನೆಯವರೆಗೆ ಹೋಗಿ ಸಮಾಧಾನ ಮಾಡಿ ಬಂದೆವು. ನಾವು ಮಾಡಿದ್ದು ಸರಿಯೆ ? ಅವರಿವರು ಮಾತನಾಡಿದ್ದು ಕೇಳಿ ಒಂದು ನಿಮಿಷ ಮನಸ್ಸು ಅಳುಕಿತು. ಇದರಿಂದ ಪಶ್ಚಾತ್ತಾಪವಾಗಿದೆ.

★ ವೈದಿಕ ಧರ್ಮದಲ್ಲಿ ವಿಧವೆಯ ಸ್ಥಾನ ಅತ್ಯಂತ ನಿಕೃಷ್ಟ. ಅದು ಪುರುಷ ಪ್ರಧಾನ ವ್ಯವಸ್ಥೆ. ಅಲ್ಲಿ ಪತ್ನಿ ಸತ್ತರೂ ಪುರುಷನ ಧಾರ್ಮಿಕ ಘನತೆಗೆ ಕುಂದು ಬರುವುದಿಲ್ಲ. ಆದರೆ ಪತಿ ವಿರಹಿತ ಪತ್ನಿಯು ಅಲ್ಲಿ ಅಮಂಗಲೆಯಾಗುತ್ತಾಳೆ. ಈ ಮೂಲಭೂತ ಮನೋಭಾವವನ್ನು

ತೊಡೆದು ಹಾಕಿದ್ದು ಕ್ರಾಂತಿಪುರುಷ ಬಸವಣ್ಣನವರ ಲಿಂಗಾಯತ ಧರ್ಮ. ಇದರ ಪ್ರಕಾರ ದೇವನೊಬ್ಬನೇ ಪತಿ, ಒಡೆಯ ; ಜಗತ್ತಿನ ಎಲ್ಲ ಸ್ತ್ರೀ-ಪುರುಷರೂ ಅವನ (ಶರಣ) ಸತಿಯರು, ಪತಿ-ಪತ್ನಿಯ ಸಂಬಂಧ ಲೌಕಿಕವಾದ, ಕರ್ತವ್ಯಪರ ಸಂಬಂಧ. ಆದ್ದರಿಂದ ವಿಧವೆ, ಅಮಂಗಲೆ ಎಂಬ ಭಾವವೇ ತಪ್ಪು. ಲಿಂಗಾಯತರು ಎಂದೋ ಲಿಂಗಧಾರಣೆ ಮಾಡಿಕೊಂಡು ಶಾರೀರಿಕವಾಗಿ ಲಿಂಗಾಯತರಾದರೂ ಆಂತರಂಗಿಕವಾಗಿ, ತಾತ್ತ್ವಿಕವಾಗಿ ಲಿಂಗಾಯತ-ರಾಗಿಲ್ಲ. ಅವರ ಪರಿಸ್ಥಿತಿ ಹೇಗಿದೆ ಎಂದರೆ-

ಕಬ್ಬುನದ ಕೋಡಗವ ಪರುಷ ಮುಟ್ಟಲು
ಹೊನ್ನಾದರೇನು, ಮತ್ತಿನ್ನೇನಾದರೇನು ?
ತನ್ನ ಮುನ್ನಿನ ರೂಹು ಬಿಡದನ್ನಕ್ಕ.

"ಮೊದಲು ಕಬ್ಬಿಣದ ಕೋತಿಯಾಗಿತ್ತು ಈಗ ಬಂಗಾರದ ಕೋತಿಯಾಯಿತು. ಕೋತಿಯು ಶರಣ ಹೃದಯಿಯಾಗಲಿಲ್ಲ" ಎಂಬಂತಾಗಿದೆ. ಹೀಗಾಗಿ ಅವರಿವರು ಮಾಡುವ ಭ್ರಾಂತ್ಯಾತ್ಮಕ ಆಚರಣೆಗಳನ್ನು ತಾವೂ ಮಾಡುತ್ತಾ ಅಜ್ಞಾನಿಗಳೂ, ದುರ್ಬಲ ಮನದವರೂ ಆಗಿದ್ದಾರೆ. ಪತಿ ಅಥವಾ ಪತ್ನಿ ಸತ್ತಾಗ ಲಿಂಗಾಯತ ಧರ್ಮದ ಪ್ರಕಾರ,

ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು
ಲಿಂಗದಲ್ಲಿ ಉದಯವಾದ ಶರಣಂಗೆ
ಆ ಲಿಂಗವಲ್ಲದೆ ಬೇರೆ ಎಡೆಯುಂಟೆ ?

ಧರ್ಮಪಿತರ ಮಾತಿನಂತೆ ವ್ಯಕ್ತಿಯು ಲಿಂಗೈಕ್ಯವಾದಾಗ ಇನ್ನೂ ಉನ್ನತ ಪದವಿಗೆ ಏರುತ್ತಾನೆ/ಏರುತ್ತಾಳೆ. ಆದ್ದರಿಂದ ವಿಧವೆಯ ಮುಖ ನೋಡಬಾರದು, ಮುಖ ಮುಚ್ಚಿ ಕರೆದೊಯ್ಯಬೇಕು ಎಂಬುದು ಅಮಾನುಷ, ಯಾರು ಯಾರು ಆ ರೀತಿ ವರ್ತಿಸಿದ್ದಾರೋ ಅವರು ನಿಜ ಬಸವ ಪಥಿಕರಾಗಿದ್ದರೆ ಧರ್ಮಪಿತರಲ್ಲಿ ಕ್ಷಮೆಯಾಚಿಸಿ ಬಸವೇಶ್ವರ ಪೂಜಾ ವ್ರತ ಮಾಡಬೇಕು. ನಿಮ್ಮಲ್ಲಿ ಸಹ ಒಂದು ಅಳುಕು ಕ್ಷಣಕಾಲವಾದರೂ ಉಂಟಾದುದರಿಂದ ಧರ್ಮಪಿತರಲ್ಲಿ ಕ್ಷಮೆಯಾಚಿಸಿ ಅವರ ಮಾನವತಾವಾದಕ್ಕೆ ಮಾನಸಿಕವಾಗಿ ಚ್ಯುತಿ ತಂದುದಕ್ಕಾಗಿ ಪಶ್ಚಾತ್ತಾಪ ಪಟ್ಟು ಬಸವೇಶ್ವರ ಪೂಜಾ ವ್ರತ ಮಾಡಿರಿ.

✉ಸಂತೋಷಕ್ಕಾಗಿ ಪಟಾಕಿ ಹೊಡೆಯುವುದು ಬಸವ ಭಕ್ತರಿಗೆ ಪುರಸ್ಕೃತವೋ ತಿರಸ್ಕೃತವೊ ?

★ ಖಂಡಿತ ತಿರಸ್ಕೃತ. ಪಟಾಕಿ ಹೊಡೆಯುವುದು ಮಹಾನ್ ಪಾಪಕಾರ್ಯ. ದೇವರು ಮನುಷ್ಯನಿಗೆ ಉಸಿರಾಡಿಸಲೆಂದು ಶುದ್ಧವಾದ ಪ್ರಾಣವಾಯುವನ್ನು ಕೊಟ್ಟಿದ್ದರೆ ಪಟಾಕಿ ಹೊಡೆಯುವ ಪಾಪಿಗಳು ಆ ಶುದ್ಧವಾಯುವನ್ನು ಕಲುಷಿತಗೊಳಿಸುವುದಷ್ಟೇ ಅಲ್ಲ, ಪವಿತ್ರವಾದ ಹಣವನ್ನು ಸುಟ್ಟು ಹಾಳು ಮಾಡುವರು. ದೀಪಾವಳಿಯಲ್ಲಿ ಹೊಡೆಯುವ 3-4 ದಿವಸಗಳ ಪಟಾಕಿ ಹೊಗೆಯಿಂದ ಎಷ್ಟೋ ಜನ ವಯಸ್ಕರು, ರೋಗಿಗಳು ಶಪಿಸುವುದರಿಂದ ಇಂಥ ಪಟಾಕಿಪ್ರಿಯರು ಸಾಮೂಹಿಕವಾಗಿ ಬೆಂಕಿ ಅಪಘಾತ, ವಿಮಾನ ಅಪಘಾತಗಳಲ್ಲಿ ಒಂದಾನೊಂದು ಜನ್ಮದಲ್ಲಾದರೂ ಉಸಿರು ಕಟ್ಟಿ ಸಾಯುವರೆಂದೇ ನನ್ನ ಅಭಿಪ್ರಾಯ. ಬಸವ

ಭಕ್ತರು ಯಾವುದೇ ಕಾರ್ಯಕ್ರಮಗಳಲ್ಲಿ ಉದಾ: ಮೆರವಣಿಗೆ, ಶವಯಾತ್ರೆ ಮುಂತಾದುವುಗಳಲ್ಲಿ ಪರಿಸರದ ಶುದ್ಧಿ, ಹಣದ ನಾಶ ಮಾಡುವ ಪಟಾಕಿ ಸುಡುವ ಕಾರ್ಯ ಮಾಡದೆ ಇರುವುದಾಗಿ ಪ್ರತಿಜ್ಞಾ ಬದ್ಧರಾಗಬೇಕು. ಮಕ್ಕಳಿಗೆ ಸಹಿತ ದೀಪಾವಳಿಯಲ್ಲಿ ಪಟಾಕಿ ತಂದುಕೊಡದೆ, ಪಟಾಕಿ ಸುಡುವುದು ರಾಷ್ಟ್ರೀಯ ಪಾಪ ಎಂದು ಮನವರಿಕೆ ಮಾಡಿಕೊಡಬೇಕು. ಬಸವ ತತ್ತ್ವನಿಷ್ಠರು ಸದಾಚಾರ ಸಂಪನ್ನ ಸಾತ್ವಿಕರಾಗಿರುವುದು ಮಾತ್ರವಲ್ಲ ಪರಿಸರ ಪ್ರೇಮಿಗಳೂ ಆಗಬೇಕು.

✉ಲಿಂಗರಾಜ ಪಾಟೀಲ್, ಬೆಳಗಾಂವ.- ಲಿಂಗದೇವ ವಚನಾಂಕಿತ ಬದಲಾವಣೆಯಾದಾಗ ಏಕೋ ನನ್ನ ಬುದ್ಧಿ ಮಂಕಾಯಿತು. ನಿಮ್ಮ ಕೀರ್ತಿ ಪ್ರಭೆ ಸಹಿಸಲಾರದ ಮಠಾಧಿಪತಿಗಳ ಅಪಪ್ರಚಾರವೂ ಕಾರಣವಾಗಿರಬಹುದು. ನಿಮ್ಮನ್ನು ತೀವ್ರವಾಗಿ ವಿರೋಧಿಸಿದೆವು. ಆದರೆ ಬರುಬರುತ್ತ "ಲಿಂಗದೇವ" ಪದದ ಮಹತಿ ಅರ್ಥವಾದುದು ಒಂದು ಕಡೆಯಾದರೆ, ನಿಮ್ಮಂತೆ ಘನ ಮಾರ್ಗದರ್ಶನ ಮಾಡುವವರು ನಮ್ಮ ಸಮಾಜದಲ್ಲಿ ಯಾರೂ ಇಲ್ಲ ಎನ್ನಿಸಿತು. ಇದಕ್ಕಿಂತ ಮಿಗಿಲಾಗಿ ನಿಮ್ಮಿಂದ, ನಿಮ್ಮ ಸಂಸ್ಥೆಯಿಂದ, ಶರಣ ಮೇಳದಿಂದ ದೂರವಾಗಿ ವಿಚಿತ್ರವಾದ ಅನಾಥ ಪ್ರಜ್ಞೆ ಕಾಡತೊಡಗಿತು. ಯಾರದೋ ಒತ್ತಡಕ್ಕೆ ಸಿಕ್ಕಿ ವಿರೋಧಿಸುವವರ ಗುಂಪಿನಲ್ಲಿ ಸೇರುತ್ತಿದ್ದರೂ ಅಂತರಂಗದ ತಳಮಳ ಬಹಳವಾಗಿರುತ್ತಿತ್ತು. ಈ ತುಮುಲದಿಂದ ಹೊರಬರಲೇ ಬೇಕಾಗಿದೆ, ಈಗ ಬಂದರೂ ಎಲ್ಲಿ ಇತರರು ಚುಚ್ಚು ಮಾತನಾಡುವರೋ ಎಂಬ ಅಳುಕು ಕಾಡುತ್ತಿದೆ. ಪರಿಹಾರವೇನು ?

★ ನಮ್ಮ - ನಿಮ್ಮ ಮಧ್ಯೆ ಇದ್ದುದು ಶುದ್ಧ ಆಧ್ಯಾತ್ಮಿಕ ಗುರು - ಶಿಷ್ಯ, ತಾಯಿ - ಮಕ್ಕಳ ಸಂಬಂಧ. ನಮ್ಮನ್ನು ಬಂಧಿಸಿದ ಕರುಳ ಬಳ್ಳಿ ಧರ್ಮಪಿತ ಬಸವಣ್ಣನವರು. ಇಂಥ ಸಂಬಂಧ ಕೆಡಿಸಲೆಂದೇ ಕೆಲವು ಸ್ವಾರ್ಥಿ ಮಠಾಧೀಶರು, ವೀರಶೈವ ಮುಂದಾಳುಗಳು ಹೂಡಿದ ಸಂಚಿಗೆ ನೀವು ಬಲಿಯಾದುದಕ್ಕೆ ನಮಗೆ ಮರುಕ ಉಂಟಾಗುತ್ತದೆ. ನೀವು ನಮ್ಮಿಂದ ದೂರವಾಗಿ ಶರಣ ಮೇಳಕ್ಕೆ ಬರದುದರಿಂದ ಎಷ್ಟು ಸಂಕಟ ಪಡುತ್ತೀರೋ ಅಷ್ಟೇ ಸಂಕಟ ನಿಮ್ಮನ್ನು ಕಳೆದುಕೊಂಡು ನಮಗೂ ಆಗುತ್ತಿದೆ. ಹೀಗಿದ್ದಾಗ ರಾಗ-ದ್ವೇಷಗಳೇಕೆ ? ಆಂತರಂಗಿಕವಾಗಿ ನಿಮಗೆ ಪಶ್ಚಾತ್ತಾಪವಾಗಿ ಪುನಃ ಕರುಳು ಕೂಗುತ್ತಿದೆ. ಒಮ್ಮೆ ಬಂದು ಬಿಟ್ಟರೆ ಸಾಕು; ಹಿಂದಿನ ದುಃಸ್ವಪ್ನ ಮರೆತು ಬಿಡುತ್ತವೆ. ಹಿಂದಿನ ಘಟನೆಗಳನ್ನು ಹೆಕ್ಕಿ ತೆಗೆದು ಚುಚ್ಚು ಮಾತಾಡುವಷ್ಟು ಬಸವ ಶರಣರು ಸಣ್ಣ ಬುದ್ಧಿಯವರಲ್ಲ. ನಿರ್ಮಲ ಮನಸ್ಸಿನಿಂದ ಶರಣ ಮೇಳಕ್ಕೆ ಬಂದು ಮನ-ಬುದ್ಧಿಗಳನ್ನು ಜಳಜಳ ಮಾಡಿಕೊಳ್ಳಿರಿ. ನಿಮ್ಮ ಮನೆಗೆ ನೀವು ಬರಲಿಕ್ಕೆ ಅಳುಕೇಕೆ ?

✉ಹೀಗೊಂದು ಊರು, ಹೆಸರು ಬೇಡ.- ನಮ್ಮೂರಲ್ಲಿ ಅಮೋಘವಾಗಿ ಪ್ರವಚನ ಕಾರ್ಯಕ್ರಮ ನಡೆಯಿತು. ಇಷ್ಟಲಿಂಗಧಾರಿಗಳ ಸಮಾಜದಲ್ಲಿ ಅನೇಕ ಒಳಪಂಗಡಗಳಿವೆ, ಅದರಲ್ಲಿ 'ಲಿಂಗಾಯತ'ರು ಎಂದು ವಿಶೇಷವಾಗಿ ಕರೆಯಲ್ಪಡುವ ಕೆಲವು ಒಳಪಂಗಡಗಳವರು ಇನ್ನಿತರ ಇಷ್ಟಲಿಂಗಧಾರಿಗಳು ಆಚಾರ-ವಿಚಾರ ಸಂಪನ್ನರಾಗಿದ್ದರೂ ಅವರನ್ನು ಕಡಿಮೆ ದರ್ಜೆಯವರೆಂದು ಕಾಣುವುದೇ ಅಲ್ಲದೆ ನಿಮ್ಮ ಸಂಸ್ಥೆಯ ಧರ್ಮ ಬೋಧಕರು ಲಿಂಗಾಯತ

ಧರ್ಮದ ಸಾರವನ್ನು ಬೋಧಿಸಿದರೂ ನಮ್ಮೂರ ಲಿಂಗಾಯತರು ಅಷ್ಟಾಗಿ ಪ್ರವಚನವನ್ನು ಕೇಳಲಿಲ್ಲ, ಸಹಕರಿಸಲೂ ಇಲ್ಲ. ಇನ್ನಿತರ ಕೆಲವು ಇಷ್ಟಲಿಂಗಧಾರಿ ಒಳಪಂಗಡಗಳವರು ಮತ್ತು ಲಿಂಗಾಯತೇತರರು ಪ್ರವಚನ ಜ್ಞಾನದ ಸದುಪಯೋಗ ಪಡೆದುಕೊಂಡರು. ಇದಕ್ಕೆ ನೀವು ಏನಂತಿರಿ ?

★ ಕಮಲದ ಹೂವಿನ ಕೆಳಗಿದ್ದರೂ ಕಪ್ಪೆ ಜೊಂಡು ನೀರನ್ನು ಕುಡಿದು ವಟಗುಟ್ಟುತ್ತದೆ. ಜೇನ್ನೊಣ ದೂರದಲ್ಲಿದ್ದರೂ ಹಾರಿ ಬಂದು ಕಮಲದ ಹೂವಿನ ಮಕರಂದವನ್ನು ಪಾನ ಮಾಡುತ್ತದೆ. ತಾವು ಶ್ರೇಷ್ಠರು ಎಂದು ಬೀಗುವವರು ಅಹಂಕಾರದ ಜೊಂಡು ನೀರು ಕುಡಿದು ವಟಗುಟ್ಟುತ್ತಿರಲಿ ಪಾಪ ! ಅವರಿಗೆ ತಮ್ಮ ಹಿತೈಷಿಗಳು ಯಾರು ? ಧರ್ಮ ರಕ್ಷಕರು ಯಾರು ? ಎಂಬ ತಿಳುವಳಿಕೆಯೇ ಇಲ್ಲ. ಅಂಥ ಅರೆಬರೆ ಜ್ಞಾನಿಗಳ ಬಗ್ಗೆ ನೀವು ಬೇಸರ ಪಡಬೇಡಿರಿ, ಮರುಕ ತಾಳೋಣ. ಇಂದಲ್ಲ ನಾಳೆ ಬುದ್ಧಿ ಬಂದೀತೆಂದು ನಿರೀಕ್ಷಿಸೋಣ.

☒ **ರಾಜೇಶ್ವರಮ್ಮ, ದೊಡ್ಡಬಳ್ಳಾಪುರ.**- ಈಗ ಪ್ರಚಲಿತವಿರುವ ಧಾರ್ಮಿಕ ವ್ರತಗಳಲ್ಲಿ ಅಯ್ಯಪ್ಪ ವ್ರತ, ವಾರಕರಿ ಸಂಪ್ರದಾಯದ ವ್ರತ ಇವೆ. ತಾವು ಶರಣ ವ್ರತ ಧರಿಸಿ ಶರಣ ಮೇಳಕ್ಕೆ ಬರುವ ಪರಿಪಾಠ ಆರಂಭಿಸಿದ್ದೀರಿ. ಅವಕ್ಕೂ ಇದಕ್ಕೂ ವ್ಯತ್ಯಾಸವೇನು ?

★ ಅಯ್ಯಪ್ಪ ವ್ರತ, ವಾರಕರಿ ವ್ರತಗಳಲ್ಲಿ ಭಕ್ತಿಯ ಆವೇಶವಿದೆ. ಶರಣ ವ್ರತದಲ್ಲಿ ಸಂಸ್ಕರಣಗೊಂಡ ವೈಚಾರಿಕ ಭಕ್ತಿಯೊಡನೆ ಜ್ಞಾನ ಸಂಸ್ಕಾರವಿದೆ. ದೇವ(?)- ಭಕ್ತರ ನಡುವಿನ ವೈಯಕ್ತಿಕ ಸಂಬಂಧ ಅಲ್ಲಿದ್ದರೆ, ಶರಣ ವ್ರತದಲ್ಲಿ ದೇವ - ಭಕ್ತರ ನಡುವೆ ಸಮಾಜ ಎಂಬ ಅಂಶವಿದೆ. ಇಲ್ಲಿ ಸಮಾನತೆ ಮತ್ತು ಧಾರ್ಮಿಕ ಸಹೋದರತ್ವವಿದೆ. ಆದಿ ಶರಣರು ಮಾತನಾಡುವ ದೇವರುಗಳು. ಹೀಗಾಗಿ ಅವರು ಕೊಟ್ಟ ವಚನ ಸಾಹಿತ್ಯದ ದಿವ್ಯ ಬೆಳಕು ಇಲ್ಲಿ ಮಾರ್ಗದರ್ಶನಕ್ಕಿದೆ. ಶರಣ ವ್ರತವನ್ನು ಮಹಿಳೆಯರೂ ಸ್ವೀಕರಿಸಿ ಯಾವ ನಿರ್ಬಂಧವಿಲ್ಲದೆ ಬಂದು ಭಾಗಿಗಳಾಗಬಹುದು.

☒ **ವಿಶ್ವೇಶ್ವರಯ್ಯ, ವಿವೇಕಾನಂದ ನಗರ, ಬೆಂಗಳೂರು.**- ವೀರಶೈವ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆಯ ಅಧ್ಯಕ್ಷ ಬಿ.ಎಸ್. ಪರಮಶಿವಯ್ಯನವರು ಎಸ್.ಜೆ.ಎಮ್. (ಶ್ರಿ ಜಗದ್ಗುರು ಮುರುಘರಾಜೇಂದ್ರ) ಟವರ್ಸ್ ಉದ್ಘಾಟನೆಯ ಸಮಯದಲ್ಲಿ ಬಹುದೊಡ್ಡ ಹೋಮ ಮಾಡಿದರು. ಇನ್ನಿತರ ಖರ್ಚು ಬಿಟ್ಟು ಎರಡು ಲಕ್ಷ ರೂಪಾಯಿಗಳ ಸಾಮಗ್ರಿಯನ್ನು ಬೆಂಕಿಯಲ್ಲಿ ಆಹುತಿ ಮಾಡಿದರೆಂದು ಜನರು ಮಾತಾಡುತ್ತಾರೆ. ಸೃಷ್ಟಿಕರ್ತ ಲಿಂಗದೇವನ ವಚನಾಂಕಿತದ ವಿರುದ್ಧ ಹೋರಾಟ ಮಾಡಿದ ಮುರುಘರಾಜೇಂದ್ರ ಶರಣರು ಮತ್ತವರ ಬಸವ ಕೇಂದ್ರದವರು ಈ ಹೋಮವನ್ನು ವಿರೋಧಿಸಲಿಲ್ಲವೇಕೆ ?

★ ಶ್ರೀ ಬಿ.ಎಸ್. ಪರಮಶಿವಯ್ಯನವರು ವೀರಶೈವ ಸಮಾಜದ ಗಣ್ಯರು, ಪ್ರಭಾವಶಾಲಿಗಳು ಮೇಲಾಗಿ ಪರಮ ಪೂಜ್ಯ ಸಿದ್ಧಗಂಗಾ ಶ್ರೀಗಳ ಅಚ್ಚುಮೆಚ್ಚಿನ ಮಾನಸ ಪುತ್ರರು ಅರ್ಥಾತ್ ಶಿಷ್ಯರು. ಚಿತ್ರದುರ್ಗದ ಮುರುಘರಾಜೇಂದ್ರ ಶರಣರ ಹಿಂಬಾಲಕರು. ಅಂಥವರು ಬಸವ ತತ್ತ್ವ ವಿರೋಧಿಯಾದ ಹೋಮ ಮಾಡಿದರೂ ಕ್ಷಮ್ಯವೆ ! ಅವರಿಗೆ ಹಲವು

ಗುರುಗಳ ಅಭಯ ರಕ್ಷೆ ಇದೆ. 'ಮಾರಿ ಕಣ್ಣು ಹೋತನ ಮೇಲೆ' ಎಂಬ ಗಾದೆಯಂತೆ ಮುರುಘರಾಜೇಂದ್ರ ಶರಣರು ಮತ್ತವರ ಬಸವ ಕೇಂದ್ರದವರು ಕಣ್ಣು ಇರುವುದು ಮಹಿಳಾ ಗುರುಗಳ ಮೇಲೆಯೇ ಹೊರತು ತಮ್ಮ ಹಿಂಬಾಲಕರು ಮತ್ತು ಅಭಿಮಾನಿಗಳ ಮೇಲಲ್ಲ.

☒ **ಚಂದ್ರಶೇಖರ್, ಮೈಸೂರು.**- ನಮ್ಮೂರಲ್ಲಿ ಒಬ್ಬ ಲಿಂಗಾಯತರು ನೂತನ ಗೃಹ ಪ್ರವೇಶದ ಸಮಯದಲ್ಲಿ ಬ್ರಾಹ್ಮಣ ಪುರೋಹಿತರ ಮಾತು ಕೇಳಿ ಅದ್ದೂರಿಯಾಗಿ ಹೋಮ ಮಾಡಿದರು. ಶರಣ ಮಾರ್ಗಿಗಳಾದ ನಮಗೆ ಇದು ಸಲ್ಲದ ದಾರಿ ಎಂದು ಪರಿಪರಿಯಾಗಿ ಹೇಳಿದರೂ ಕೇಳದೆ ಹೋಮ ಮಾಡಿದರು. ಕಾಕತಾಳೀಯ ನ್ಯಾಯವೋ ಎಂಬಂತೆ ಎರಡು ತಿಂಗಳಲ್ಲಿ ಹೋಮ ಮಾಡಿಸಿದ ಮನೆಯ ಮಾಲಿಕರಾದ ನಮ್ಮ ಮಿತ್ರರು ಆರೋಗ್ಯ ಚೆನ್ನಾಗಿ ಇದ್ದವರೇ ಹೃದಯ ಸ್ತಂಭನದಿಂದ ತೀರಿ ಹೋದರು. ಸ್ವಧರ್ಮ ವಿರೋಧಿ ಕೆಲಸ ಮಾಡಿದ್ದರಿಂದಲೇ ಹೀಗಾಯಿತು ಎಂದು ಶರಣ ಮಾರ್ಗಿಗಳ ಅಂಬೋಣ. ಅದಕ್ಕಾಗಿ ಅವರ ಮನೆಯವರು ಪಶ್ಚಾತ್ತಾಪ ಪಡುತ್ತಿದ್ದಾರೆ. ನೀವೇನಂತೀರಿ ?

★ ವೈದಿಕ ಧರ್ಮ ಒಂದು ಮಾತನ್ನು ಒತ್ತಿ ಒತ್ತಿ ಹೇಳುತ್ತದೆ. "ಸ್ವಧರ್ಮದಲ್ಲಿ ಶ್ರೇಯಸ್ಸಿದೆ, ಪರಧರ್ಮ ಭಯಾತ್ಮಕವಾದುದು" ಲಿಂಗಾಯತರಿಗೆ ಹೋಮಹವನಾದಿಗಳು ಸ್ವಧರ್ಮ ವಿರೋಧಿ ಆಚರಣೆಗಳು

ಆದಿಯಲಾಗಲಿ ವೇದದಲಾಗಲಿ ಶಾಸ್ತ್ರದಲಾಗಲಿ ಸಮಯದಲಾಗಲಿ
ಎನ್ನವರೆನ್ನೆನಯ್ಯ, ಎನ್ನವರಾದರೆ ಜನ್ನಕ್ಕೆ ನಡೆವರೆ ?

ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು. ಹೋಮ-ಹವನ, ಯಜ್ಞ-ಯಾಗ ಮಾಡುವವರು ಲಿಂಗಾಯತ ಧರ್ಮ, ಶರಣ ಪಥದ ಅಪ್ಪಟ ವಿರೋಧಿಗಳು. ಹಾಲಿನ ವ್ಯಾಪಾರ ಮಾಡಲು ಲೈಸನ್ಸ್ ಪಡೆದು ಸಾರಾಯಿ ಅಂಗಡಿ ತೆಗೆಯುವುದು ಶಿಕ್ಷಾರ್ಹ ಅಪರಾಧ. ಹಣ್ಣಿನ ಅಂಗಡಿಗೆ ಲೈಸೆನ್ಸ್ ಪಡೆದು ಮಾಂಸದ ಅಂಗಡಿ ತೆರೆಯುವುದು ತಪ್ಪಲ್ಲವೆ ? ದೇವರ ಕುರುಹಾದ ಇಷ್ಟಲಿಂಗ ಧರಿಸಿ, ಹುಟ್ಟಿದಾಗ ಕೂಸಾಗಿದ್ದಲೇ ಲಿಂಗಧಾರಣೆ ಮಾಡಿಕೊಂಡು ಎಲ್ಲ ಅರ್ಜಿಗಳಲ್ಲಿ ಲಿಂಗಾಯತರೆಂದು ಬರೆಸಿ ಮತ್ತೂ ದೇವ ವಿರೋಧಿ ಕಾರ್ಯವಾದ ಹೋಮ - ಯಜ್ಞಗಳನ್ನು ಮಾಡಿದರೆ ಧರ್ಮಗುರು ಬಸವಣ್ಣನವರು ಮೆಚ್ಚುವರೆ ? ಅದಕ್ಕೇ ಶಿಕ್ಷೆಯಾಗಿದ್ದರೂ ಆಗಿರಬಹುದು.

☒ **ಶಿವರಾಜ ಕುಮಾರ್, ಜಯನಗರ, ಬೆಂಗಳೂರು.**- ಬಿ.ಎಸ್. ಪರಮಶಿವಯ್ಯ-ನವರು ಹೋಮದ ಸಿದ್ಧತೆಯಲ್ಲಿರುವಾಗ ಓರ್ವ ಲಿಂಗಾಯತ ತತ್ತ್ವನಿಷ್ಠರು ನೀವು ಮಾಡುತ್ತಿರುವುದು ಸರಿಯಲ್ಲ ಎಂದು ತಿಳಿಹೇಳಲು ಹೋದಾಗ "ನಾವು ವೀರಶೈವರು, ಲಿಂಗಾಯತರಲ್ಲ" ಎಂದು ವ್ಯಂಗ್ಯವಾಡಿ ಪ್ರತಿಕ್ರಿಯೆ ತೋರಿದರೆಂದು ಸುದ್ದಿ. ಹಾಗಾದರೆ ಅವರು ವೀರಶೈವರು ಎಂದು ನಾವು ತತ್ತ್ವ ಹೇಳುವುದು ಬಿಟ್ಟುಬಿಡಬೇಕೆ ?

★ ಕೆಲವರು ಹಿಂದುಗಳು ಬಹುಪತ್ನಿಯರನ್ನು ಹೊಂದಲು ಕಾನೂನಿನ ಪ್ರಕಾರ ಸಾಧ್ಯವಾಗದೆಂದು ಅದಕ್ಕಾಗಿ ಇಸ್ಲಾಂಗೆ ಮತಾಂತರವಾಗುವರಂತೆ. ಪರಮಶಿವಯ್ಯನವರ

ವೀರಶೈವ ಪ್ರೇಮದ ಗುಟ್ಟೂ ಅದೇ ಹೋಲಿಕೆ ಹೊಂದಿದಂತೆ ಕಾಣುತ್ತದೆ. ಬಸವ ಜಯಂತಿಗಾಗಿ ಧನ ಸಂಗ್ರಹ ಮಾಡುವಾಗ ಲಿಂಗಾಯತರಾಗುವುದು, ಹೋಮ - ಯಜ್ಞ ಮಾಡುವಾಗ ವೀರಶೈವರಾಗುವುದು ಬಲೇ ಮೋಜಿನ ವಿಷಯ. ಆದರೆ ಅವರಿಗೆ ಲಿಂಗಾಯತ, ವೀರಶೈವ, ಶೈವ ಯಾವುದೂ ಗೊತ್ತಿಲ್ಲ. ಶೈವ ಪರಂಪರೆಯ ಮೂಲಪುರುಷ 'ಶಿವ' ಯಜ್ಞ ವಿರೋಧಿ. ಅಂತೆಯೇ ಸ್ವತಃ ತನ್ನ ಮಾವ ದಕ್ಷಬ್ರಹ್ಮ ಹಮ್ಮಿಕೊಂಡ ಯಜ್ಞಕ್ಕೆ ಪರವಾನಗಿ ಕೊಡಲಿಲ್ಲ. ಅನುಮತಿ ಇಲ್ಲದೆ ಯಜ್ಞ ಮಾಡಿದಾಗ ತನ್ನ ಪರಮ ಶಿಷ್ಯ ವೀರಭದ್ರನನ್ನು ಕಳಿಸಿ, ದಕ್ಷಯಜ್ಞವನ್ನು ಕೆಡಿಸಲಿಲ್ಲವೆ ? ರಾಕ್ಷಸರು ಯಜ್ಞಗಳನ್ನು ಕೆಡಿಸುವರು, ಹೋಮ ಕುಂಡಕ್ಕೆ ನೀರು ಸುರಿಯುವರು ಎಂದು ಆರ್ಯ ಋಷಿಗಳು ಗೋಳಿಟ್ಟಾಗ ರಾಮ, ಲಕ್ಷ್ಮಣರು ಯಜ್ಞಕ್ಕೆ ರಕ್ಷಣೆ ಕೊಡುತ್ತಾರಲ್ಲವೆ ? ಮಹಿಷಾಸುರ ಮುಂತಾದವರು ಯಜ್ಞ - ಯಾಗಗಳನ್ನು ಕೆಡಿಸುವ ಅಸುರರು ಎಂದು ಪುರಾಣಗಳಲ್ಲಿ ಬರುವುದಿಲ್ಲವೆ ? ಇವರಾರೂ ಕೋರೆ ಹಲ್ಲುಳ್ಳವರಂತೆ ಚಿತ್ರಿಸುವ ರಾಕ್ಷಸರಲ್ಲ; ಮಹಿಷಾಸುರ, ರಾವಣ ಮುಂತಾದವರೆಲ್ಲ ಶಿವಭಕ್ತರಾದ ದ್ರಾವಿಡ ರಾಜರು, ಅವರು ಪ್ರಾಣಬಲಿ, ಯಜ್ಞದಲ್ಲಿ ಪ್ರಾಣವಧೆ ಮಾಡದೆ ಅಗ್ನಿಯಲ್ಲಿ ಬೆಲೆಯುಳ್ಳ ವಸ್ತುಗಳನ್ನು ದಹಿಸದೆ ಏಕದೇವತೋ(ಶಿವೋ)ಪಾಸಕರಾಗಿ ಶೈವಧರ್ಮದ ಶುದ್ಧ ಭಕ್ತಿಯನ್ನು ಅಳವಡಿಸಿಕೊಂಡಿದ್ದರು. ಅದಕ್ಕಾಗಿ ಆರ್ಯರು ತಮ್ಮನ್ನು ಸುರರು ದೇವತೆಗಳೆಂದು ಕರೆದುಕೊಂಡು ದ್ರಾವಿಡರನ್ನು, ಮೂಲ ನಿವಾಸಿಗಳನ್ನು ಅಸುರರು - ಅನಾರ್ಯರು, ರಾಕ್ಷಸರು ಎಂದೆಲ್ಲ ಕರೆದರು. ಯಜ್ಞ-ಯಾಗ ವಿರೋಧಿಗಳೆಲ್ಲರೂ ರಾಕ್ಷಸರಾದರೆ ಆಗ ಬುದ್ಧ, ಮಹಾವೀರ, ಬಸವಣ್ಣ ಮುಂತಾದವರನ್ನೆಲ್ಲ ರಾಕ್ಷಸ ವರ್ಗಕ್ಕೆ ಸೇರಿಸಬೇಕಾದೀತು.

ಭಾರತ ದೇಶದಲ್ಲಿ ಪ್ರಚಲಿತವಾದ ಎರಡು ಪರಂಪರೆಗಳಿವೆ. 1. ಶೈವ. 2. ವೈದಿಕ. ಶೈವದ ಮುಖ್ಯ ಲಕ್ಷಣ ದೇವಾಲಯ ರಚನೆ, ಶಿವಲಿಂಗ ಸ್ಥಾಪನೆ, ಆರಾಧನಾ ಕ್ರಮ - ಅಷ್ಟವಿಧಾರ್ಚನೆ. ವೈದಿಕವು ನಿಸರ್ಗಾರಾಧನೆಗೆ ಒತ್ತು ಕೊಟ್ಟು ಅಗ್ನಿಯ ಮೂಲಕ ದೇವತೆಗಳಿಗೆ ಹವಿಸ್ಸು ಕೊಡುವ ವಿಧಾನ ಅನುಸರಿಸಿತು. ಆದ್ದರಿಂದ ಶೈವವಾಗಲಿ, ವೀರಶೈವವಾಗಲಿ ಯಜ್ಞ ವಿರೋಧಿ "ಯಾವ ಅಗ್ನಿಯನ್ನು ನೀವು-ಆರ್ಯರು ದೇವರೆಂದು ಗೌರವಿಸುವಿರೋ ಅದನ್ನು (ಅದು ಪಂಚ ಭೂತಗಳಲ್ಲಿ ಒಂದು ಆದ ಕಾರಣ) ನಾನು ತುಳಿಯುತ್ತೇನೆ" ಎಂದು ವೀರಭದ್ರ ತುಳಿದು ತೋರಿಸಿದ. ಆದರೆ ಈ ಮೂಢ ವೀರಶೈವರು ಕ್ರಾಂತಿಪುರುಷ, ಧರ್ಮಗುರು ಬಸವಣ್ಣನವರನ್ನು ಅರಿಯದೆ, ವೀರಪುರುಷ ವೀರಭದ್ರನನ್ನೂ ಅರಿಯದೆ, ಮಹಾನ್ ಯೋಗಿ ಭಕ್ತಿ ಮಾರ್ಗ ಸಂಸ್ಥಾಪಕ ಶಿವನನ್ನೂ ಅರಿಯದೆ ಈ ಎಲ್ಲಕ್ಕೂ ಹೊರತಾದ, ವಿರುದ್ಧವಾದ ವೈದಿಕಾಚರಣೆಯಲ್ಲಿ ನಿರತರಾಗಿರುವ ಎಡಬಿಡಂಗಿಗಳಾಗಿದ್ದಾರೆ. ವೀರಶೈವರು, ಶೈವರು ಯಾರೂ ಹೋಮ-ಹವನ, ಯಜ್ಞ-ಯಾಗ ಮಾಡಬಾರದು. ಇನ್ನು ಲಿಂಗಾಯತರು ಮಾಡಿದರಂತೂ ಅವರು ಬಸವ ಗುರುವಿನ ಕೋಪ-ಶಾಪಕ್ಕೆ ತುತ್ತಾಗದೆ ಇರರು. "ಇಂಥವರ ಎನಗೊಮ್ಮೆ ತೋರದಿರಯ್ಯ" ಎಂದು ಧರ್ಮಗುರು ಬಸವಣ್ಣನವರು ಹೇಳಿ ಅವರತ್ತ ಕಣ್ಣು ಹಾಯಿಸುವುದಿಲ್ಲ ಎನ್ನುತ್ತಾರೆ. ಹರಮುನಿದವರನ್ನು ಗುರು ಕಾಯಬಲ್ಲ; (ಧರ್ಮ)ಗುರು

ಮುನಿದವರನ್ನು ದೇವರು ಸಹಿತ ಕೈಬಿಡುವುದು ಸತ್ಯ. (ಅವರು ಯಾರೇ ಇರಲಿ ಗೃಹಸ್ಥರೇ ಇರಲಿ, ಮಠಾಧೀಶರೇ ಇರಲಿ ಹೋಮ-ಹವನ, ಯಜ್ಞ-ಯಾಗ ಮಾಡುವವರಿಗೆ ಬುದ್ಧಿ ಹೇಳುವುದಲ್ಲ (ಹೇಳಲೇಬೇಕು) ಅವರನ್ನು ಸಮಾಜದಿಂದ ಹೊರಗೆ ಇಡುವ ತಾಕತ್ತು ಈ ಸಮಾಜಕ್ಕೆ ಬಂದಾಗಲೇ ಇದು ಸುಧಾರಿಸುವುದು. ತನ್ನ ಧರ್ಮವು ವಿಧಿಸಿರುವ ಕಟ್ಟು ಕಟ್ಟಳೆ ಮೀರಿ ನಡೆಯುವ ಜನ ಬಹುಶಃ ಲಿಂಗಾಯತರಲ್ಲಿ ಅಲ್ಲದೆ ಬೇರೆ ಸಮಾಜದಲ್ಲಿ ಸಿಗಲಿಕ್ಕಿಲ್ಲ.

ಯಜ್ಞ-ಯಾಗಗಳಲ್ಲಿ ಆಡು, ಅಶ್ವ, ಗಜಗಳನ್ನು ಶಾಸ್ತ್ರೀಯವಾಗಿ ಬಲಿಕೊಡುವ ಹಿಂಸೆ ಇದ್ದರೆ, ಹೋಮ-ಹವನಗಳಲ್ಲಿ ಅಮೂಲ್ಯವಾದ ಉಪಯುಕ್ತ ವಸ್ತುಗಳನ್ನು ಸುಡುವ ಅಪವ್ಯಯವಿದೆ. ಆದ್ದರಿಂದ ಅಹಿಂಸಾವಾದಿಗಳು ಮತ್ತು ಮಾನವತಾವಾದಿಗಳಾದ ಲಿಂಗಾಯತರು ಇವನ್ನು ಪ್ರೋತ್ಸಾಹಿಸಬಾರದು.

⊠ **ಬಸವರಾಜ ಸಿರಿಯಣ್ಣನವರು, ಹುಬ್ಬಳ್ಳಿ.**- ಸಮಸ್ಯೆ ಸಮಾಧಾನ ಅತ್ಯಂತ ಆಕರ್ಷಣೀಯ ವಿಭಾಗ. ತುಂಬಾ ಉತ್ತಮ ತರಬೇತಿ ನೀಡುತ್ತದೆ. ಆದರೆ ಕೆಲವೊಂದು ಉತ್ತರಗಳು ತೀಕ್ಷ್ಣವಾಗಿ, ತಪ್ಪು ಮಾಡುವವರಿಗೆ ನೋವುಂಟು ಮಾಡುತ್ತವೆ. ಇನ್ನು ಸ್ವಲ್ಪ ಮೃದುಭಾಷೆಯಲ್ಲಿದ್ದರೆ ಒಳ್ಳೆತಲ್ಲವೆ ?

★ "ಗುರೂಪದೇಶ ಮಂತ್ರ ವೈದ್ಯ, ಜಂಗಮೋಪದೇಶ ಶಸ್ತ್ರ ವೈದ್ಯ" ಎನ್ನುತ್ತಾರೆ ಧರ್ಮಪಿತರು. ಲಿಂಗಾಯತ ಸಮಾಜದೊಳಗಣ ರೋಗದ ಗಡ್ಡೆಗಳಾದ ಜಾತೀಯತೆ, ಮೂಢನಂಬಿಕೆ, ಬಹುದೇವತೋಪಾಸನೆ, ವೈದಿಕಾಚರಣೆ ಮುಂತಾದವು ಬಹಳ ಬಲಿತಿವೆ. ಶಸ್ತ್ರ ಚಿಕಿತ್ಸೆಯ ಹೊರತು ಬೇರೆ ಮಾರ್ಗವಿಲ್ಲ. ಅದಕ್ಕಾಗಿ ಕಲ್ಯಾಣ ಕಿರಣ ಶಸ್ತ್ರ ಚಿಕಿತ್ಸೆ ಮಾಡುವ ಚಾಕು-ಕತ್ತರಿಯಂತೆ ; ವಚನ ಸಾಹಿತ್ಯವು ಶಸ್ತ್ರ ಚಿಕಿತ್ಸೆಗೆ ನೆರವಾಗುವ ಬೆಳಕಿನಂತೆ. ಶಸ್ತ್ರ ಚಿಕಿತ್ಸೆ ಮಾಡುವಾಗ ನೋವು ಎನಿಸಿದರೂ ನಂತರ ಗಡ್ಡೆ ಹೊರಹೋದಾಗ ಆರಾಮವಾಗುತ್ತದೆ.

⊠ **ಸಿದ್ದರಾಮ ಪೂಜಾರಿ, ನಿವೃತ್ತ ಸೈನಾಧಿಕಾರಿ, ಮೀರಜ್.**- ಮಹಾರಾಷ್ಟ್ರದ ಮೀರಜಿನ ಲಿಂಗಾಯತರಲ್ಲಿ ಏನೇನೋ ಆಚರಣೆ ಇದ್ದವು. ಒಂದು ಪೂರ್ಣಾವಧಿ ಪ್ರವಚನ ಪೂಜ್ಯ ಮಾತೆ ಮಂಗಳಾದೇವಿ ಅವರಿಂದ ಆದುದು ಒಂದು ಹೊಸಬೆಳಕು ಚೆಲ್ಲಿದಂತೆ ಆಯಿತು. ದೀಪಾವಳಿಯ ಸಮಯದಲ್ಲಿ ಲಕ್ಷ್ಮೀ ಪೂಜೆ ಮಾಡುತ್ತಿದ್ದ ಬಹುಪಾಲು ಲಿಂಗಾಯತರು ಅದನ್ನು ಬಿಟ್ಟು ಈ ವರ್ಷ ಬಸವೇಶ್ವರರ ಭಾವಚಿತ್ರ ಇಟ್ಟು, ಬಸವ ಪೂಜಾವ್ರತ ಮಾಡಿದರೆಂದು ತಿಳಿಸಲು ಸಂತೋಷವೆನಿಸುತ್ತದೆ.

★ ನಿಮ್ಮ ಪತ್ರ ಓದಿ ನಮಗಂತೂ ಪರಮಾನಂದವಾಯಿತು. ಕಾಲ್ಪನಿಕ ದೇವತೆಗಳು ಬಂಜೆಯ ಮಕ್ಕಳಂತೆ; ಎಂದೂ ಇದ್ದವರಲ್ಲ. ಪುರಾಣಗಳನ್ನು ಓದಿ ತಾವು ತಾವೇ ಆಕಾರ ಕೊಟ್ಟು ಕಲ್ಪಿಸಿಕೊಂಡ ದೇವತೆಗಳನ್ನು ಪೂಜಿಸುತ್ತಾ ಲಿಂಗಾಯತರಷ್ಟೆ ಅಲ್ಲ ಸಮಸ್ತ ಹಿಂದುಗಳು ಭ್ರಾಂತಿ-ಭೀತಿಗಳಲ್ಲಿ ಸಿಕ್ಕಿ ಬಿದ್ದಿದ್ದಾರೆ. ಸರ್ವಶಕ್ತನಾದ ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ದೇವನನ್ನು, ಪರಮಯೋಗಿಗಳು, ದೇವರ ಪ್ರತಿನಿಧಿಗಳು, ಲೋಕಹಿತಚಿಂತಕರೂ ಆದ ಬಸವಣ್ಣನವರಂತಹ ಜ್ಞಾನಿಗಳನ್ನು ಆರಾಧಿಸಿ, ಅನುಸರಿಸುವ ಪ್ರೌಢತೆ ಬಂದಾಗ ಭಾರತ ದೇಶದ ಸಂಕಷ್ಟ ನಿವಾರಣೆಯಾಗದಿರದು. ■

ಕಟ್ಟಡ ನಿಧಿಗೆ ಕಾಣಿಕೆ ನೀಡಲು ಕೋರಿಕೆ

ಶರಣ ಬಂಧುಗಳೇ,

ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಸ್ಥಾಪಿಸಿದ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮುನ್ನಡೆಸುತ್ತಿರುವ ಸಂಸ್ಥೆಗಳೆಂದರೆ 1. ಕೂಡಲ ಸಂಗಮದ ಬಸವ ಧರ್ಮ ಪೀಠ. 2. ಬೆಂಗಳೂರಿನ ವಿಶ್ವಕಲ್ಯಾಣ ಮಿಷನ್. 3. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ.

ಬಸವ ಧರ್ಮಪೀಠ ಟ್ರಸ್ಟ್ ಆಶ್ರಯದಲ್ಲಿ ಅಕ್ಕನಾಗಲಾಂಬಿಕಾ ಶರಣಧಾಮ ಪೂರ್ಣಗೊಂಡಿದೆ. ಈಗ ಸರ್ವಜ್ಞ ಶರಣಧಾಮವು ನಿರ್ಮಾಣ ಹಂತದಲ್ಲಿದ್ದು ನೆಲ ಅಂತಸ್ತು, ಮೊದಲ ಅಂತಸ್ತು ಪೂರ್ಣಗೊಂಡಿವೆ. 2ನೆಯ ಅಂತಸ್ತಿಗೆ ಆರ್.ಸಿ.ಸಿ. ಮೇಲ್ ಛಾವಣಿ ಬೀಳುತ್ತಿದೆ. ದಾನಿಗಳು ಸಿಂಗಲ್ ಕೋಣೆಗೆ 51000 ರೂಗಳಂತೆ ಡಬ್ಬಲ್ ಕೋಣೆಗೆ 71000 ರೂಗಳಂತೆ ಧನ ಸಹಾಯ ಮಾಡಿದ್ದಾರೆ, ಮಾಡುತ್ತಿದ್ದಾರೆ. ಆದರೆ ವಾಸ್ತವಿಕವಾಗಿ ಸಿಂಗಲ್ ಕೋಣೆ, ವೆರಾಂಡಾ, ಬಾತ್, ಲಾಟ್ರಿನ್ ಸೇರಿ 2 3/4 ಚದರ ಬರುವುದರಿಂದ ಸಂಸ್ಥೆಗೆ ಸಿಂಗಲ್ ಕೋಣೆಗೆ ಸುಮಾರು ಒಂದೂವರೆ ಲಕ್ಷ, ಡಬ್ಬಲ್ ಕೋಣೆಗೆ ಎರಡು ಲಕ್ಷ ವೆಚ್ಚ ತಗುಲುತ್ತದೆ. ಒಬ್ಬರೇ ದಾನಿಗಳಿಂದ ನಾವು ಪೂರ್ಣ ವೆಚ್ಚ ನಿರೀಕ್ಷಿಸುವುದು ಉಚಿತವಲ್ಲ ಎಂದು ಭಾವಿಸಿ, 51000 ರೂ ಕೊಟ್ಟವರ ಹೆಸರನ್ನು ಸಿಂಗಲ್ ಕೋಣೆಗೆ, 71000 ರೂ ಕೊಟ್ಟವರ ಹೆಸರನ್ನು ಡಬ್ಬಲ್ ಕೋಣೆಗೆ ಹಾಕುತ್ತೇವೆ. ಸಾಮಾನ್ಯವಾಗಿ ದಾನಿಗಳು ಶರಣ ಮೇಳದ 5-6 ದಿವಸ ಕೋಣೆಗಳನ್ನು ತಮಗಾಗಿ ಬಳಸಿಕೊಳ್ಳುವರು. ಬಾಕಿ ದಿನಗಳಲ್ಲಿ ಬಂದ ಪ್ರವಾಸಿಕರಿಗೆ ಕೋಣೆಗಳು ಲಭ್ಯವಾಗುತ್ತವೆ. ಆದರೆ ಕಾಣಿಕೆ ಕೊಡುವ ದಾನಿಗಳು ದಾಸೋಹ ನಿಧಿಗೆ 1111 ರೂ, ಪೂಜಾ ನಿಧಿಗೆ 501 ರೂ, ಕೊಡುವುದರಿಂದ ಆ ಹಣ ದಾಸೋಹ/ಪೂಜಾ ನಿಧಿಗೆ ಪುದುವಟ್ಟಾಗುತ್ತದೆ. ಹೀಗಾಗಿ ಕಟ್ಟಡ ನಿಧಿಗೆ ಹಣ ಹೊಂದಿಸುವುದು ಕಷ್ಟಕರವಾಗುತ್ತಿದೆ.

ಕೂಡಲ ಸಂಗಮದ ಮಹಾಮನೆ ಮಹಾಮಠದ ವಸತಿ ಗೃಹಗಳನ್ನು ಬಿಟ್ಟರೆ ಉಳಿದಂತೆ ಹತ್ತಿರದಲ್ಲಿ ಪ್ರವಾಸಿಕರಿಗೆ ವಸತಿ ವ್ಯವಸ್ಥೆ ಕಡಿಮೆ ದರದಲ್ಲಿ ಸಿಗುವುದೇ ಇಲ್ಲ. ಹೀಗಾಗಿ ರಜಾ ದಿನಗಳಲ್ಲಿ, ಶಾಲಾ ಪ್ರವಾಸ ದಿನಗಳಲ್ಲಿ ನಮ್ಮ ವಸತಿ ಗೃಹಗಳು ಸಾಲದಂತಾಗಿ ಅನಿವಾರ್ಯವಾಗಿ ಜನರನ್ನು ವಾಪಸ್ಸು ಕಳಿಸಬೇಕಾಗುತ್ತದೆ. ಕಟ್ಟಡ ನಿಧಿಗೆ ಸದ್ಭಕ್ತರು ಕಾಣಿಕೆ ನೀಡಿ ಬೇಗನೇ ನಿರ್ಮಾಣ ಕಾರ್ಯ ಪೂರೈಸಿದರೆ ಪ್ರವಾಸಿಕರಿಗೆ ಬಹಳ ಅನುಕೂಲಕರವಾಗುತ್ತದೆ.

ಪ್ರವಚನ ಮಂಟಪ

ವಿಶ್ವಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿ ಸ್ಥಾಪಿಸಿರುವ ಬಸವಾಲಯದ ಮುಂದೆ ಭವ್ಯವಾದ ಪ್ರವಚನ ಮಂಟಪವನ್ನು ನಿರ್ಮಿಸುತ್ತಿದ್ದು ಭವ್ಯವಾದ ಕಟ್ಟಡ ಆಗಲಿದೆ. ಮಹಾಮನೆ ಮಹಾಮಠದ ಮಹಾದ್ವಾರದ ಕೆಲಸವೂ ಅಪೂರ್ಣವಾಗಿದೆ. ಇದೆಲ್ಲಕ್ಕೂ ಹಣದ ಕೊರತೆ ಇರುವುದರಿಂದ ಶರಣ ಬಂಧುಗಳು ಕಟ್ಟಡನಿಧಿಗೆ ತಮ್ಮ ಕೈಲಾದಷ್ಟು ಧನ ಸಹಾಯ ಮಾಡಬೇಕಾಗಿ ಕೋರುತ್ತೇವೆ. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಈ ಎಲ್ಲ ನಿರ್ಮಾಣ

ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದೇ ಅಲ್ಲದೆ, 80 ಜಿ. ಇನ್‌ಕಮ್ ಟ್ಯಾಕ್ಸ್ ರಿಯಾಯಿತಿಯ ಸೌಲಭ್ಯ ಹೊಂದಿದೆ. ಆದ್ದರಿಂದ ಶರಣ ಬಂಧುಗಳು ಕಟ್ಟಡ ನಿಧಿಗೆ ಉದಾರವಾಗಿ ಕಾಣಿಕೆ ನೀಡಬೇಕೆಂದು, ಶರಣ ಮೇಳಕ್ಕೆ ಬಂದಾಗ ಉದಾರವಾಗಿ ಸಲ್ಲಿಸಬೇಕೆಂದು, ಅದಕ್ಕೂ ಮೊದಲೂ ಡಿ.ಡಿ. ಮೂಲಕ ಕಳುಹಿಸಬಹುದೆಂದು ಸೂಚಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬೆಂಗಳೂರು, ದಿ: 23-11-2001

ಕನ್ನಡೇತರ ಭಾಷೆಯ ಗ್ರಂಥ ಪ್ರಕಟಣೆಗೆ ಧನ ಸಹಾಯ ಮಾಡಲು ಕೋರಿಕೆ.

ಕನ್ನಡದಲ್ಲಿ ಸಾಕಷ್ಟು ಗ್ರಂಥಗಳನ್ನು ಪ್ರಕಾಶಿಸುತ್ತಿದ್ದೇವೆ. ಧರ್ಮಪಿತ ಬಸವಣ್ಣನವರು, ಅವರ ಸಮಕಾಲಿನ ಶರಣರು ಮತ್ತು ಲಿಂಗಾಯತ ಧರ್ಮ ಕುರಿತಾದ ಅನೇಕ ಗ್ರಂಥಗಳು ಮುದ್ರಣಗೊಂಡಿವೆ ಮತ್ತು ಮುದ್ರಣಗೊಳ್ಳುತ್ತಿವೆ. ಇವೆಲ್ಲಕ್ಕೂ ಜನರು ಉದಾರವಾಗಿ ನೆರವು ನೀಡಬೇಕು. ಜೊತೆಗೆ ಮರಾಠಿ, ಹಿಂದಿ, ತೆಲುಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಆವಶ್ಯಕ ಗ್ರಂಥಗಳನ್ನು ಪ್ರಕಟಿಸುವುದು ನಮಗೆ ಅಗತ್ಯವಾಗಿ ತೋರಿ ಬರುತ್ತಲಿದೆ. ಕನ್ನಡ ಭಾಷಿಕ ದಾನಿಗಳು ಕನ್ನಡ ಪುಸ್ತಕಗಳಿಗೆ ಮಾತ್ರ ನೆರವು ನೀಡ ಬಯಸದೆ ಇನ್ನಿತರ ಭಾಷೆಗಳ ಅನುವಾದಿತ ಕೃತಿಗಳಿಗೂ ದೇಣಿಗೆ ನೀಡಿದರೆ ನಮಗೆ ಬಹಳ ಸಹಾಯವಾಗುತ್ತದೆ. ದಾನಿಗಳಿಗೆ ಓದಲು ಬರದಿದ್ದರೂ ಇನ್ನಿತರ ಭಾಷಿಕರಿಗೆ ಅಂದರೆ ಅನ್ಯ ಭಾಷೆಯ ಧರ್ಮ ಬಂಧುಗಳಿಗೆ ನೆರವಾದಂತೆ ಆಗುತ್ತದೆ. ಆದ್ದರಿಂದ ಈ ರೀತಿ ಅನ್ಯಭಾಷೆಗಳಲ್ಲಿ ಸಾಹಿತ್ಯ ಪ್ರಕಟಿಸುವ ಕಾರ್ಯಕ್ಕೆ ಮುಂದಾಗಬೇಕೆಂದು ಕೋರುತ್ತೇವೆ.

ಹಿಂದಿಯಲ್ಲಿ ತರಂಗಿಣಿ

ಪೂಜ್ಯ ಮಾತಾಜಿಯವರು ಬರೆದ 'ತರಂಗಿಣಿ'ಯು ಹಿಂದಿಗೆ ಭಾಷಾಂತರಗೊಂಡಿದ್ದು ಮುದ್ರಣಕ್ಕೆ ಸಿದ್ಧವಾಗಿದೆ. ಜಗನ್ಮಾತಾ ಅಕ್ಕಮಹಾದೇವಿಯ ದಿವ್ಯ ಜೀವನ-ಸಾಧನೆ-ಸಂದೇಶ ಚಿತ್ರಿಸುವ ತರಂಗಿಣಿ ರಾಷ್ಟ್ರಭಾಷೆ ಹಿಂದಿಯಲ್ಲಿ ಪ್ರಕಟವಾಗಬೇಕಾದುದು ಅತ್ಯಂತ ಅವಶ್ಯವಿದೆ. ಆದ್ದರಿಂದ ದಾನಿಗಳು ಧನ ಸಹಾಯಕ್ಕೆ ಮುಂದಾಗಲು ಕೋರುತ್ತೇವೆ. ಶರಣ ಮೇಳದಲ್ಲಿ ಬಿಡುಗಡೆ ಮಾಡಲು ಉತ್ಸುಕರಾಗಿದ್ದೇವೆ.

ತಮಿಳಿನಲ್ಲಿ ಅಕ್ಕನ ಪ್ರವಚನ

ಪೂಜ್ಯ ಶ್ರೀ ಲಿಂ|| ಲಿಂಗಾನಂದ ಮಹಾಸ್ವಾಮಿಗಳು ಬರೆದ ಅಕ್ಕನ ಪ್ರವಚನವು ಅಕ್ಕಮಹಾದೇವಿಯ ಜೀವನ ಚರಿತ್ರೆಯೊಡನೆ ಗುರು, ಲಿಂಗ, ಜಂಗಮ ಮುಂತಾದ ಅನೇಕ ತಾತ್ವಿಕ ವಿಚಾರಗಳೊಡನೆ ಪಾರಾಯಣ ಯೋಗ್ಯ ಗ್ರಂಥವಾಗಿದೆ. ಅದು ತಮಿಳಿಗೆ ಭಾಷಾಂತರಗೊಂಡಿದ್ದು ಮುದ್ರಿಸಬೇಕಾಗಿದೆ. ಆದ್ದರಿಂದ ಸಹೃದಯರು ಉದಾರವಾಗಿ ಧನ ಸಹಾಯ ಮಾಡಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮೀಜಿ

ಹೀಗೊಂದು ಪತ್ರ

ಬಸವ ಕಲ್ಯಾಣದ ಪ್ರಗತಿ ಮತ್ತು ಸಮಾಜ ಸಂಘಟನೆ ಅನಿವಾರ್ಯ ಅಗತ್ಯ

ಪೂಜ್ಯ ಶ್ರೀ ಮಾತಾಜಿಯವರಿಗೆ ಅನಂತ ಶರಣು ಶರಣಾರ್ಥಿಗಳು. ಗುರು ಬಸವಣ್ಣನವರ ಕೃಪೆಯಿಂದ ಕ್ಷೇಮ. ತಮ್ಮ ಆರೋಗ್ಯ ಹಾಗೂ ಕ್ಷೇಮ ಬಯಸುವೆ.

ವಚನಾಂಕಿತ ಪ್ರಕರಣದ ನಂತರ ನಾನು ತಮಗೆ ಬರೆಯುತ್ತಿರುವುದು ಇದು ಮೊದಲ ಪತ್ರ. ವಚನಾಂಕಿತ ಪ್ರಕರಣದಿಂದ ಅಂದಿನಿಂದ ಇಂದಿನವರೆಗೆ ನಡೆದ ಹೋರಾಟ (ಪರ-ವಿರೋಧ) ಗಮನಿಸಿ ನಾನು ಒಂದು ನಿರ್ಣಯಕ್ಕೆ ಬಂದಿದ್ದೇನೆ. ಅದೆಂದರೆ ಈ ವಿಷಯದಲ್ಲಿ ಮುಂದೆ "ಕಾಲವೇ ನಿರ್ಣಯ" ಕೊಡುತ್ತದೆ. ಅದಕ್ಕೆ ಎಲ್ಲರೂ ಬದ್ಧರಾಗಬೇಕು.

ವಚನಾಂಕಿತ ಬದಲಾವಣೆ ಕುರಿತು ನಿಮಗೆ ವಿರೋಧ ಮಾಡಿದವರಲ್ಲಿ ನಾನೂ ಒಬ್ಬ. ನಿಮ್ಮ ಬಗ್ಗೆ ಅಸಮಾಧಾನವಾಗಿದ್ದು ಇದೊಂದು ವಿಷಯಕ್ಕೆ ಮಾತ್ರ. ಯಾಕೆಂದರೆ ತಾವು ಯಾವುದೇ ನಿರ್ಣಯ ತೆಗೆದುಕೊಳ್ಳಬೇಕಾದರೆ ಸಾಕಷ್ಟು ಚರ್ಚೆ ಮಾಡಿ ಅದರ ಆಗು ಹೋಗುಗಳ ಬಗ್ಗೆ ಚಿಂತನೆ ಮಾಡಿ ನಿರ್ಧಾರಕ್ಕೆ ಬರುವವರು ಹೀಗೇಕೆ ಮಾಡಿದರು ಎಂಬ ನೋವು.

ಈಗ ತಾನೆ ಒಂದಿಷ್ಟು ಸಂಘಟನೆ ನಮ್ಮಲ್ಲಿ ಬರುತ್ತಿದೆ, ವಚನಾಂಕಿತ ಪ್ರಕರಣದಿಂದ ಸಂಘಟನೆ ಒಡೆಯುವುದು ಬೇಡ ಎಂಬ ಕಳಕಳಿಯಿಂದ ಎಲ್ಲರನ್ನು ಬರಮಾಡಿಕೊಂಡು ಗುಲಬರ್ಗಾದಲ್ಲಿ ಸಭೆ ಕರೆದು ಒಂದು ಸಮಿತಿ ಮಾಡಿ ಆ ಸಮಿತಿಯು ನಿಮ್ಮನ್ನು ಸಂಪರ್ಕಿಸಿ (ತಾವು ಜೈಪುರದಲ್ಲಿದ್ದಾಗ) ಚರ್ಚೆ ಮಾಡಿ ನಿರ್ಣಯಕ್ಕೆ ಬರಲು ತಿಳಿಸಲಾಯಿತು. ಅದುವರೆಗೂ ಯಾರೂ ಪತ್ರಿಕೆ ಹೇಳಿಕೆ, ಪ್ರತಿಭಟನೆ ಇತ್ಯಾದಿ ಯಾವುದೆ ಚಟುವಟಿಕೆಗಳನ್ನು ಮಾಡಬಾರದೆಂದು ನಿರ್ಣಯಿಸಲಾಗಿತ್ತು. ಆದರೆ ಕೆಲವರು (ಸಮಾಜ ಒಡೆಯುವ ಕೆಲಸ ಮಾಡುವವರು) ವಚನಾಂಕಿತ ಬದಲಾವಣೆ ನಿಮಿತ್ಯ ಮಾಡಿಕೊಂಡು ತಮ್ಮ ವೈಯಕ್ತಿಕ ದ್ವೇಷದಿಂದ ಸೇಡು ಇತರರ ಸಹಕಾರದಿಂದ (ಮುಂದೆ ಮಾಡಿ) ತೀರಿಸಿಕೊಳ್ಳಲು ಇದೊಂದು ವೇದಿಕೆ ಮಾಡಿಕೊಂಡರು. ನಾನು ನಿಮ್ಮ ವಿರೋಧಿ ಗುಂಪಿನಲ್ಲಿದ್ದರೂ ಅವರು ಮಾಡುವ ಕೀಳು ಮಟ್ಟದ ಚಟುವಟಿಕೆ ನನಗೆ ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಆಗ ನನ್ನ ಪರಿಸ್ಥಿತಿ ನೀವು ಜೂನ್ ತಿಂಗಳ ಕಲ್ಯಾಣ ಕಿರಣದಲ್ಲಿ ಬರೆದಂತೆ "ಸತ್ಯವನ್ನರಿತರೂ ಬಹಿರಂಗವಾಗಿ ಆಡದಷ್ಟು ಕೆಲವರು ನಿಸ್ಸಹಾಯಕರಾಗಿರುತ್ತಾರೆ." ಎಂಬುದು ನನ್ನ ಸ್ಥಿತಿಯಾಗಿತ್ತು. ಮುಂದಿನ ಬೆಳವಣಿಗೆ ಎಲ್ಲರಿಗೂ ಗೊತ್ತು.

ಕಷ್ಟ ಪಟ್ಟು ಕಟ್ಟಿದ ಸಂಘಟನೆ ಒಡೆದು ಹೋಗಬಾರದೆಂಬ ಏಕೈಕ ಉದ್ದೇಶದಿಂದ ಬಸವ ಕೇಂದ್ರ, ರಚಿಸಲು ಸಹಕಾರ ಕೊಡಲಾಯಿತು. ಬಸವ ಕೇಂದ್ರವು ಸಾಮೂಹಿಕ ಪ್ರಾರ್ಥನೆ, ಪ್ರವಚನದಂತಹ ವಿಧಾಯಕ ಕಾರ್ಯಕ್ರಮ ಹಮ್ಮಿಕೊಂಡು ಜನರನ್ನು ಸಂಘಟಿಸುವ, ಸಂಸ್ಕರಿಸುವ ಕೆಲಸ ಮಾಡುವ ಧಾರ್ಮಿಕ ಸಂಸ್ಥೆಯಾಗಬೇಕೆಂಬ ಆಸೆ ಇತ್ತು. ಆದರೆ ಆದದ್ದೇ ಬೇರೆ, ಮುಂದೆ ಕೆಲವೇ ದಿವಸಗಳಲ್ಲಿ ರಾಜಕೀಯಕ್ಕೂ ಧುಮುಕಿತು. ಆಗ ತಾನೆ

ವಿಧಾನ ಸಭೆ ಚುನಾವಣೆ ಘೋಷಣೆಯಾಗಿತ್ತು. ಗುಲಬರ್ಗಾದಲ್ಲಿ ಸ್ಪರ್ಧೆಯಲ್ಲಿದ್ದ ಅಭ್ಯರ್ಥಿಯೊಬ್ಬರನ್ನು ಬೆಂಬಲಿಸಲು ಬಹಿರಂಗವಾಗಿ ಅದೇ ಆಗ ಕಣ್ಣು ತೆರೆಯುತ್ತಿರುವ ಬಸವ ಕೇಂದ್ರ ಪತ್ರಿಕೆಯಲ್ಲಿ ಜಾಹಿರಾತು ಪ್ರಕಟಿಸಿತು. ಆ ವಿಷಯದ ಬಗ್ಗೆ ಚರ್ಚೆ ಮಾಡಿ ನಿರ್ಣಯಕ್ಕೆ ಬರದೆ ಚಿತ್ರದುರ್ಗದ ಶ್ರೀಗಳ ಗಮನಕ್ಕೂ ತರದೆ ಈ ಕಾರ್ಯ ಸ್ವಾರ್ಥಿಗಳು ಮಾಡಿದರು. ನಾನು ಯಾವ ಪಕ್ಷಕ್ಕೂ ಸೇರಿದವನಲ್ಲ. ಜಾಹಿರಾತು ಕೊಟ್ಟವರು ತಮ್ಮ ಹೆಸರು ಹಾಕದೆ ನನ್ನ ಹೆಸರು ಹಾಕಿದರು (ಪ್ರತಿ ಲಗತ್ತಿಸಲಾಗಿದೆ). ಇದರಿಂದ ನಾನು ನೊಂದುಕೊಂಡು ಬಸವ ಕೇಂದ್ರಕ್ಕೆ ರಾಜಿನಾಮೆ (4-9-1999) ಕೊಟ್ಟೆ.

ಬಸವ ಕೇಂದ್ರದಲ್ಲಿರುವ ಮುಖಂಡರ ಘನಕಾರ್ಯಗಳ ! ಬಗ್ಗೆ ನೂರಾರು ಘಟನೆಗಳು ಬರೆಯುವಷ್ಟು ವಿಷಯವಿದೆ. ಸಂದರ್ಭ ಬಂದಾಗ ಬರೆಯೋಣ. ಅಷ್ಟು ಹಗರಣಗಳು ಇವೆ. ಯೋಚನೆ, ಯೋಜನೆ ಇಲ್ಲದಿದ್ದರೆ ಏನಾಗುತ್ತದೆ ಎನ್ನುವದಕ್ಕೆ ಇದೊಂದು ನಿದರ್ಶನ. ಒಂದು ಸಣ್ಣ ಉದಾಹರಣೆ, ಬಸವ ಕಲ್ಯಾಣದ ಅನುಭವ ಮಂಟಪದ ಪ್ರಕರಣದಿಂದ ಗದಗ ಮತ್ತು ಭಾಲ್ಕಿ ಶ್ರೀಗಳು ಹಾಗೂ ಅಪಾರ ಅಭಿಮಾನಿಗಳು ಬಸವ ಕೇಂದ್ರದಿಂದ ದೂರಸರಿದರು. ಯಾವುದೇ ಸಮಸ್ಯೆ ಇದ್ದರೆ ಒಂದು ಕಡೆ ಕುಳಿತು ಚರ್ಚಿಸಿ ಪರಿಹಾರ ಕಂಡು ಹಿಡಿಯಬೇಕು. ಅದು ಬಿಟ್ಟು ಎಲ್ಲದಕ್ಕೂ ತೋಳು ಏರಿಸಿ ಜಗಳ ಕಾಯುವದೇ ಇವರ ಕೆಲಸವಾಗಿದೆ. ಆ ಸಂದರ್ಭದಲ್ಲಿ ಭಾಲ್ಕಿ ಶ್ರೀಗಳ ಸಮಯೋಚಿತ ನಿಲುವಿನಿಂದ ಬಸವ ಕಲ್ಯಾಣ ರಣರಂಗವಾಗುವುದು ನಿಂತಿತು. ಪೀಠಿಕೆ ಸಾಕೆನಿಸುತ್ತದೆ.

ಈ ಪತ್ರ ಬರೆಯಲು ಮುಖ್ಯ ಕಾರಣವೆಂದರೆ ತಾವು ಬಸವ ಕಲ್ಯಾಣ ಮರೆಯಬೇಡಿ. ತಮ್ಮ ಪ್ರಯತ್ನದಿಂದ ಇಂದು ಕೂಡಲ ಸಂಗಮ ಅಭಿವೃದ್ಧಿಗೊಂಡು ರಾಷ್ಟ್ರಮಟ್ಟದ ಪ್ರಚಾರ ಸಿಗುತ್ತಿದೆ. ಬಸವಾದಿ ಶರಣರು ಕ್ರಾಂತಿಮಾಡಿದ ಧರ್ಮಕೇಂದ್ರ, ಬಸವ ಕಲ್ಯಾಣ ಮೆರೆಯಬೇಕು. ಅದು ಬೇರೆಯವರಿಂದ ಸಾಧ್ಯವೇ ಇಲ್ಲ. ನಿಮ್ಮಿಂದ ಮಾತ್ರ, ಸಾಧ್ಯ. ಬಸವ ತತ್ತ್ವ ಪ್ರಚಾರ, ಪ್ರಸಾರ ನಿಮ್ಮ ಹಾಗೆ ಯೋಚನೆಮಾಡಿ, ಯೋಜನೆ ಹಾಕಿ ಕಾರ್ಯಗತ ಮಾಡುವ ವಿಷಯದಲ್ಲಿ ಹೇಳಬೇಕಾದರೆ, "ತಕ್ಕಡಿಯ ಒಂದು ಪರಡಿಯಲ್ಲಿ ನಿಮ್ಮನ್ನು ಕೂಡಿಸಿ ಇನ್ನೊಂದು ಪರಡಿಯಲ್ಲಿ ಉಳಿದ ಎಲ್ಲಾ ಮಠಾಧೀಶರನ್ನು ಕೂಡಿಸಿದರೆ ನೀವು ಕುಳಿತ ಪರಡಿಯ ಭಾರವೇ ಹೆಚ್ಚಾಗಿರುತ್ತದೆ." ಈ ಮಾತು ಪ್ರಾಮಾಣಿಕವಾಗಿ ಎಲ್ಲರೂ ಒಪ್ಪಲೇಬೇಕು. ಆದ್ದರಿಂದ ಬಸವ ಕಲ್ಯಾಣ ಬೆಳಕಿಗೆ, ಪ್ರಚಾರಕ್ಕೆ ಬರಬೇಕಾದರೆ ನಿಮ್ಮಿಂದ ಮಾತ್ರ ಸಾಧ್ಯ. ದಯವಿಟ್ಟು ಇತ್ತ ಗಮನ ಹರಿಸಿರಿ.

ರಾಷ್ಟ್ರಮಟ್ಟದ ಸಂಘಟನೆಯಾಗಿ "ಅಖಿಲ ಭಾರತ ಲಿಂಗಾಯತ ಮಹಾಸಭಾ" ಗಟ್ಟಿಯಾಗಿ ನಿಲ್ಲಬೇಕು. ವೀರಶೈವ ಮಹಾಸಭಾಕ್ಕೆ ನೂರು ವರ್ಷ ತುಂಬುತ್ತಲಿದೆ. ಆದರೆ ಸಾಧನೆ ಏನು ಎನ್ನುವುದು ಎಲ್ಲರಿಗೂ ತಿಳಿದ ವಿಷಯವೆ. ಆದರಿಂದ ಉಪಯೋಗಕ್ಕಿಂತ ಹಾನಿಯೇ ಬಹಳ. ವೀರಶೈವ ಮಹಾಸಭೆ ಇನ್ನು ಸಾವಿರ ವರ್ಷವಾದರೂ ಗುರು ಬಸವಣ್ಣನವರನ್ನು ಧರ್ಮ ಗುರು ಎಂದು ಒಪ್ಪಿಕೊಳ್ಳುವುದಿಲ್ಲ, ವೀರಶೈವಕ್ಕೂ ಮತ್ತು

ಲಿಂಗಾಯತಕ್ಕೂ ಸಂಬಂಧವೇ ಇಲ್ಲ. ಬಸವ ತತ್ತ್ವ ನಿಷ್ಠರು ಯಾರೂ ವೀರಶೈವ ಪದಕ್ಕೆ ಅಂಟಿಕೊಳ್ಳುವುದಿಲ್ಲ. ಮುಂದೆ ವೀರಶೈವರೂ ಸಹ ಲಿಂಗಾಯತರಾಗಿ ಗುರುಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಆ ಕಾಲ ಬಂದೇ ಬರುತ್ತದೆ. ಅದಕ್ಕಾಗಿ ಲಿಂಗಾಯತ ಮಹಾಸಭಾ ಶಾಖೆಗಳು ಪಟ್ಟಣಗಳಿಂದ ಹಳ್ಳಿಯವರೆಗೆ ರಚನೆಯಾಗುವಂತೆ ಯೋಜನೆ ಹಾಕಬೇಕು. ಜನರ ಸಂಖ್ಯೆಗಿಂತ ಸಂಘಟನೆಗೆ ಮಹತ್ವ ಕೊಡಬೇಕು. ಇದು ನನ್ನ ಕಳಕಳಿಯ ಮನವಿ.

ಇತರರು ಸಹ ಬೇರೆಯವರನ್ನು ದೂಷಿಸುವದು, ಪ್ರತಿಭಟಿಸುವದು, ಕಾರ್ಯಕ್ರಮ ಕೆಡಿಸುವುದು, ಬೇರೆಯವರ ಸ್ಥಾನ, ಸ್ಥಳ ಆಕ್ರಮಿಸುವದು ಬಿಟ್ಟು ಎಲ್ಲರೂ ಆತ್ಮಾವಲೋಕನ ಮಾಡಿಕೊಂಡು, ವಚನ ಹೇಳುವದಕ್ಕಿಂತ ಹೇಳಿದ ವಚನ ಪಚನ ಮಾಡಿಕೊಳ್ಳುವ ಕೆಲಸ ಗುರು ಬಸವಣ್ಣನವರ ಹೆಸರು ಹೇಳಿಕೊಳ್ಳುವ ಎಲ್ಲರೂ ಮಾಡಲಿ ಎಂದು ನಮ್ರವಾಗಿ ವಿನಂತಿಸುವೆ.

ಈ ಪತ್ರ ನಾನು ಆವೇಶದಿಂದಾಗಲಿ, ಬೇರೆಯವರಿಗೆ ನೋವಾಗಲಿ ಎಂದಾಗಲಿ ಅಥವಾ ಸಂತೋಷವಾಗಲಿ ಎಂದಾಗಲಿ ಬರೆದದ್ದು ಅಲ್ಲ. ಕಳೆದ ಆರು ತಿಂಗಳಿಂದ ನಾನು ಆತ್ಮಾವಲೋಕನ ಮಾಡಿಕೊಂಡು ಇಪ್ಪತ್ತೈದು ವರ್ಷಗಳಿಂದ ನಾನು ಸಮಾಜ ಸೇವೆಯ ಕ್ಷೇತ್ರದಲ್ಲಿ ಕಂಡ ಅನುಭವದಿಂದ, ಈಗ ಅನಿವಾರ್ಯವಾಗಿ ದೂರಾಲೋಚನೆಯಿಂದ ಚಿಂತಿಸಿ ಕೆಲವು ಮಹತ್ವದ ಕೆಲಸಗಳು ಮಾಡಲೇಬೇಕಾಗಿದೆ. ಅದರಲ್ಲಿ ಪ್ರಮುಖವಾಗಿ ಬಸವ ಕಲ್ಯಾಣದ ಅಭಿವೃದ್ಧಿ ಹಾಗು ರಾಷ್ಟ್ರಮಟ್ಟದಲ್ಲಿ ಲಿಂಗಾಯತರ ಬೃಹತ್ ಸಂಘಟನೆ. ಈ ಕೆಲಸ ನಿಮ್ಮಿಂದ ಮಾತ್ರ ಸಾಧ್ಯ. ಈ ಕೆಲಸ ತಾವು ಕೈಗೆ ತೆಗೆದುಕೊಂಡರೆ ನನ್ನಂತಹ ಸಾವಿರಾರು ಜನ ಕೈ ಕೂಡಿಸುತ್ತಾರೆ.

ಈಗಾಗಲೆ ನಮ್ಮ ಜನ ನೊಂದುಕೊಂಡು ಬೇರೆ ಸಂಸ್ಕೃತಿಗೆ, ಸಂಘಟನೆಗೆ ಆಕರ್ಷಿತರಾಗಿ ಹೋಗುತ್ತಿದ್ದಾರೆ. ಮಹಾತ್ಮ ಗಾಂಧೀಜಿಯವರು ಬೆಳಗಾಂವದಲ್ಲಿ ಹೇಳಿದ "ಬಸವೇಶ್ವರರ ತತ್ತ್ವಗಳನ್ನು ಅವರ ಅನುಯಾಯಿಗಳಾದ ನೀವು ಆಚರಣೆಯಲ್ಲಿ ತಂದರೆ ಭಾರತ ದೇಶವನ್ನಷ್ಟೇ ಏಕೆ ವಿಶ್ವವನ್ನೇ ಉದ್ಧರಿಸಬಲ್ಲಿರಿ" ಎಂಬ ಮಾತು ಮಹತ್ತರವಾದ ಜಾಗತಿಕ ಸಂದೇಶ ಎಂದು ನಾವೆಲ್ಲರೂ ತಿಳಿಯಬೇಕು. ಶರಣುಗಳೊಂದಿಗೆ,

ದಿನಾಂಕ : 14-11-2001

ಶಾಮಲಿಂಗ ಜವಳಗಿ, ಕಾಯಕ ಕಂಪ್ಯೂಟರ್ ಗ್ರಾಫಿಕ್ಸ್
ಸೂಪರ್ ಮಾರ್ಕೆಟ್, ಗುಲಬರ್ಗಾ

ಶರಣ ಮೇಳಕ್ಕೆ ಕೆ.ಎಸ್.ಆರ್.ಟಿ.ಸಿ. ಬಸ್ ಸೌಲಭ್ಯ

ಶರಣ ಮೇಳದಲ್ಲಿ ಭಾಗಿಗಳಾಗುವವರಿಗೆ ಕೆ.ಎಸ್.ಆರ್.ಟಿ.ಸಿ ಯು ಬೇಡಿಕೆಯ ಮೇರೆಗೆ ಹೆಚ್ಚುವರಿ ಬಸ್ಸುಗಳನ್ನು ಎಲ್ಲಾ ಡಿಪೋಗಳಿಂದ ಒದಗಿಸಲು ಸಿದ್ಧವಿದೆ. ಆದ್ದರಿಂದ ಪ್ರವಾಸವನ್ನು ಏರ್ಪಡಿಸುವ ಸಂಘಟಕರು ವಿವರಗಳಿಗಾಗಿ ಸ್ಥಳೀಯ ಡಿಪೋ ಅಧಿಕಾರಿಗಳನ್ನು ಸಂಪರ್ಕಿಸಬೇಕು ಎಂದು ಹಾರೈಸುತ್ತೇವೆ.

ಮಠಗಳು ಹೊಂಚು ಹಾಕುತ್ತಿವೆ. ಅಂತಹ ಮಠಗಳಲ್ಲಿ ನಡೆಯುವ ಕುತಂತ್ರವನ್ನು ಗಮನಿಸಿದ ಭಕ್ತರು ಮೇಲುನೋಟಕ್ಕೆ ಆ ಮಠದ ಭಕ್ತರಂತೆ ವರ್ತಿಸಿದರೂ ಕೂಡ. ಒಳಗಿಂದೊಳಗೇ ಮಠದ ಬಗ್ಗೆ, ಆ ಮಠಾಧೀಶರ ಬಗ್ಗೆ ತಿರಸ್ಕೃತ ಮನೋಭಾವ ತಳೆಯುತ್ತಿದ್ದಾರೆ.

ಮಠಗಳ ಶಕ್ತಿ ಪ್ರದರ್ಶನ :

ಇಂದು ಮಠಾಧಿಪತಿಗಳು ಧಾರ್ಮಿಕ ವಕ್ತಾರರಲ್ಲ. ಒಂದು ಪರಂಪರೆಯನ್ನು ಪ್ರತಿನಿಧಿಸುವ ಸಂಸ್ಥೆಯ ನಿರ್ವಹಣಾಧಿಕಾರಿಗಳು ಅಷ್ಟೆ. ಈಗಿನ ಮಠಗಳು ಕೇವಲ ಕಾರ್ಪೋರೇಟ್ ಆಫೀಸ್‌ಗಳಾಗುತ್ತಿವೆ. ಮಠಾಧಿಪತಿಗಳು ಅವುಗಳ ಛೇರ್‌ಮನ್-ಗಳಾಗುತ್ತಿದ್ದಾರೆ. ನಮ್ಮ ದೇಶದಲ್ಲಿಯೂ ಮಠಗಳು, ಚರ್ಚಗಳು ಮತ್ತು ಮಸೀದಿಗಳೂ ಸೇರಿದಂತೆ, ಜನಜೀವನದ ಮೇಲೆ ಬೀರಿರುವ ಪ್ರಭಾವ ಅಪಾರ. ಮಠಗಳ ದೃಷ್ಟಿಯಲ್ಲಿ ಭಕ್ತರು ಅದರ ಮೆಂಬರ್ ಅಷ್ಟೆ. ಮೆಂಬರ್‌ಗಳು ಮಠಗಳೊಡನೆ ತಮ್ಮನ್ನು ತಾವು ಗುರುತಿಸಿಕೊಳ್ಳದಿದ್ದರೂ ಆಯಾ ಜಾತಿಗೆ ಸೇರಿದ ಮಠಗಳು ಆ ಭಕ್ತರನ್ನು ಒಳಗೊಂಡಂತೆ ತನ್ನ ಶಕ್ತಿಯನ್ನು ಪ್ರದರ್ಶಿಸುತ್ತವೆ.

ಪ್ರತಿಯೊಂದು ಜಾತಿ ಮತ್ತು ಧರ್ಮವೂ ತನ್ನ ಅಸ್ತಿತ್ವವನ್ನು ಬಲಗೊಳಿಸಲಿಕ್ಕಾಗಿ ಮಠಗಳನ್ನು ಕಟ್ಟಬೇಕಾಯಿತು. ಮಠಗಳು ತಮ್ಮ ಕೋಮಿನ ಶ್ರೀಮಂತ ಮತ್ತು ಬಡವರ ನಡುವಿನ ಸೇತುವೆಯಾಗುವ ಉದ್ದೇಶವನ್ನು ಇಟ್ಟುಕೊಂಡಿರುವುದಾಗಿ ಹೇಳಿಕೊಳ್ಳುತ್ತಿದ್ದರೂ ವಸ್ತುಸ್ಥಿತಿ ಬೇರೆಯಾಗಿದೆ. ಉಚಿತ ಪ್ರಸಾದ ನಿಲಯದ ವ್ಯವಸ್ಥೆಯನ್ನೇ ತಮ್ಮ ಕೋಮಿಗೆ ಮಾಡುತ್ತಿರುವ ಸೇವೆಯೆನ್ನುವಂತೆ ಮಠಾಧೀಶರು ಬಿಂಬಿಸುತ್ತಿದ್ದಾರೆ. ಮಠಗಳ ಆದಾಯಕ್ಕೂ ಅವುಗಳು ಅದನ್ನು ಅಶಕ್ತರಿಗಾಗಿ ಬಳಸುತ್ತಿರುವುದಕ್ಕೂ ಯಾವುದೇ ಸಂಬಂಧವಿಲ್ಲ.

ಕೈ ಬೆರಳೆಣಿಕೆಯಷ್ಟು ಮಠಾಧಿಪತಿಗಳು ಮಾತ್ರ ಸರಳ ಜೀವನ ಸಾಗಿಸುತ್ತಿದ್ದಾರೆ. ಬಹಳಷ್ಟು ಮಂದಿ ರಜನೀಶ್‌ರನ್ನು ಮೀರಿಸುವ ವೈಭೋಗಗಳಲ್ಲಿ ಮುಳುಗಿದ್ದಾರೆ. ಅವರಿಗೆ ಆಧ್ಯಾತ್ಮಿಕತೆಗಿಂತಲೂ ತಮ್ಮ ಶ್ರೀಮಂತಿಕೆಯನ್ನು ಕೊಬ್ಬಿಸುವುದರಲ್ಲಿ ನಿರತರಾಗಿದ್ದಾರೆ. ಮುಖ್ಯವಾಗಿ ಎಲ್ಲಕ್ಕಿಂತಲೂ ಜಿಗುಪ್ಸೆ ಉಂಟು ಮಾಡುವ ಸಂಗತಿಯೆಂದರೆ, ರಾಜಕೀಯ ರಂಗದ ಮೇಲೆ ಅವರಿಗಿರುವ ಹಿಡಿತ. ಯಾವುದೇ ಲಿಂಗಾಯತ ಮುಖ್ಯಮಂತ್ರಿಯಾದಾಗಲೂ ಅವರ ಹಿಂದೆ ಶರಣರ ಮಠಗಳು ಕೂಡ ತಟ್ಟುತ್ತಿರುತ್ತವೆ.

ರಾಜ್ಯದಲ್ಲಿ ನೂರಾರು ಶಾಖಾಮಠಗಳನ್ನು ಹೊಂದಿ ಲಕ್ಷಾಂತರ ಭಕ್ತರನ್ನು ಕಟ್ಟಿಕೊಂಡ, ಚಿತ್ರದುರ್ಗ ಜಿಲ್ಲೆಯಲ್ಲಿರುವ ಮುರುಘಾಮಠ ಮತ್ತು ಸಿರಿಗೆರೆ ಮಠಗಳೆರಡೂ ಅತ್ಯಂತ ಪ್ರಭಾವಿ ಮಠಗಳೆಂದು ಹೇಳಲಾಗಿದೆ. ಆದರೆ ಈ ಎರಡೂ ಮಠಗಳಲ್ಲಿನ ವೈಮನಸ್ಸು ಮಾತ್ರ ಬೂದಿ ಮುಚ್ಚಿದ ಕೆಂಡದಂತಿದೆ.

ವಿವಾದ ಹುಟ್ಟು ಹಾಕುತ್ತಿದ್ದಾರೆ :

ಚಿತ್ರದುರ್ಗದ ಮುರುಘಾಮಠದ ಸ್ವಾಮಿಗಳು ಮಾತ್ರ ಹಲವು ವಿವಾದಗಳನ್ನು ಹುಟ್ಟು ಹಾಕುತ್ತಿದ್ದಾರೆ. ಮಠಕ್ಕೆ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಯಾವತ್ತು ಬಂದು

ವಕ್ಕರಿಸಿದನೋ, ಅಂದಿನಿಂದಲೇ ಈ ಮಠವು ಹಲವು ಹತ್ತು ಹಗರಣಗಳ ಕೇಂದ್ರವಾಗುತ್ತ ಸಾಗಿತ್ತು. ಚಿತ್ರದುರ್ಗ ಬೃಹನ್ಮಠದ ಶಿವಮೂರ್ತಿ ಮುರುಘರಾಜೇಂದ್ರ, ಶರಣರು ಮತ್ತು ಆಡಳಿತಾಧಿಕಾರಿ ಬಸವರಾಜನ್ ಒಬ್ಬರಿಗೊಬ್ಬರು ಒಳಹೊರಗನ್ನು ಬಲ್ಲವರು. ಶಿವಮೂರ್ತಿ ಮುರುಘರಾಜೇಂದ್ರ, ಮಹಾಸ್ವಾಮಿಗಳಾಗುವುದಕ್ಕಿಂತ ಮೊದಲು ಬಸವರಾಜನ್ ಮಠಾಧಿಪತಿ ಆಗಬೇಕಿತ್ತು. ಆದರೆ ಆಗಿನ ಜಗದ್ಗುರು ಇವನ ನಡತೆ ಕಂಡು 'ಹಾಳಾದವನು ಬದುಕಲಿ' ಎಂದು ಆಡಳಿತಾಧಿಕಾರಿಯಾಗಿ ನೇಮಿಸಿದರು. ಶಿವಮೂರ್ತಿ ಮುರುಘರಾಜೇಂದ್ರ, ಸ್ವಾಮಿ ಬಸವರಾಜನ ತಾಳಕ್ಕೆ ತಕ್ಕಂತೆ ಕುಣಿಯುವ ಸೂತ್ರದ ಗೊಂಬೆಯಾಗಿ ಪರಿವರ್ತಿತರಾದರು, ಅಸ್ತಿತ್ವವನ್ನೇ ಕಳೆದುಕೊಂಡರು.

ಕರ್ನಾಟಕದ ಯಾವುದೋ ಮೂಲೆಯಲ್ಲಿರುವ ಸಣ್ಣಪುಟ್ಟ ಮಠಕ್ಕೆ ಏನಾದರೂ ಆಸ್ತಿ ಇದ್ದರೆ ಆ ಮಠ ಮುರುಘಾಮಠಕ್ಕೆ ಸೇರಿದ್ದು ಎಂದು ಸುಳ್ಳು ದಾಖಲೆ ಪತ್ರವನ್ನು ಸೃಷ್ಟಿಸಿ ಆ ಮಠವನ್ನು ಮತ್ತದರ ಆಸ್ತಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದು ಮುರುಘರಾಜೇಂದ್ರ ಶರಣರ ಹಾಗೂ ಬಸವರಾಜನ್‌ರ ಖಯಾಲಿಯಾಗಿಬಿಟ್ಟಿದೆ.

ಹುಬ್ಬಳಿಯ ಮೂರುಸಾವಿರ ಮಠದ ಪಟ್ಟಾಧಿಕಾರಕ್ಕೆ ರುದ್ರಮುನಿಸ್ವಾಮಿಯನ್ನು ತಂದುಕೊಳ್ಳಲು ಬಸವರಾಜನ್ ಮತ್ತು ಸ್ವಾಮಿಗಳು ಚಿತ್ರದುರ್ಗದಿಂದ ದಂಡು ದಳವಾಯಿಗಳನ್ನು ಬಸ್ಸಿನಲ್ಲಿ ತುಂಬಿಕೊಂಡು ಹೋಗಿ ಮುಖಕ್ಕೆ ಮಂಗಳಾರತಿ ಮಾಡಿಸಿಕೊಂಡು ಬಂದಿದ್ದು ಹಳೆಯ ಕಥೆ. ಕೋಟ್ಯಾಂತರ ರೂಪಾಯಿ ಗಿಟ್ಟಿಸಿಕೊಳ್ಳಲು ಹಿರಿಯ ಕಿರಿಯ ಸ್ವಾಮಿಗಳಲ್ಲಿಯೇ ಜಗಳ ಹಚ್ಚಿ ಮೂರು ಸಾವಿರ ಮಠದ ಆಸ್ತಿಯನ್ನೆಲ್ಲ ನುಂಗುವ ಹುನ್ನಾರ ಹೂಡಿದ್ದು ಎಲ್ಲರಿಗೂ ಗೊತ್ತು ! ಇಷ್ಟೆಲ್ಲಾ ಆದರೂ ಈಗ ಮತ್ತೊಂದು ಮಠವನ್ನು ಆಕ್ರಮಿಸಲು ಹೋಗಿ ಕೇಸು ಜಡಿಸಿಕೊಂಡಿರುವುದು ಹೊಸ ವಿಚಾರ. ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಚಿಕ್ಕುಲಿ ಕೆರೆಯ ಸಂಸಾರಿ ಮಠಕ್ಕೆ ಸ್ವಾಮಿಗಳ ವಕ್ರ ದೃಷ್ಟಿ ಬಿತ್ತು. ಬಸವರಾಜನ್ ಎಂದಿನಂತೆ ಗೂಂಡಾಗಿರಿ ಮೆರೆದ. ಆದರೆ ಸಿರಿಗೆರೆ ಮಠದ ಬೆಂಬಲದಿಂದಾಗಿ ಇಂದಿಗೂ ಇವರ ಕನಸು ನನಸಾಗಿಲ್ಲ. ಆದರೆ ಮುರುಘಾ ಮಠದ ಗೂಂಡಾಗಳು ಈ ಮಠವನ್ನು ವಶಪಡಿಸಿಕೊಳ್ಳಲು ಮುಂದಾದ ಬಗ್ಗೆ ಮುರುಘಾಮಠದ ನಿಷ್ಠಾವಂತ ಭಕ್ತರೇ ಅಸಹ್ಯ ಪಟ್ಟುಕೊಳ್ಳುತ್ತಿದ್ದಾರೆ.

ಖರೀದಿ ಗೈರತ್ತು :

ಚಿತ್ರದುರ್ಗದ ಬೃಹನ್ಮಠದ ಜಗದ್ಗುರು ಶಿವಮೂರ್ತಿ ಮುರುಘರಾಜೇಂದ್ರ, ಶರಣರು ಎಂದು ಬೀದರ ಜಿಲ್ಲೆಗೆ ವಕ್ಕರಿಸಿದರೋ ಅಂದಿನಿಂದ ಬೀದರ ಜಿಲ್ಲೆಯ ಧಾರ್ಮಿಕ ಕ್ಷೇತ್ರದಲ್ಲಿ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಬಿರುಗಾಳಿ ಎದ್ದಿದೆ. ಈ ಪುಣ್ಯಾತ್ಮ ಉಗುರು ಕಂಡರೆ ಇಡೀ ಬೆರಳನ್ನೇ ನುಂಗುವ ಪರಿಪಾಠ ಹಾಕಿಕೊಂಡಿದ್ದಾರೆ. ಶ್ರೀಮಂತಿಕೆಯ ಸೋಗಿನಲ್ಲಿ ಅಧಿಕಾರದ ದರ್ಪದಲ್ಲಿ ಏನೆಲ್ಲವನ್ನೂ ಖರೀದಿಸುವ ಗೈರತ್ತು ಬೆಳಸಿಕೊಂಡಿದ್ದಾರೆ. ಐದು ವರ್ಷದ ಹಿಂದೆ ಈ ಜಗದ್ಗುರು ಯಾರೆಂಬುದೇ ಬೀದರ ಜನತೆಗೆ ಗೊತ್ತಿರಲಿಲ್ಲ. ಆದರೆ ಇಂದು ಬೀದರ ಜಿಲ್ಲಾದ್ಯಂತ ಮುರುಘರಾಜೇಂದ್ರ, ಸ್ವಾಮಿ ಪಸರಿಸಿದ್ದಾರೆ. ರಾಜಕೀಯ ರಂಗದಲ್ಲೂ ತಮ್ಮ ಛಾಪನ್ನು ಒತ್ತಿದ್ದಾರೆ.

ಬೀದರ ಜಿಲ್ಲೆಯ ನಡೆದಾಡುವ ದೇವರೆಂದೇ ಪ್ರಖ್ಯಾತಿ ಪಡೆದಿರುವ ಲಿಂಗೈಕ್ಯ ಡಾ. ಚನ್ನಬಸವ ಪಟ್ಟದ್ದೇವರು ನೂತನ ಅನುಭವ ಮಂಟಪದ ಶಿಲ್ಪಿಗಳೆಂದೇ ಖ್ಯಾತರಾಗಿದ್ದಾರೆ. ಬೀದರ ಜಿಲ್ಲೆಯ ಕನ್ನಡಕ್ಷರದ ಪಿತಾಮಹರು. ಬಡ ವಿದ್ಯಾರ್ಥಿಗಳ ಪಾಲಿನ ದೇವರು. ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಕ್ರಾಂತಿ ಉಸಿರಾಗಿಸಿಕೊಂಡು ಅನುಭವ ಮಂಟಪ ಮತ್ತು ಶಾಂತಿವರ್ಧಕ ಶಿಕ್ಷಣ ಸಂಸ್ಥೆ ನಿರ್ಮಾಣದಲ್ಲಿ ತಮ್ಮ ಎಲ್ಲ ಬಸವಶಕ್ತಿ ತಪಸ್ಸನ್ನು ನಾಡಿಗಾಗಿ ಧಾರೆಯೆರೆದಿದ್ದಾರೆ. ನೂತನ ಅನುಭವ ಮಂಟಪದ ಮುಖಾಂತರ ವಿಶ್ವಶಾಂತಿಗೆ ನಾಂದಿ ಹಾಡುತ್ತಾರೆ. ಸಕಲ ಜೀವಾತ್ಮರ ಲೇಸನೇ ಬಯಸುವ ಶರಣ ತತ್ತ್ವವನ್ನು ಜನಮನದಲ್ಲಿ ಬಿತ್ತುವ ಪ್ರಯತ್ನ ಮಾಡಿದ ಕ್ರಾಂತಿ ಪುರುಷ, ಶಾಂತಿದೂತ.

ಬೀದರ ಜಿಲ್ಲಾದ್ಯಂತ ಹಿರೇಮಠ ಸಂಸ್ಥಾನಕ್ಕೊಂದು ವಿಶಿಷ್ಟ ಸ್ಥಾನವಿದೆ. ಕಳೆದ 30 ವರ್ಷಗಳಿಂದ ಅನುಭವ ಮಂಟಪದಲ್ಲಿ ನಿತ್ಯ ದಾಸೋಹ, ಶರಣತತ್ತ್ವ ಪ್ರಸಾರ ಕಾರ್ಯ ಗುರುಗಳೊಂದಿಗೆ ಮಾಡುತ್ತ ಬಂದಿರುವ ಪೂಜ್ಯ ಬಸವಲಿಂಗಪಟ್ಟದ್ದೇವರು ಬಸವಕಲ್ಯಾಣದ ಈ ನೂತನ ಅನುಭವ ಮಂಟಪದ ಅಧ್ಯಕ್ಷರಾಗಿ ಮುಂದುವರೆಯಬೇಕೆಂಬುದು ಎಲ್ಲರ ಸದಿಚ್ಛೆಯಾಗಿತ್ತು.

ದೊಡ್ಡಣ್ಣನಾಗುವ ಹೆಬ್ಬಯಕೆ :

ಬಸವಲಿಂಗ ಪಟ್ಟದ್ದೇವರು ಶಿವಮೂರ್ತಿ ಶರಣರನ್ನು ಬೀದರಕ್ಕೆ ಕರೆದುಕೊಂಡು ಬಂದು ಬಸವ ಕೇಂದ್ರ, ಸ್ಥಾಪಿಸಿ ಪಶ್ಚಾತ್ತಾಪ ಪಡುವಂತಾಗಿದೆ. ಬಸವ ಕೇಂದ್ರ, ಸ್ಥಾಪಿಸಲು ನೀರಿನಂತೆ ಹಣ ಖರ್ಚು ಮಾಡುವ ಚಿತ್ರದುರ್ಗದ ಈ ಶರಣರು ಎಲ್ಲವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ದೊಡ್ಡಣ್ಣನಾಗುವ ಹೆಬ್ಬಯಕೆ ಹೊಂದಿದ್ದಾರೆಂದು ಹೇಳಲಾಗುತ್ತಿದೆ. ಅನುಭವ ಮಂಟಪದ ಹುತ್ತಕ್ಕೆ ಹಾವಾಗಿ ಸೇರಿಕೊಂಡ ಶಿವಮೂರ್ತಿ ಶರಣರು ಅಲ್ಲಿಯ ಇರುವೆಗಳನ್ನೆಲ್ಲ ಹೊರಹಾಕಿದ್ದಾರೆಂದು ಜನರಾಡಿಕೊಳ್ಳುತ್ತಿದ್ದಾರೆ. ಬೆನ್ನು ಮೂಳೆ ಇಲ್ಲದ ನರಸತ್ತ ವಿ. ಸಿದ್ಧರಾಮಣ್ಣನೆಂಬ ಶರಣನಿಗೆ ಅಧ್ಯಕ್ಷಪಟ್ಟ ಕಟ್ಟುವ ನಾಟಕವಾಡಿ ಕೊನೆಗೆ ತಾವೇ ಅನುಭವ ಮಂಟಪದ ಅಧ್ಯಕ್ಷರಾಗಿ ನೇಮಕಗೊಂಡಿರುವುದು ಚಿತ್ರದುರ್ಗ ಶಿವಮೂರ್ತಿ ಶರಣರ ಸ್ವಾರ್ಥ ರಾಜಕೀಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. **'ಇರುವೆಗಳು ಹುತ್ತ ಕಟ್ಟುತ್ತವೆ. ಹಾವುಗಳು ಆ ಹುತ್ತದಲ್ಲಿ ವಾಸಿಸುತ್ತವೆ'** ಎಂಬುದಕ್ಕೆ ಚಿತ್ರದುರ್ಗ ಶಿವಮೂರ್ತಿ ಶರಣರೇ ಜೀವಂತ ಉದಾಹರಣೆ ಎನ್ನುವವರಿದ್ದಾರೆ.

ಮಾತೆ ಮಹಾದೇವಿಯವರ ವಿರುದ್ಧ ಯುವಕರನ್ನು ಹುರಿದುಂಬಿಸಿದುದಲ್ಲದೇ, ಕೊಲ್ಲುವ ಸಂಚು ರೂಪಿಸಿದ, ಸಿದ್ಧರಾಮಣ್ಣ ಮತ್ತು ಉಕಂ., ಜೀಪ್ ಅಪಘಾತದಲ್ಲಿ ಮರಣ ಹೊಂದಿದ ಯುವಕರ ಸಾವಿಗೆ ಕಾರಣರಾದವರು. ಇವರಿಗೆ ಶಿಕ್ಷೆಯಿಲ್ಲವೇ ? ಈ ಕೇಸನ್ನು ಸಿಓಡಿಗೆ ಒಪ್ಪಿಸಿ ಸತ್ಯಾಂಶ ಹೊರ ತರಬೇಕಿದೆ. ಜಗದ್ಗುರುಗಳು, ಮಠಾಧೀಶರು ಮಾಡಿದ ಘೋರ ಅಪರಾಧಕ್ಕೆ ತಕ್ಕ ಶಿಕ್ಷೆಯಾದಾಗಲೇ ಸಮಾಜದಲ್ಲಿ ಶಾಂತಿ ನೆಮ್ಮದಿ ನೆಲೆಸಲು ಸಾಧ್ಯವಾದೀತು. ಅಂಗೈಯಲ್ಲಿಯೇ ಅರಮನೆ ಕಟ್ಟಿಸಿಕೊಡುವ ಚಿತ್ರದುರ್ಗ ಶಿವಮೂರ್ತಿ ಶರಣರ ಸುಳ್ಳು ಆಶ್ವಾಸನೆಗಳಿಗೆ ಮೋಸ ಹೋಗಬೇಡಿರೆಂದು ಪತ್ರಿಕೆ ಎಚ್ಚರಿಸುತ್ತದೆ.

ಜಮೂರಾ ಕಲಾತಂಡದ ಅಶೋಕ ಬಾದರದಿನ್ನಿ ರಚನೆಗಳೆಲ್ಲವು ತಾನು ರಚಿಸಿದ್ದಾಗಿ

ಹೇಳಿಕೊಳ್ಳುವ ಚಿತ್ರದುರ್ಗದ ಶಿವಮೂರ್ತಿ ಶರಣರು ಅನುಭವ ಮಂಟಪದ ನೂತನ ಅಧ್ಯಕ್ಷರಾಗಿದ್ದಾರೆಂದೇ ಹೇಳಲಾಗುತ್ತಿದೆಯಾದರೂ ಅಧ್ಯಕ್ಷರಾಗುವ ಅವರ ಸಂಚು, ಸ್ವಾರ್ಥ ರಾಜಕೀಯವನ್ನು ತೀವ್ರ ತರಾಟೆಗೆ ತೆಗೆದುಕೊಳ್ಳುವವರಿದ್ದಾರೆ. ಬಸವ ಕೇಂದ್ರದ ಮುಖಾಂತರ ಗೂಂಡಾಗಿರಿಯನ್ನು ಬೆಳೆಸುತ್ತಿರುವ ಶಿವಮೂರ್ತಿ ಶರಣರು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡಲಿ ಪೆಟ್ಟು ಹಾಕುತ್ತ ಬಂದವರು. ಶ್ರೀಮಂತಿಕೆಯ ಅಟ್ಟಹಾಸದಲ್ಲಿ ಮೆರೆವ ಈ ಸ್ವಾಮಿಗಳು ಬುದ್ಧಿಜೀವಿಗಳ ಬೌದ್ಧಿಕತೆಯನ್ನೇ ಅಡವಿಟ್ಟುಕೊಳ್ಳುವ ಪ್ರವೃತ್ತಿಯುಳ್ಳವರು. ಜಮೂರಾ ಕಲಾತಂಡವನ್ನು ಕಟ್ಟಿಕೊಂಡು ಶರಣ ಸಾಮ್ರಾಜ್ಯ ಸ್ಥಾಪಿಸಲು ಹೊರಟಂತಿದೆ.

ಕುತಂತ್ರದಿಂದ ಕೂಡಿದ ತಂತ್ರ :

ಬಸವ ಕೇಂದ್ರ ಸ್ಥಾಪಿಸಿದಾಗಲೆಲ್ಲ ನೂರಾರು ಶಾಲುಗಳನ್ನು ಅಲ್ಲಿಯ ಸಮಾಜ ಘಾತುಕ ಶಕ್ತಿಗಳಿಗೆ ಹೊದಿಸುವ ಮೂಲಕ ತಮ್ಮ ಶಕ್ತಿ ಹೆಚ್ಚಿಸಿಕೊಳ್ಳುವ ಜಗದ್ಗುರುಗಳು ಶೋಷಕ ವರ್ಗದ ಪ್ರತಿನಿಧಿಯಾಗಿ ಕಾಣಸಿಕೊಳ್ಳುತ್ತಿದ್ದಾರೆ. ಬೀದರ ಜಿಲ್ಲೆಗೆ ಶಾಲು ಹೊದಿಸುವ ಕಾರ್ಯಕ್ರಮ ಅಂಟು ರೋಗವಾಗಿ ಪರಿಣಮಿಸಿದೆ, ಶಾಲು ಹೊದಿಸುವ ಮೂಲಕ ಎಲ್ಲರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವ ಸ್ವಾಮಿಗಳ ತಂತ್ರ ಕುತಂತ್ರದಿಂದ ಕೂಡಿದೆ ಎಂದು ಲೇವಡಿ ಮಾಡುವವರಿದ್ದಾರೆ.

ಬಸವ ಕೇಂದ್ರದಿಂದ ತಮ್ಮ ಹೆಸರಿನಲ್ಲಿ ಪ್ರಶಸ್ತಿ ನೀಡುವ ಶಿವಮೂರ್ತಿ ಶರಣರು, ಸಾಹಿತ್ಯದ ಗಂಧಗಾಳಿ ಗೊತ್ತಿರದವರಿಗೂ ಕನ್ನಡ ಕಾಗುಣಿತ ಬರೆಯಲಿಕ್ಕೂ ಬಾರದವರಿಗೆ ಬಸವ ಶ್ರೀ ಪ್ರಶಸ್ತಿ ನೀಡಿ ಗೌರವಿಸಿದ್ದಾರೆಂದು ಅಣಕವಾಡುವವರಿದ್ದಾರೆ. ವೈದ್ಯರಲ್ಲದವರಿಗೆ ವೈದ್ಯ ಪ್ರಶಸ್ತಿ, ಸಂಪಾದಕ ಶಿರೋಮಣಿ ಪ್ರಶಸ್ತಿ ನೀಡಿದರೂ ಶಿವಶರಣಪ್ಪ ವಾಲಿಯಂಥವರು ಜಗ್ಗದೇ ಸ್ವಾಮಿಯ ಕಾರ್ಯಕ್ಕೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಮುರುಘರಾಜೇಂದ್ರ ಶರಣರ ದಮನಕಕರಟಕರೆಂದೇ ಪ್ರಖ್ಯಾತರಾದ ಭಾತಂಬ್ರಾ ಸ್ವಾಮಿ ಹುಲ್ಸೂರು ಸ್ವಾಮಿಗಳು ಸಾಮಾಜಿಕ ಮನ್ನಣೆ ಪಡೆಯಲು ಹೆಣಗಾಡುತ್ತಿದ್ದಾರೆ. ಮಠದ ಆಸ್ತಿಯಲ್ಲಿ ಮೋಜು ಮಾಡುತ್ತ ಲಲನೆಯರನ್ನು ಹೊತ್ತುಕೊಂಡು ಕಾರಿನಲ್ಲಿ ತಿರುಗಾಡುತ್ತಿದ್ದಾರೆ. ಪೋಲೀಸರಿಂದ ಛೀಮಾರಿ ಹಾಕಿಸಿಕೊಂಡು ದಕ್ಷಿಣೆ ತೆತ್ತು ಕ್ಷಮೆಯಾಚಿಸಿ ಸೋಲಾಪೂರದಿಂದ ಪರಾರಿ ಆಗಿದ್ದಾರೆಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಹೈದ್ರಾಬಾದಿನ ಭಕ್ತರೊಬ್ಬರ ಮನೆಯಲ್ಲಿ ಅವರ ಸೊಸೆಯ ಎದೆಗೆ ಕೈ ಹಾಕಿದ್ದಕ್ಕೆ ಕೆರದಿಂದ ಹೊಡೆಸಿಕೊಂಡಿದ್ದು ನೆನಪಿಸಿಕೊಂಡು ಭಾತಂಬ್ರಾಸ್ವಾಮಿ ಹೌಹಾರಿ ಬೀಳುತ್ತಾರೆಂದು ಅವರ ನಿಕಟವರ್ತಿ ಸ್ವಾಮಿಗಳೇ ಚೇಷ್ಟೆ ಮಾಡಿ ಮಾತಾಡಿಕೊಳ್ಳುತ್ತಾರೆ.

ಅನುಭವ ಮಂಟಪಕ್ಕೆ ಬರುವ ಬಸವ ಭಕ್ತ ಯಾತ್ರಾರ್ಥಿಗಳಿಗೆ 20 ಕೋಣೆಗಳನ್ನು ಕಟ್ಟಿಸುವುದಾಗಿ ಶಿವಮೂರ್ತಿ ಶರಣರು ಹೇಳುತ್ತಲೇ ಇದ್ದಾರೆ. ಕೋಟ್ಯಾಂತರ ರೂ.ಗಳ ಯೋಜನೆಗೆ ಕನ್ನ ಹಾಕದಿರಲೆಂಬುದೇ ಜಾಣಗೆರೆ ಆಶಯವಾಗಿದೆ.

ಖಡ್ಕೆ, ಬೀದರ

ಜಾಣಗೆರೆ ಪತ್ರಿಕೆಯ ಕೃಪೆಯಿಂದ. (ದಿ. 10-10-2001 ಸಂಚಿಕೆ)

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ ಇವು ನನ್ನ ತತ್ತ್ವದ ಮುಖ್ಯಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ- ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ

ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಠ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು ; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟನಿಂದಲೇ ಲಿಂಗವಂತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗವಂತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗವಂತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗವಂತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ: ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ ೭ ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟ ಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿ- ಯಂದು ಬೆಳಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು

ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೪ ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ- ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ -ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ- ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ಸೆಪ್ಟಂಬರ್-ಅಕ್ಟೋಬರ್-ನವೆಂಬರ್ ತಿಂಗಳಲ್ಲಿ

ಧನ ದಾಸೋಹ ಮಾಡಿದ ಶರಣ ಬಂಧುಗಳು

(ಅಕ್ಟೋಬರ್ ತಿಂಗಳಿನ ಕಲ್ಯಾಣ ಕಿರಣದಲ್ಲಿ ಪಟ್ಟಿಯನ್ನು ಪ್ರಕಟಿಸಲಾಗಿತ್ತು ಸ್ಥಳಾಭಾವದಿಂದ ನವೆಂಬರ್ ಸಂಚಿಕೆಯಲ್ಲಿ ಪ್ರಕಟಿಸಲು ಆಗಿರಲಿಲ್ಲ)

ಬಸವ ಧರ್ಮಪೀಠದ ಕಟ್ಟಡ ನಿಧಿಗೆ.

1. ತಿದ್ದುಪಡಿ: ಸಿಂಗಲ್ ಕೋಣೆ ನಿರ್ಮಾಣಕ್ಕೆ, ಶರಣ. ತಿಪ್ಪಣ್ಣ ಬಸವಣ್ಣೆಪ್ಪ ವಾಲಿ, ಬೈಲಹೊಂಗಲ ಮತ್ತು ಅವರ ಸುಪುತ್ರಿ, ಶರಣೆ. ಶಾಂತಮ್ಮ ಸಿಂಗಪ್ಪ ಪಾಶ್ಚಾಪುರ	51000-00
2. ಶರಣ. ಎಂ. ಚಿಕ್ಕಪಿಳ್ಳಪ್ಪನವರ ಹೆಸರಿನಲ್ಲಿ, ಶರಣ. ಎಂ.ಸಿ. ರವಿಕುಮಾರ್. ಬೆಂಗಳೂರು	51000-00
ಶರಣರುಗಳಾದ :	
3. ಕೆ.ಜಿ. ನಿರ್ಮಲಾ, ಕೆ.ಜಿ. ದಯಾನಂದ, ದೊಡ್ಡಬಳ್ಳಾಪುರ	8101-00
4. ಟಿ.ಎಸ್. ಪ್ರಭಾವತಿ, ಟಿ.ಎಸ್. ದಯಾಶಂಕರ್	5000-00
5. ಉಮಾದೇವಿ. ಟಿ.ಎಸ್. ಮಹಾದೇವಯ್ಯ	5000-00
6. ನಾಗರತ್ನಮ್ಮ ಮತ್ತು ಪಿ. ಆರ್. ಸುಬ್ರಹ್ಮಣ್ಯ	5000-00
7. ಡಿ.ಆರ್. ಮಹೇಶ್	5000-00
8. ಹೇಮಂತ್ ಕುಮಾರ್	5000-00
9. ಎಸ್. ಗಾಯತ್ರಿ ಪ್ರಕಾಶ್	4500-00
10. ಸಿ.ಎಂ. ನಾಗರಾಜು	4500-00
11. ಉಷಾ.ಬಿ.ವಿ. ಬಸವರಾಜ	4500-00
12. ಸಿ. ನಾಗರಾಜು.	2222-00
13. ವಿಜಯಲಕ್ಷ್ಮಿ, ಪಿ.ಸಿ. ರಾಜಣ್ಣ	2000-00
14. ಮಹಾದೇವಮ್ಮ ಬಸಪ್ಪ	1501-00
15. ಚಿಕ್ಕರುದ್ರಪ್ಪ. ಲಿಂ॥ ಶಿವನಂಜಪ್ಪ, ದೊಡ್ಡಬಳ್ಳಾಪುರ	1501-00
16. ಎಸ್. ಶಿವಣ್ಣ	1501-00

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ಗೆ.

1. ಶರಣೆ. ಜಯಮ್ಮ ಗುರುಸಿದ್ಧಯ್ಯ, ಯು.ಎಸ್.ಎ. (ವಿದ್ಯಾರ್ಥಿ ನಿಧಿಗೆ)	30000-00
2. ಶರಣ. ಶಿವಾನಂದಪ್ಪ, ದೊಡ್ಡ ಬೆಳಹೊಂಗಲ. (ಕಟ್ಟಡ ನಿಧಿಗೆ)	5000-00
3. ಶರಣ. ಎಸ್. ರಾಜಮಾನೆ, ಬೆಂಗಳೂರು (ಶರಣ ಮೇಳ ನಿರ್ವಹಣೆಗೆ)	5000-00

ಬಸವ ಮಂಟಪ, ವಿಶ್ವಕಲ್ಯಾಣ ಮಿಷನ್ ಕಟ್ಟಡನಿಧಿ

ಶರಣರುಗಳಾದ

1. ಸಿದ್ಧಗಂಗಮ್ಮ ಮತ್ತು ರಾಜಣ್ಣ, ಬೆಟ್ಟಹಲಸೂರು	3000-00
2. ಬಿ.ಎಂ. ಸಂಗಪ್ಪನವರು, ಬೆಟ್ಟ ಹಲಸೂರು	3000-00

ಪುಸ್ತಕ ಮುದ್ರಣಕ್ಕೆ

ಶರಣರುಗಳಾದ:

ಈಶ್ವರ ಗುರುಲಿಂಗ ಸುಣಧಾಳಿ, ಸಂಕೇಶ್ವರ	5001-00
ಮನೋಹರ ಗಣಪತಿ ಕಬ್ಬೂರಿ, ಸಂಕೇಶ್ವರ	5001-00
ಮಹಾದೇವಪ್ಪ ಸಿದ್ಧಪ್ಪ ದುಂಡಗೆ, ಸಂಕೇಶ್ವರ	5001-00
ವಿಶ್ವನಾಥ ಅರ್ಜುನ ಹಳಿಜೋಳೆ, ಸಂಕೇಶ್ವರ	5001-00
ಶಂಕರಗೌಡ ರಾಮಗೌಡ ದೇಸಾಯಿ, ಸಂಕೇಶ್ವರ	5001-00

ಶರಣಮೇಳದ ಪುದುವಟ್ಟಿಗಾಗಿ

ಶರಣರುಗಳಾದ:

1. ನಾಗರತ್ನಮ್ಮ ಪುಟ್ಟಗಂಗಪ್ಪ, ದೊಡ್ಡಬಳ್ಳಾಪುರ	5000-00
2. ಎಸ್.ಮಹಾದೇವಮ್ಮ ಕೆ.ಸಿದ್ಧಗಂಗಪ್ಪ	5000-00
3. ಚೂಡಾಮಣಿ.ಎಸ್.ನಟರಾಜ್	5000-00
4. ಜಯಮ್ಮ ಪಿ.ಸಿ.ಪುಟ್ಟರುದ್ರಪ್ಪ	5000-00
5. ಎಸ್. ಜಿ. ವಿಶ್ವನಾಥ್	5000-00
6. ಎಸ್. ವಿಶ್ವನಾಥ್	5000-00

ಬಸವ ಧರ್ಮಪೀಠದಲ್ಲಿ ನಡೆಯುವ ನಿತ್ಯ ದಾಸೋಹ ನಿಧಿಗೆ 1111 ರೂ.ಗಳನ್ನು ಕೊಟ್ಟ ಧನ ದಾಸೋಹಿಗಳು

ಶರಣರುಗಳಾದ

ಮೀರಜ್, ಮಹಾರಾಷ್ಟ್ರ

1. ಸುನಿಲ್ ಶಿವಪ್ಪ ಅಗಳಗಾವೆ.
2. ಶಿವ ಸಾತೂ ಇಸಾಪುರೆ
3. ಭಾಗೀರಥಿ ಶಂಕರ್ ಮಗದುಮ್
4. ಮಹಾದೇವ ಪ್ರಭು ಕುಡಚಿ
5. ಲಕ್ಷ್ಮಿಬಾಯಿ ದಶರಥ ಕೋರೆ
6. ಪ್ರಭಾಕರ್ ಶಂಕರ್ ಕಾಪ್ಸೆ
7. ಅಣ್ಣಾಸಾಹೇಬ್ ಅಪ್ಪಾಸಾಹೇಬ್ ಇಸಾಪುರೆ
8. ಶ್ರೀ ಬಸವೇಶ್ವರ ಪಥ ಸಂಸ್ಥಾ
9. ಧರೆಪ್ಪ ಬಾಬೂ ಕಂಡೆ
10. ಶಿವಪ್ಪ ಶಂಕರ್ ಇಸಾಪುರೆ
11. ಶಿವಪ್ಪ ಬಸಪ್ಪ ಬಣಗಾರ, ರಾಣೇಬೆನ್ನೂರು
12. ಆರ್.ಸಿ.ನಂಜುಂಡಪ್ಪ, ರಾಜಾನುಕುಂಟೆ
13. ಎನ್.ಎಂ.ಮಲ್ಲಪ್ಪ, ಕೊಡುಗೇಹಳ್ಳಿ
14. ಬಿ.ಸಿ.ಗಂಗಾಧರ, ಬೆಟ್ಟಹಲಸೂರು
15. ಆರ್. ನಂಜುಂಡಪ್ಪ, ಚಿಕ್ಕಜಾಲ
16. ನಾಗಶಯನ, ಚಿಕ್ಕಜಾಲ
17. ಚಿಕ್ಕಕಾವಲಯ್ಯ, ರಾಜಾನುಕುಂಟೆ
18. ಆರ್.ಬಿ.ಜಗದೀಶ, ರಾಜಾನುಕುಂಟೆ
19. ಆರ್.ಸಿ. ಚನ್ನಬಸವ ದೇವರು, ರಾಜಾನುಕುಂಟೆ
20. ಜಲಜಾಕ್ಷಿ ಶಿವಣ್ಣ, ನಾಗಶೆಟ್ಟಿಹಳ್ಳಿ
21. ಅಕ್ಕಮಹಾದೇವಿ ತಿಪ್ಪಣ್ಣ ಕೋರೆ, ತಿಂಡ್ಲು
22. ಕಲ್ಪನಾ ಬಸವರಾಜ್, ಕೊಡುಗೇಹಳ್ಳಿ
23. ಸಾತವೀರ ಮಲ್ಲಪ್ಪ ಮಗದುಮ್, ಸೋಲಾಪುರ
24. ಕಲಗೌಡ ಬಾಬಾಜಿ ಪಾಟೀಲ್, "
25. ಭೀಮಗೌಡ ಸಿದ್ದಗೌಡ ಪಾಟೀಲ್, "
26. ವಿಜಯಕುಮಾರ ಪಾಟೀಲ್, ಬೀದರ್
27. ನಾಗಶೆಟ್ಟೆಪ್ಪ ಸಂಗಪ್ಪ ದಾಡಗೆ. ಬೀದರ್
28. ಶಾಂತಮ್ಮ ಮಾಣಿಕಪ್ಪ ಗ್ಯಾನಪ್ಪನವರು, ಬೀದರ್
29. ಶಿವರಾಜ್ ಪಾಟೀಲ್, ಬೀದರ್
30. ರಾಮ ಗುರುಪಾದ ಮಗದುಮ್, ಮೀರಜ್
31. ಮಲ್ಲಿಕಾರ್ಜುನ ಮಹಾಂತಪ್ಪ ಸಾಯಂಗಾಂವ, ಸಂಖ್, ಮಹಾರಾಷ್ಟ್ರ
32. ಬಸವರಾಜ್.ಎಸ್.ಪಾಟೀಲ್, ಸಂಖ್,
33. ಮಲ್ಲಿಕಾರ್ಜುನ ಸಿದ್ಧಣ್ಣ, ಅವರಾದಿ, ಸಂಖ್
34. ಪರಮೇಶ್ವರ.ಎಸ್. ವಣಮರಾಠೆ, ಸಂಖ್,
35. ಮಲ್ಲಿಕಾರ್ಜುನ ಶಿವಪುತ್ರಪ್ಪ ಹಲಕುಡೆ, ಸಂಖ್
36. ಸುಭಾಷ್ ಪರಪ್ಪ ಸಾಯಂಗಾವ, ಮೀರಜ್.
37. ಭೀಮರಾಯ ಕಲ್ಲಪ್ಪ ಬಿರಾದಾರ. ಸಂಖ್
38. ಕೆ.ಎಸ್.ಮಂಜುನಾಥ್, ಕೊಯಮತ್ತೂರು

ದೊಡ್ಡಬಳ್ಳಾಪುರದ ಶರಣರು

39. ಅನ್ನಪೂರ್ಣಮ್ಮ ಆರ್.ವಿ.ಶಿವಣ್ಣ
40. ಕಮಲಮ್ಮ ರುದ್ರಯ್ಯ ಹಿರೇಮಠ
41. ಆರ್.ನಾಗರಾಜು
42. ಆರ್.ಸುಬ್ರಹ್ಮಣ್ಯಂ
43. ದೇವೀರಮ್ಮ ಎಂ.ರಾಮಯ್ಯ
44. ಸತ್ಯಭಾಮಾದೇವಿ ಕೆ.ಎಲ್.ಮಹಾದೇವಯ್ಯ ದೇವಾಂಗದ
45. ಎ.ಸುಭಾಷ್ ಚಂದ್ರಗೌಡ
46. ಮಹಾದೇವಮ್ಮ ಲಿಂ॥ ಸಿದ್ಧರಾಮಣ್ಣ
47. ಟಿ.ಎಸ್.ದಯಾಶಂಕರ್
48. ಶಿವಶಂಕರಾಚಾರ್
49. ಬಿ.ನಂಜುಂಡಯ್ಯ
50. ಚೂಡಾಮಣಿ. ಎಸ್.ನಟರಾಜ್
51. ಇಂದುಮತಿ.ಎಸ್.ಸಿದ್ಧಣ್ಣ
52. ಚಂದ್ರಕಲಾ ಎಸ್.ವಿ.ಎಸ್.ಶಿವಶಂಕರ್
53. ಕೆ.ಮಲ್ಲಿಕಾರ್ಜುನ
54. ಆರ್.ನಟರಾಜ್
55. ಟಿ.ಎನ್.ಬಸವರಾಜು
56. ಟಿ.ಎಸ್.ಶೆಟ್ಟಿ ಮಹಾದೇವಯ್ಯ
57. ಮಂಗಳಾ ಬಿ.ಪಿ.ಪರಮಶಿವಯ್ಯ
58. ಎಂ.ಎಸ್.ಮುದ್ರಾಜಪ್ಪ
59. ಗೀತಾ ಸಿ.ಎಚ್.ವಿಜಯಾರಾಧ್ಯ
60. ಮಹಾದೇವಿ ನಾರಾಯಣ ಬೇವಿನಕಟ್ಟಿ
61. ದುಂಡಪ್ಪ ಸಿದ್ಧಪ್ಪ ತವಗಾ
62. ಕುಮಾರಿ ಸುಶೀಲಾ ಶಿವಲಿಂಗ ಸುಣಧಾಳಿ
63. ಚನ್ನ ಬಸು ಸಿದ್ದಪ್ಪ ಕುಂಬಾರೆ, ಸಂಕೇಶ್ವರ

ಬಸವ ಮಂಟಪದಲ್ಲಿ ವಾರದ ದಾಸೋಹಕ್ಕೆ ರೂ. 1500 ಸಲ್ಲಿಸಿದ ಧನ ದಾಸೋಹಿಗಳು

4-11-2001 ಶರಣ. ಎಂ. ಚಿಕ್ಕಪಿಳ್ಳಪ್ಪ, ಬೆಂಗಳೂರು
11-11-2001 ಶರಣೆ. ಅನಿತಾ ಮಹಾಂತೇಶ ಗದ್ದಿ, ಬೆಂಗಳೂರು
18-11-2001 ಶರಣ. ಕಿರಣ ಮರಿಬಸಪ್ಪ ದನದಮನಿ, ಧಾರವಾಡ
25-11-2001 ಶರಣ ಶ್ರೀಶೈಲ ಹಳೇಪಟಿ, ಬೆಂಗಳೂರು.

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ನಿಮ್ಮ ಮೂರ್ತಿಗೊಳಿಸುವೆನಯ್ಯ ಬಸವಣ್ಣ ಅಹಂ ಸೋಹಂ ಎಂಬ ಶಬ್ದವುಳ್ಳನಕ್ಕ.

-ಮಡಿವಾಳ ಮಾಚಿದೇವರು.

ದೊಡ್ಡಬಳ್ಳಾಪುರದಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಬೆಂಗಳೂರು ಜಿಲ್ಲೆಯ ಪ್ರಮುಖ ವ್ಯಾಪಾರ, ಉದ್ಯಮ ಕೇಂದ್ರ, ದೊಡ್ಡಬಳ್ಳಾಪುರ. ರೇಷ್ಮೆ ನೇಯ್ಗೆಗೆ ಸುಪ್ರಸಿದ್ಧವಾಗಿರುವ ದೊಡ್ಡಬಳ್ಳಾಪುರದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಮಾತೆ ಗಂಗಾದೇವಿಯವರ ಪ್ರವಚನವು ದಿ.3-10-2001ರಂದು ಪ್ರಾರಂಭವಾಗಿ ಪ್ರತಿ ದಿನ ಸಂಜೆ 6-30ರಿಂದ 9 ಗಂಟೆಯವರೆಗೆ ಅಖಂಡವಾಗಿ ಅವ್ಯಾಹತವಾಗಿ 40 ದಿವಸಗಳ ಕಾಲ ನಡೆದು ಸೋಮವಾರ ದಿ.12-11-2001ರಂದು ಮಂಗಲಗೊಂಡಿತು. ಪ್ರವಚನದ ಮಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ ನೆರವೇರಿತು. ಸೋಮವಾರ ದಿ.12-11-2001 ರಂದು 15ನೆಯ ಶರಣಮೇಳದ ಪ್ರಚಾರದ ಪ್ರಾರಂಭೋತ್ಸವವನ್ನು ಅಯ್ಯಪ್ಪ ಸ್ವಾಮಿ ದೇವಾಲಯದ ಭವ್ಯವಾದ ಪ್ರಾಂಗಣದಲ್ಲಿ ಏರ್ಪಡಿಸಲಾಗಿತ್ತು. ವಿಶೇಷ ಆಹ್ವಾನಿತರಾಗಿ ಆಗಮಿಸಿದ ಪ್ರಪ್ರಥಮ ಮಹಿಳಾ ಜಗದ್ಗುರು ಮಾತೆ ಮಹಾದೇವಿಯವರಿಗೆ ಭವ್ಯ ಸ್ವಾಗತ ನೀಡಿ, ಉಭಯ ಮಹಿಳಾ ಜಗದ್ಗುರುಗಳನ್ನು ಭವ್ಯವಾದ ಮೆರವಣಿಗೆಯ ಮೂಲಕ ಅಲಂಕೃತ ಕಾರಿನಲ್ಲಿ ವೇದಿಕೆಗೆ ಕರೆ ತರಲಾಯಿತು. ನಗರದ ಗಣ್ಯರು ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದರು. ವೃತ್ತ ಪೋಲೀಸ್ ನಿರೀಕ್ಷಕ ಲೋಕೇಶ್ವರಪ್ಪನವರು ಧ್ವಜಾರೋಹಣ ನೆರವೇರಿಸಿದರು. ಅತ್ಯಂತ ಭಕ್ತಿಪೂರ್ಣ ವಾತಾವರಣದಲ್ಲಿ ವಿಶ್ವಧರ್ಮ ಪ್ರವಚನದ ಸಮಾರೋಪವು ನೆರವೇರಿತು.

- ವರದಿ : ಶಿವಕುಮಾರ ಡಾಕುಳಗೆ

ಶರಣ ಮೇಳಕ್ಕೆ ಬೆಂಗಳೂರು ಬಸವ ಮಂಟಪದಿಂದ ಬಸ್ಸುಗಳ ವ್ಯವಸ್ಥೆ

ಕೂಡಲ ಸಂಗಮದಲ್ಲಿ ಜನವರಿ 11 ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ಐದು ದಿವಸಗಳ ಕಾಲ ಭಾಗಿಗಳಾಗುವ ಶರಣ ಬಂಧುಗಳಿಗೆ ಬೆಂಗಳೂರಿನ ಬಸವ ಮಂಟಪದಿಂದ ಬಸ್ಸುಗಳ ವ್ಯವಸ್ಥೆ ಮಾಡಲಾಗುತ್ತಿದ್ದು ದಿ.10-1-2002ರ ಸಂಜೆಗೆ ಹೊರಟು ಬಸ್ಸು ದಿ. 11-1-2002ರಂದು ಬೆಳಿಗ್ಗೆ ಕೂಡಲ ಸಂಗಮವನ್ನು ತಲುಪುವುದು. ಪುನಃ 15-1-2002ರ ಸಂಜೆ ಅಲ್ಲಿಂದ ಹೊರಟು ದಿ. 16-1-2002ರಂದು ಬೆಳಿಗ್ಗೆ ಬೆಂಗಳೂರು ತಲುಪುವುದು. ಉತ್ತಮ ದರ್ಜೆಯ ಸೂಪರ್ ಡೀಲಕ್ಸ್ ಬಸ್ಸಿನ ವ್ಯವಸ್ಥೆ ಮಾಡಲಾಗುವುದು. ವಿವರಗಳಿಗಾಗಿ ಬಸವ ಮಂಟಪಕ್ಕೆ ಸಂಪರ್ಕಿಸಿರಿ. ಬೆಂಗಳೂರು ಮತ್ತು ಸುತ್ತಮುತ್ತಲಿನ ಜನ ಮೊದಲೇ ಸೀಟುಗಳನ್ನು ಕಾಯ್ದಿರಿಸಿಕೊಳ್ಳಬೇಕು. ಬಸ್ಸಿಗೆ ವೆಯಿಟಿಂಗ್ ಚಾರ್ಜು ಏನೂ ಇಲ್ಲದೆ ಇರುವುದರಿಂದ ಕೇವಲ ಬಸ್ ಛಾರ್ಜು ಮಾತ್ರ ಅನ್ವಯವಾಗುವುದು ಎಂಬುದನ್ನು ಗಮನಕ್ಕೆ ತರಲು ಬಯಸುತ್ತೇವೆ.

ಪೂಜ್ಯ ಶ್ರಿ ಸದ್ಗುರು ಅಲ್ಲಮಪ್ರಭು ಸ್ವಾಮೀಜಿ
ಬಸವ ಮಂಟಪ, 2035, 20ನೇ ಮೇನ್
ರಾಜಾಜಿನಗರ, ಎರಡನೆಯ ಬ್ಲಾಕು, ಬೆಂಗಳೂರು-560010
ದೂರವಾಣಿ : (080) 3325335/3322790



ಗುರು ಬಸವಣ್ಣನವರ ಭಾವಚಿತ್ರ ಅನಾವರಣ : ಪೂಜ್ಯ ಬಸವಕುಮಾರ ಸ್ವಾಮೀಜಿ,ಸಿ.ಪಿ.ಐ ಡಿ.ಡಿ.ಮಾಳಗಿ ನಗರ ಸಭಾ ಸದಸ್ಯ ಶಿವಾನಂದ ಪಾಟೀಲ, ಶಂಕರಗೌಡ ದೇಸಾಯಿ, ಡಾ॥ ಶಿ.ಬಾ.ಪಾಟೀಲ ಶಂಕರಗೌಡ ದೇಸಾಯಿ, ಡಾ.ಶಿ.ಬಾ.ಪಾಟೀಲ ಹಾಗೂ ಗಡಹಿಂಗ್ಲಜ್‌ನ ಶರಣ ಎಂ.ಆರ್.ನೇವಡೆ.



ಪೂಜ್ಯ ಬಸವ ಕುಮಾರ ಸ್ವಾಮೀಜಿಯವರಿಂದ ಅಂಕಲಿ ರೋಡಲ್ಲಿ ಬಸವ ಭಾವಚಿತ್ರ ಅನಾವರಣ, ಬಸವ ಧ್ವಜಾರೋಹಣ. ಎಡದಿಂದ ಬಲಕ್ಕೆ ಕಾಡಪ್ಪ ಬಸ್ತವಾಡಿ, ದುಂಡಪ್ಪ ಗುಗ್ಗರೆ, ಶಂಕರ ಬಂಗಾರಿ ಶಂಕರಗೌಡ ದೇಸಾಯಿ, ಎಸ್.ಬಿ.ಜೋಡಳ್ಳಿ, ಸಿ.ಪಿ.ಐ ಡಿ.ಡಿ.ಮಾಳಗಿ ಹಾಗೂ ಡಾ॥ ಶಿ.ಬಾ.ಪಾಟೀಲ

ಕಲ್ಯಾಣ ಕಿರಣ CPMG/KA/BGW-50 ಡಿಸೆಂಬರ್-2001
R.No. 19980/70 WPP (W) -17



ತುಮಕೂರಿನಲ್ಲಿ ದಿ. 14-11-2001ರಂದು ಶರಣ ಮೇಳ ಪ್ರಚಾರ ಸಭೆ. ಎಡದಿಂದ ಬಲಕ್ಕೆ : ಟಿ.ಎ.ದಾಸಪ್ಪ, ಪೂಜ್ಯ ಗಂಗಾ ಮಾತಾಜಿ, ಮಾತೆ ಬಸವರತ್ನಾದೇವಿ, ಮೇದಾರ ಕೇತಯ್ಯ ಸಂಘದ ಉಪಾಧ್ಯಕ್ಷೆ ಲೀಲಾವತಿ ರಾಮಕೃಷ್ಣ,ಜಿ.ಎನ್.ಮಧುಡಯ್ಯ, ವೆಂಕಟೇಶ್ ಲಿಂಗಾಯತ್